ಅಭಿಪ್ರಾಯವನ್ನು ಅಷ್ಟು ಲಘುವಾಗಿ ತಿಳಿಯದೆ ತಮ್ಮ ಇಚ್ಛೆಯಿದ್ದಂತೆ ಅದನ್ನು ಇನ್ನೊಮ್ಮೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮ್ಯಾನೇಜಿಂಗ್ ಡೈರೆಕ್ಟರ್ ಏನು ಹೇಳಿದರೂ ಅದನ್ನು ನಂಬಬಾರದು ಅದನ್ನು ಬರವಣಿಗೆಯಲ್ಲಿ ಕೊಡಬೇಕೆಂದು ಮಾನ್ಯ ಮಂತ್ರಿಗಳು ಹೇಳಿದರು. ವಾಸ್ತವವಾಗಿ ಹೇಳುವುದಾದರೆ ಇವರು ಶಿವಮೊಗ್ಗಕ್ಕೆ ಹೋದಾಗ ಕೇರಳಕ್ಕೆ ಎಷ್ಟು ಅಕ್ಕಿಯನ್ನು ಬಿಡುಗಡೆ ಮಾಡಿದರೆಂಬುದನ್ನು ಹೇಳಲಿ. ಮ್ಯಾನೇಜಿಂಗ್ ಡೈರೆಕ್ಟರ್ ಅಲ್ಲಿಗೆ ಹೋದಾಗ ಏನಾದರೂ ಬೇರೆ ಟೆಂಡರ್ ಕೊಟ್ಟಿದ್ದಾರೆಯೇ ? ರಾಜ್ಯದ ಹೊರಗಡೆ ಅಕ್ಕಿಯನ್ನು ತೆಗೆದುಕೊಂಡು ಹೋಗಲು ಏನಾದರೂ ಷರತ್ತುಗಳನ್ನು ಆದರಲ್ಲಿ ಹಾಕಿದ್ದರೇ ? ಟೆಂಡರ್ ನೋಟಿಫಿಕೇಷನ್ ಷರತ್ತುಗಳ ಪ್ರಕಾರ ಟೆಂಡರ್ ಹಾಕಿದ್ದಾರೆಯೇ? ತದ್ವಿರುದ್ಧವಾಗಿ ಟೆಂಡರನ್ನು ಆ ರೀತಿ ಹಾಕಿದ್ದಾರೆ, ಅರ್ಜಿಯನ್ನು ತಿರಸ್ಕಾರ ಮಾಡಿದ್ದಾರೆಂಬ ಸಂಶಯ ಬರುವುದಕ್ಕೆ ಏನಾದರೂ ಕಾರಣವಿದೆಯೇ? ಮಂತ್ರಿಗಳು ಅವರನ್ನು ಖುದ್ದಾಗಿ ಕರೆದು ಕೇಳಲಿ ಆಗ ಅವರು ಅಲ್ಲಿ ನಡೆದುದನ್ನು ಹೇಳುತ್ತಾರೆ.

ಶ್ರೀ ಕೆ. ಎಚ್. ಪಾಟೀಲ್,— ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು, ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ದೇವೇಗೌಡರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಸರ್ಕಾರದಒಪ್ಪಂದದಂತೆ ಕಾನೂನಿಗನುಗುಣವಾಗಿತೀರ್ಮಾನ ಕೈಗೊಳ್ಳಲು ಅದು ಬರವಣಿಗೆಯಲ್ಲಿ ಆಗಬೇಕು. ಅದು ಕಾಗದದಲ್ಲಿ ಇಲ್ಲದೇ I have assured ಎಂಬುದಾಗಿ ಹೇಳಿದರೆ ಅದು ಸಾಧ್ಯವಾಗುವುದಿಲ್ಲ. ಆಗ ನಾನು ಮಂತ್ರಿಯಾಗಿ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ, ಇದರ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಇನ್ನೊಮ್ಮೆ ಪರಿಶೀಲನೆ ಮಾಡುತ್ತೇನೆ. ಸಾಧ್ಯವಾದರೆ ನಿಮ್ಮನ್ನೂ ಕರೆಸಿ ಮುಖ್ಯ ಮಂತ್ರಿಯವರ ಜೊತೆಯಲ್ಲಿ ಮಾತನಾಡಿ ಈ ವಿಚಾರವನ್ನು ನಿಕಾಲ್ ಮಾಡೋಣ. ಸುಮ್ಮನೆ ಬಾಯಿ ಮಾತಿನಲ್ಲಿ ಹೇಳಿದರೆ ಇದರ ಬಗ್ಗೆ ಏನೂ ಮಾಡುವುದಕ್ಕೂ ಆಗುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಟೆಂಡರ್ ಕೊಡುವಾಗಲೇ ಬರೆದಿದ್ದಾರೆ. ನಮ್ಮ ನೆರೆಯ ರಾಜ್ಯಕ್ಕೆ ತೆಗೆದುಕೊಂಡು ಹೋಗಬೇಕಾದರೆ ಈ ರೇಟನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಈ ಅಂಶದ ಮೇಲೆ ಪರಿಶೀಲನೆ ಮಾಡಬೇಕೆಂದು ಹೇಳಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಸರ್ಕಾರದ ಗೋಡೌನ್‌ಗಳು ಇದ್ದರೂ ಕೂಡ ಬತ್ತ ಎಲ್ಲೆಲ್ಲಿ ಎತ್ತಿದ್ದರೋ ಅಲ್ಲಿಯೇ ಇತ್ತು.

2.00 P.M.

ಅಧ್ಯಕ್ಷರು.— ರಾಜ್ಯಪಾಲರ ಭಾಷಣದ ವಂದನೆಯ ಮೇಲಿನ ಚರ್ಚೆ, ಈಗ ಮುಂದುವರಿಯುತ್ತದೆ.

Motion of Thanks to the Governor's Address Debate continued.

ಶ್ರೀ ಎಚ್. ಡಿ, ದೇವೇಗೌಡ.—ಮಾನ್ಯ ಸಭಾಧ್ಯಕ್ಷಣಿಯವರೇ, ಈ ಸಭೆಯ ಮುಂದೆ ರಾಜ್ಯಪಾಲರು ಮಾಡಿದ ಭಾಷಣದ ಬಗ್ಗೆ ಒಂದು ನಿರ್ಣಯವನ್ನು ನನ್ನ ಮಿತ್ರರು ಮತ್ತು ನಮ್ಮ ಈ ಮನೆಯ ಹಿರಿಯ ಸದ್ಯಸರಾದಂತಹ ಮಾನ್ಯ ಬಸವಲಿಂಗಪ್ಪನವರು ಮಂಡಿಸಿದ್ದಾರೆ. ಅದನ್ನು ಸೋದರಿ ಶ್ರೀಮತಿ ಮಡಿಮಾನ್‌ರವರು ಅನುಮೋದನೆ ಮಾಡಿದ್ದಾರೆ. ಮೊದಲನೆಯದಾಗಿ ಈ ಸಭೆಯಲ್ಲಿ ಇವತ್ತು ಈ ರಾಷ್ಟ್ರದ ಒಬ್ಬ ಗೌರವಾನ್ವಿತ ಪ್ರಜೆಯಾಗಿ ಜನತೆಯ ಪ್ರತಿನಿಧಿಯಾಗಿ ಕೆಲಸಮಾಡತಕ್ಕಂಥ ಅವಕಾಶವನ್ನು ರಾಷ್ಟ್ರದ ಜನತೆ ನಮಗೆ ದೊರಕಿಸಿಕೊಟ್ಟಿದ್ದಾರೆ. ಅವರಿಗೆ ನನ್ನ ಧನ್ಯವಾದಗಳನ್ನು ನನ್ನ ವೈಯಕ್ತಿಕವಾಗಿ ಮತ್ತು ನನ್ನ ಪಕ್ಷದವತಿಯಿಂದಲೂ ಸಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಒಬ್ಬ ಗೌರವಾನ್ವಿತ ಪ್ರಜೆಯಾಗಿ ಜನತೆಯ ಪ್ರತಿನಿಧಿಯಾಗಿ ಇಲ್ಲಿ ಕುಳಿತು ಕೆಲಸಮಾಡಲಿಕ್ಕೆ ಅವಕಾಶ ಮಾಡಿಕೊಟ್ಟ ರಾಷ್ಟ್ರದ ಜನತೆಯನ್ನು ಸ್ಮರಿಸುತ್ತೇನೆ ಜೊತೆಗೆ ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಸಭಾಧ್ಯಕ್ಷಣಿಯವರೇ ಕಳೆದ ದಶಕದಲ್ಲಿ ಅಂದರೆ 1970 ರಿಂದ ಈಚೆಗೆ ಬಹಳ ವಿಕ್ರಮಗಳನ್ನು ಸಾಧಿಸಿದ್ದೇವೆ, ಇದರಲ್ಲಿ ರಾಷ್ಟ್ರ

ದಲ್ಲಿ ಕೆಲವು ಆಡಳಿತದಲ್ಲಿಯೂ ಕೂಡ ಪ್ರವೇಶಿಸಿದ ಸಂದರ್ಭಗಳು ಇವೆಯೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅವುಗಳಲ್ಲಿ ರಾಜ್ಯಪಾಲರ ನೇಮಕಗಳು ಕೂಡ ಒಂದು ಹೇಳಿದರೆ ಯಾರೂ ನನ್ನನ್ನು ತಪ್ಪು ಭಾವಿಸಬಾರದು. ರಾಜ್ಯಪಾಲರನ್ನು ನೇಮಕ ಮಾಡತಕ್ಕಂಥ ಕಾಲದಲ್ಲಿ ಚಾರಿತ್ರಿಕವಾಗಿ ಅವರು ಬಗ್ಗೆ ಕೆಟ್ಟ ಅಭಿಪ್ರಾಯ ಮತ್ತು ಇರತಕ್ಕಂಥ ಜನಗಳನ್ನು ಅಥವಾ ರಾಜಕೀಯದಲಿ ಇದ್ದು ರಾಜಕ್ಷೀಯದಲ್ಲಿ ದುಮಾಕಿ ಅಥವಾ ಮುಳುಗಿ ನಿಂದನೆಗೆ ಒಳಗಾಗಿರುವವರನ್ನು ಅಥವಾ ನ್ಯಾಯಾಲಯದ ನಿಂದನೆಗೆ ಒಳಗಾದವರನ್ನು ರಾಜ್ಯಪಾಲರನ್ನಾಗಿ ನೇಮಕಮಾಡತಕ್ಕಂಥ ಕೆಟ್ಟ ಸಂಪ್ರದಾಯ ಈ ರಾಷ್ಟ್ರದಲ್ಲಿ ಬಂದಿದೆ. ಇದು ಒಂದು ದುರ್ದೈವದ ಸಂಗತಿ ಎಂದು ಹೇಳಬೇಕಾಗಿದೆ- ನಾನು ಯಾರ ಹೆಸರನ್ನು ಹೇಳಲಿಕ್ಕೆ ಹೋಗುವುದಿಲ್ಲ, ಆದರ ಅವಶ್ಯಕತೆಯೂ ಇಲ್ಲ. ಯಾವ ಒಬ್ಬ ವ್ಯಕ್ತಿಯ ಬಗ್ಗೆ ಹೇಳುವುದಕ್ಕೂ ಕೂಡ ನಾನು ಇಷ್ಟಪಡುವುದಿಲ್ಲ. ಅದು ಕೆಟ್ಟ ಸಂಪ್ರದಾಯವೆಂದು ಮಾತ್ರ ಹೇಳುತ್ತೇನೆ. ಹಿಂದೆ ರಾಜಕಾರಿಣಿಗಳನ್ನು ನೇಮಕ ಮಾಡುತ್ತಿದ್ದರು. ಆದರೆ ರಾಜಕಾರಿಣಿಗಳು ಈ ಸ್ಥಾನವನ್ನು ಅಲಂಕರಿಸುವುದಕ್ಕೆ ಅನರ್ಹರು ಎಂದು ಹೇಳುವುದಿಲ್ಲ. ಆದರೆ ಅವರು ಚಾರಿತ್ರ್ಯಹೀನರು, ನ್ಯಾಯಾಲಯ ನಿಂದನೆಗೆ ಒಳಗಾದವರನ್ನು ಇಂತಹ ಸ್ಥಾನಗಳಿಗೆ ನೇಮಕ ಮಾಡುವಾಗ ಬಹಳ ಎಚ್ಚರ ವಹಿಸಬೇಕೆಂದು ನನ್ನ ಒಂದು ಅಭಿಪ್ರಾಯ ಅನ್ನತಕ್ಕಂಥಾದ್ದನ್ನು ಈ ಸಂಧರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಈ ಸ್ಥಾನಕ್ಕೆ ಯಾವ ಗೌರವ ಸಲ್ಲಬೇಕು ಆ ಗೌರವವನ್ನು ಸಲ್ಲಿಸತಕ್ಕಂಥಾದ್ದು ಈ ಸ್ಥಾನವನ್ನು ಅಲಂಕರಿಸಿದಂಥಾವರ ಬಗ್ಗೆ ನಮಗೆ ಹೃದಯ ಪರಿವರ್ತನೆಯಾಗುವಂತಹ ವ್ಯಕ್ತಿಗಳಾಗಬೇಕು. ಅಂತಹ ವ್ಯಕ್ತಿಗಳಿಗೆ ಈ ಗುಣ ಮೌಲ್ಯಗಳು ಇರತಕ್ಕಂಥಾದ್ದು ಯೋಗ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಈ ಸ್ಥಾನದ ಮಹತ್ವವನ್ನು ಇವತ್ತು ಕಡಿಮೆ ಮಾಡತಕ್ಕಂಥಾದ್ದರಲ್ಲಿ ಯಾರೇ ತಪ್ಪನ್ನು ಮಾಡಿದ್ದರೂ ಅದು ಅಕ್ಷಮ್ಯ ಅಪರಾಧ ಅನ್ನತಕ್ಕಂಥಾದ್ದು ಎಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಭಾಧ್ಯಕ್ಷಣಿಯವರೇ, ಕೆಲವು ರಾಜ್ಯಪಾಲರು ಚುನಾವಣಾ ನಿಧಿ ಸಂಗ್ರಹಕ್ಕೆ ಪ್ರಯತ್ನ ಮಾಡತಕ್ಕಂಥಾ ಕಾರ್ಯಕ್ಕೆ ಹೊಣೆಗಾರಿಕೆ ಹೊತ್ತಂಥ ಕೆಲವು ರಾಜ್ಯಪಾಲರುಗಳು ಟಿಕೆಟ್‌ಗಳನ್ನು ವಿತರಣೆಮಾಡುವುದು ಮತ್ತು ರಾಜಕಾರಣದಲ್ಲಿ ಪ್ರವೇಶಮಾಡಿರತಕ್ಕಂಥಾದ್ದು ನೋಡಿದರೆ ಈ ನನ್ನ 15 ವರ್ಷಗಳ ಕಾಲ ಈ ಮನೆಯಲ್ಲಿ ಕೆಲಸಮಾಡಿಕೊಂಡು ಬಂದಿದ್ದೇನೆ.

SRI K. H. PATIL:—Madam Speaker, We are here to uphold democratic norms and principles. If any Rajyapal is like that, then he will have to be hauled up in the Parliament by impeaching him, This is not the forum. We have to maintain good tradition. I expect verymuch from the hon'ble the Leader of the Opposition. He is not to criticise any of the Rajyapals.

SRI H. D. DEVE GOWDA,—I know I am well within my limits. I would like to make myself clear. ನಾನು ಒಬ್ಬ ವ್ಯಕ್ತಿಯ ಹೆಸರನ್ನು ಹೇಳಿ ಮಾತನಾಡಬಾರದು ಎಂದು ನನಗೆ ಗೊತ್ತಿದೆ. ನಾನು ಹೇಳುವುದು ಈ ಒಂದು ಕೆಟ್ಟ ಸಂಪ್ರದಾಯವನ್ನು ತೆಗೆಯಲೇಬೇಕು ಎನ್ನುವ ದೃಷ್ಟಿಯಿಂದ, ಈಗ ಈ ಕೆಟ್ಟ ಸಂಪ್ರದಾಯವನ್ನು ತೆಗೆಯುವುದಕ್ಕೆ ಸಾಧ್ಯವಿರುವ ಸಂದರ್ಭ ಬಂದಿರುವುದರಿಂದ ಅವರ ಗಮನವನ್ನು ಸೆಳೆಯುವುದಕ್ಕಾಗಿ ಈ ವಿಷಯವನ್ನು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ ಇವತ್ತು ಮಾನ್ಯ ಸಚಿವರಾದ ಪಾಟೀಲರು ಇದರ ಬಗ್ಗೆ ಒಂದು ಸತ್‌ಸಂಪ್ರದಾಯವನ್ನು ಪಾಲಿಸಬೇಕೆಂದು ಹೇಳಿದರು. ನಾನು ಅವರಿಗೆ ತಿಳಿಸುವುದು ಇಷ್ಟೇ. ನಾನು ಯಾವುದೇ ವ್ಯಕ್ತಿಯ ನಿಂದನೆಯನ್ನು ಮಾಡುತ್ತಿಲ್ಲ. ಕಳೆದ 15 ವರ್ಷಗಳಿಂದಲೂ ಈ ಮನೆ ಸತ್‌ಸಂಪ್ರದಾಯವನ್ನು ಕಾಪಾಡಬೇಕೆನ್ನುವುದೇ ನನ್ನ ಅಭಿಪ್ರಾಯವು ಕೂಡ. ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಈ ಸಭೆಯ ಕಾರ್ಯಕಲಾಪಗಳನ್ನು ಸಾಮಾನ್ಯವಾಗಿ ಚರ್ಚೆ ಮಾಡತಕ್ಕಂಥ ಕಾಲದಲ್ಲಿ ರಾಜಭವನದಲ್ಲಿ ದುಂದುವೆಚ್ಚ ನಡೆಯುತಕ್ಕದ್ದರ ಬಗ್ಗೆ ಅನೇಕ ಸಾರಿ ಸರ್ಕಾರದ ಗಮನಕ್ಕೆ ತರುತ್ತಿದ್ದರೂ ಅದನ್ನು ಗಮನಕ್ಕೆ ತೆಗೆದುಕೊಳ್ಳುವ ನಮ್ಮ ಹಕ್ಕನ್ನು ಮೊಟಕುಗೊಳಿಸುತ್ತಿದ್ದೀರಿ ?

ಸನ್ಮಾನ್ಯ ಸಭಾಧ್ಯಕ್ಷಣೀಯವರೇ ಇವತ್ತು ನಮ್ಮ ದೇಶದಲ್ಲಿ ಒದಗಿರತಕ್ಕಂಥ ಒಂದು ರಾಜಕೀಯ ಪರಿಸ್ಥಿತಿಯನ್ನು ಅವಲೋಕನ ಮಾಡಿದಾಗ ಕೆಲವು ಮಾತುಗಳನ್ನು ನಾನು ಹೇಳದೆ ಗತ್ಯಂತರವಿಲ್ಲವೆಂದು ಒಂದು ವಿವರಣೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ತಮಗೆ ವಿವರಣೆ ಕೊಡತಕ್ಕಂಥ ಕಾಲದಲ್ಲಿ ಅದಕ್ಕೆ ಇರತಕ್ಕಂಥ ಕಾರಣಗಳನ್ನೂ ಕೂಡ ತಮಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. 197.ರಲ್ಲಿ ರಾಜ್ಯಪಾಲರು ಕೆಲಸ ಮಾಡತಕ್ಕಂಥ ಕಾಲದಲ್ಲೂ ಒಬ್ಬ ವ್ಯಕ್ತಿಯ ಪ್ರತಿನಿಧಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗಿದೆ ಮತ್ತು ಪಕ್ಷದ ಪ್ರತಿನಿಧಿಯಾಗಿ ಕೆಲವು ಮಾಡುವುದಕ್ಕೆ ಸಾಧ್ಯವಾಗಿದೆ ಎಂದು ಈ ಸಭೆಯ ಗಮನವನ್ನು ಸೆಳೆಯುವುದಕ್ಕೆ ಇಷ್ಟ ಪಡುತ್ತೇನೆ. 1972ರ ರಾಜ್ಯಪಾಲರ ಭಾಷಣವನ್ನು ನಾವು ತೆಗೆದು ನೋಡಿದಾಗ, ಅದರಲ್ಲಿ ''ನಮ್ಮ ನೆಚ್ಚಿನ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರ ಸ್ಫೂರ್ತಿದಾಯಕ ನಾಯಕತ್ವದಲ್ಲಿ''. ಎಂದು ಇದೆ ಆದರೆ ಈಗ ನಮ್ಮ ರಾಜ್ಯಪಾಲರಿಗೆ ಈಗಿನ ಹೊಸ ಪ್ರಧಾನ ಮಂತ್ರಿಯವರ ಜ್ಞಾಪಕ ಬರಲಿಲ್ಲವೇ ? ಇದಕ್ಕೆ ನಾನು ಹೇಳಿದ್ದು ಒಬ್ಬ ವ್ಯಕ್ತಿಯ ಪ್ರತಿನಿಧಿಯಲ್ಲ, ಆ ಸ್ಥಾನಕ್ಕೆ ಕಳಂಕ ತರತಕ್ಕಂಥ ರೀತಿಯಲ್ಲಿ ಕೆಲಸ ಮಾಡುವುದೇ ಆದರೆ. ಆದರಿಂದ ಅವರಿಗೆ ಲಕ್ಷಣ, ಶೋಭೆ ತರತಕ್ಕಂಥದ್ದು ಅಲ್ಲ ಎನ್ನುವುದನ್ನು ತಾವು ಅರಿತುಕೊಳ್ಳಬೇಕು. ಇನ್ನು 1976ರ ಭಾಷಣದಲ್ಲಿ ನಮಗೆ ಆದೇಶ ಕೊಟ್ಟಿದ್ದಾರೆ. ಇದನ್ನು ನಾನು ಮುಂದೆ ಉದಹರಿಸುತ್ತೇನೆ. ಅಲ್ಲೂ ಕೂಡ ಇದೇ ಮಾತನ್ನು ಹೇಳಿದ್ದಾರೆ. ಪುಟ 2 ರಲ್ಲಿ ಹೇಳಿರುವಂಥಾದ್ದನ್ನೆಲ್ಲಾ ಪೂರ್ಣವಾಗಿ ನಾನು ಓದುವುದಕ್ಕೆ ಹೋಗುವುದಿಲ್ಲ. ಆದುದರಿಂದ ಇವತ್ತು ನಾನು ಪೂರ್ವ ಪೀಠಿಕೆಯಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಕೇವಲ ಒಬ್ಬ ವ್ಯಕ್ತಿಯ ನಿಂದನೆ ಮಾಡಬೇಕು, ಆ ಸ್ಥಾನಕ್ಕೆ ಅಗೌರವ ಸೂಚಿಸಬೇಕು ಎನ್ನುವಂತಥಾ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿಲ್ಲ. ರಾಜ್ಯಪಾಲರು ಇವತ್ತು ರಾಜ್ಯದ ರಾಷ್ಟ್ರದ ಹಿತಕ್ಕಾಗಿ ಕೆಲಸ ಮಾಡಬೇಕೇ ಹೊರತು ಕೇವಲ ಒಬ್ಬ ವ್ಯಕ್ತಿಯ, ಒಂದು ಪಕ್ಷದ ಹಿತದೃಷ್ಟಿಯಿಂದ ಕೆಲಸ ಮಾಡತಕ್ಕಂಥಾದ್ದು ಸಾಧುವಲ್ಲ, ಆ ದಿಶೆಯಲ್ಲಿ ಅವರು ಮುಂದುವರಿಯಬಾರದು ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ರಾಜ್ಯಪಾಲರು ಈ ಸಾರಿಯೂ ಭಾಷಣ ಮಾಡಿದ್ದಾರೆ. ಚುನಾವಣೆ ಬಗ್ಗೆ ಕೂಡ ಒಂದು ಮಾತನ್ನು ಹೇಳಿದ್ದಾರೆ; ಆದರೆ ಅದನ್ನು ಮುಂದುವರಿಸಿಲ್ಲ ಅಷ್ಟಕ್ಕೇ ಬಿಟ್ಟು ಬಿಟ್ಟರು ಪಾಪ! ಈ ಸಾರಿಯ ರಾಜ್ಯಪಾಲರ ಭಾಷಣದಲ್ಲಿ ಚುನಾವಣೆಯ ಬಗ್ಗೆ ಹೀಗೆ ಹೇಳಿದ್ದಾರೆ. ''ನೀವು ಇದೀಗ ಚುನಾವಣಾ ರಂಗದಿಂದ ಮರಳಿ ಬಂದಿದ್ದೀರಿ'' ಅಲ್ಲಿಂದ ಮುಂದಕ್ಕೆ ಹೇಳುವುದಕ್ಕೆ ಅವರಿಗೆ ಸ್ವಲ್ಪ ಕಷ್ಟವಾಗಿದೆ.

ಮಾನ್ಯ ಸಭಾಧ್ಯಕ್ಷಣೀಯವರೇ, ಕಳೆದ ವರ್ಷವೂ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ್ದಾರೆ ನನ್ನನ್ನು ಆಗ ಸರ್ಕಾರದ ಅತಿಥಿಯಾಗಿ ಅವರ ಗೃಹದಲ್ಲಿಟ್ಟಿದ್ದರು. ಸೆರೆಮನೆಯಲ್ಲಿದ್ದಾಗ ಅವರ ಭಾಷಣವನ್ನು ಕೇಳಿದ್ದೇನೆ. ಆಗಲೂ ಮಾನ್ಯ ರಾಜ್ಯಪಾಲರು ಈ ರೀತಿ ಹೇಳಿದ್ದಾರ," ಕಳೆದ ವರ್ಷ ನನಗಿಂತ ಮುಂಚೆ ರಾಜ್ಯಪಾಲರಾಗಿದ್ದ ಶ್ರೀಮಾನ್ ಮೋಹನ್‌ಲಾಲ್ ಸುಖಾಡಿಯ ಅವರು ತಮ್ಮೆಲ್ಲರನ್ನೂ ಸಂಭೋಧಿಸಿ ಮಾತನಾಡುವಾಗ 1975ರಲ್ಲಿ ಒಳತಿಗಾಗಿ ಬದಲಾವಣೆ ಆಗುವುದೆಂದು ಆಶಾಭಾವನೆಯನ್ನು ವ್ಯಕ್ತಪಡಿಸಿದ್ದರು. ಅಂಥ ಬದಲಾವಣೆ ಈಗ ಆಗಿದೆ' ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಘೋಷಿಸಿದ್ದೇವೆ. ರಾಷ್ಟ್ರದ ಅಭಿವೃದ್ಧಿಗಾಗಿ 20 ಅಂಶಗಳ ಆರ್ಥಿಕ ಕಾರ್ಯಕ್ರಮವನ್ನು ಜಾರಿಗೆ ತಂದಿರುವ ನಮ್ಮ ಪ್ರಧಾನಿಯವರ ಚೈತನ್ಯ ಪೂರ್ಣ ನಾಯಕತ್ವವೇ ಇದಕ್ಕೆ ಕಾರಣವೆಂದು ನಾನು ಹೇಳಬಯಸುತ್ತೇನೆ''. ಹಾಗಾದರೆ ಒಳತಿಗಾಗಿ ಬದಲಾವಣೆ ಯಾವುದು? ಈ ಸದನದಲ್ಲಿ ಸರ್ವೇ ಸಾಮಾನ್ಯವಾಗಿ ಕೆಲಸ ಮಾಡಲಿಕ್ಕೂ ಕೂಡ ಅವಕಾಶವಿಲ್ಲ, ಅಂಥಾದರಲ್ಲಿ ಒಳತಿಗಾಗಿ ಬದಲಾವಣೆ ಎಂದು ಹೇಳಿದರು ಈ ಸದನದಲ್ಲಿ ಜನತೆಯ ಪ್ರತಿನಿಧಿಗಳಾಗಿ ಬಂದಂಥ ಸದಸ್ಯರುಗಳು ತಮ್ಮ ಕೆಲಸವನ್ನು ನಿರ್ಭಯದಿಂದ, ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡಲಿಕ್ಕೂ ಕೂಡ ಅಧಿಕಾರವಿಲ್ಲ, ಅವರ ಅಧಿಕಾರವನ್ನು ಮೊಟಕು ಮಾಡತಕ್ಕಂಥದ್ದು ರಾಷ್ಟ್ರದ ಒಳತಿಗಾಗಿ ಅದಂಥ ಬದಲಾಣೆಯೇ ? ಇದು ಅಷ್ಟೇ ಅಲ್ಲಾ ಸರ್ಕಾರ ಜನತೆಯ ಪ್ರತಿನಿಧಿಯಾಗಿ ಕೆಲಸ ಮಾಡತಕ್ಕಂಥ ಕಾಲದಲ್ಲಿ ಅವರ ತಪ್ಪು ನೆಪ್ಪುಗಳನ್ನು ಜನತೆಯ ಮುಂದೆ ಇಡಲಿಕ್ಕೂ ಕೂಡ ಸಾಧ್ಯವಿಲ್ಲ. ಇದು ಒಳತಿಗಾಗಿ ಅದಂಥಾ ಬದಲಾವಣೆ,

SRI D. B. KALMANKAR.—When duly constituted Governments were functioning in Gujarat and Bihar, what were the reasons for the agitation to dissolve those Governments?

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮ ಮಾಜಿ ಪ್ರಧಾನ ಮಂತ್ರಿಯವರು ಕೇಳಿದರೆ ಅವರೇ ಉತ್ತರ ಹೇಳುತ್ತಾರೆ. ಕೇರಳ ವಿಧಾನ ಸಭೆಯನ್ನು ವಿಸರ್ಜನೆ ಮಾಡುವುದಕ್ಕೆ ಕಾರಣವೇನು ಎಂದು ನಿಮ್ಮ ಮಾಜಿ ಪ್ರಧಾನ ಮಂತ್ರಿಯವರನ್ನೇ ಕೇಳಿದರೆ ಅವರೇ ಉತ್ತರ ಹೇಳುತ್ತಾರೆ. ನಾನು ಬೇಕಾದರೆ ಅದರ ಬಗ್ಗೆ ವಿವರಣೆಯನ್ನು ಕೊಡುತ್ತೇನೆ, ನಾನು ತಪ್ಪಿಸಿ ಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಹಾರಿಕೆ ಉತ್ತರ ಕೊಡಬೇಕೆಂದು ಹೇಳಿ ನಾನು ಮಾತನಾಡುತ್ತಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಮೊನ್ನೆ ಮೊನ್ನೆ ಕೂಡ ತಮಿಳುನಾಡಿನಲ್ಲಿ ಶ್ರೀ ಕರುಣಾನಿಧಿಯವರನ್ನು ಇಳಿಸಿದಿರಲ್ಲಾ ಅದು ಏತಕ್ಕೆ ?

ಶ್ರೀ ಎಚ್. ಡಿ. ದೇವೇಗೌಡ,—ಆದುದರಿಂದ ಮಾನ್ಯ ಸ್ನೇಹಿತರು ನಾನು ಹೇಳುವುದನ್ನು ದಯಮಾಡಿ ಸಾವಧಾನದಿಂದ ಕೇಳಬೇಕು. ಕಳೆದ 19 ತಿಂಗಳುಗಳಲ್ಲಿ ಎಷ್ಟೋ ಮಾರ್ಪಾಡು ಆಗಿದೆ ಎನ್ನುವುದರ ಬಗ್ಗೆ ನಾನು ಹೇಳುತ್ತಿದ್ದೇನೆ ''ಬದಲಾವಣೆ ಒಳತಿಗಾಗಿ '' ಎಂದು ಹೇಳಿದಂಥ ರಾಜ್ಯಪಾಲರು ಇದನ್ನು ಮರೆತಿದ್ದಾರೆ. ಅವರ ಭಾಷಣದಲ್ಲಿ ಇದನ್ನು ಸಮರ್ಥನೆ ಮಾಡುತ್ತಿಲ್ಲ. ನಾನು ಇವತ್ತು ಅವರ ಬಗ್ಗೆ ಆರೋಪಣೆ ಮಾಡಬೇಕು ಎಂದು ಹೇಳುತ್ತಿಲ್ಲ. ಅವರಿಗೆ ಕಳೆದ ವರ್ಷ ಮಾಡಿದಂಥ ಅವರ ಭಾಷಣವೇ ಮರೆತು ಹೋಗಿದೆ, ಒಳತಿಗಾಗಿ ಬದಲಾವಣೆ ಎನ್ನತಕ್ಕಂಥಾದ್ದೇ ಮರೆತು ಹೋಗಿದೆ! ನಾನು ಹೇಳುತ್ತಿದ್ದೇ ಈ ಸದನದಲ್ಲಿ ನಡೆಯುತಕ್ಕ ಕಾರ್ಯಕಲಾಪಗಳು ಕೂಡ, ಯಾರು ಈ ಸದನದ ಸದಸ್ಯರುಗಳು ಏನು ಕಲಸ ಮಾಡುತ್ತಿದ್ದಾರೆ ಎನ್ನುವುದನ್ನೂ ಕೂಡ ಈ ರಾಷ್ಟ್ರದ ಜನ ತಿಳಿಯುವುದಕ್ಕೆ ಸಾಧ್ಯವಾಗಿರಲಿಲ್ಲ ಇದು 'ಒಳತಿಗಾಗಿ'. ಬದಲಾವಣೆ, ಇದು ಅಷ್ಟೇ ಅಲ್ಲಾ ವ್ಯಕ್ತಿ ಸ್ವಾತಂತ್ರ್ಯವನ್ನು ಪಡೆದಂಥ ಒಬ್ಬ ಪ್ರಜೆ ಸ್ವತಂತ್ರನಾಗಿ ಬಾಳತಕ್ಕಂಥಾ ಸ್ಥಿತಿಯಲ್ಲ ಇರಲಿಲ್ಲ—ಇದು ರಾಷ್ಟ್ರದ ಒಳಿತಿಗಾಗಿ ಬದಲಾವಣೆ ಇವತ್ತು ಪಾಪ ಮಾನ್ಯ ರಾಜ್ಯಪಾಲರು ಮರೆತಿದ್ದಾರೆ. ಮಾನ್ಯ ಸಭಾಧ್ಯಕ್ಷಣೀಯವರೇ ನಾನು ಇದನ್ನು ಬಹಳ ನೊಂದು ಹೇಳಬೇಕಾಗುತ್ತದೆ. 1976ರಲ್ಲಿ ಈ ಸಭೆಯಲ್ಲ ಭಾಷಣ ಮಾಡವಾಗ 20 ಅಂಶಗಳ ಕಾರ್ಯಕ್ರಮಗಳ ಬಗ್ಗೆ ಹೇಳಿರತಕ್ಕಂಥ ರಾಜ್ಯಪಾಲರು ಇವತ್ತು 25 ಅಂಶಗಳ ಕಾರ್ಯಕ್ರಮಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಕೇಳಬೇಕಾಗುತ್ತದೆ—ರಾಜ್ಯಪಾಲರು ಒಬ್ಬ ವ್ಯಕ್ತಿಯ ಪ್ರತಿನಿಧಿಯೋ ? ಜನತೆಯ ಪ್ರತಿನಿಧಿಯೋ ಎನ್ನುವುದನ್ನು ಕೇಳಬೇಕಾಗುತ್ತದೆ. ಬಹುಶಃ ಇದರಿಂದ ಈ ಸಭೆಯಲ್ಲಿರತಕ್ಕಂಥ ಸಹೋದ್ಯೋಗಿಗಳು ಇದನ್ನು ತಪ್ಪು ಎಂದು ತಿಳಿದುಕೊಳ್ಳುವುದಿಲ್ಲವೆಂದು ತಿಳಿದು ಕೊಂಡಿದ್ದೇನೆ. ಇದನ್ನು ಪೂರ್ವ ಪೀಠಿಕೆಯಾಗಿ ಹೇಳಿದ್ದೇನೆ. ರಾಜ್ಯಪಾಲರಾಗಿ ಕೆಲಸ ಮಾಡತಕ್ಕಂಥ ಕಾಲದಲ್ಲಿ ರಾಜ್ಯದ ಒಳಿತಿಗಾಗಿ ಅವರ ಹಿತವನ್ನು. ಗೌರವವನ್ನು. ಆ ಸ್ಥಾನಕ್ಕೆ ಗೌರವ ಘನತೆಯನ್ನು ತರಬೇಕಾದರೆ ಒಬ್ಬ ವ್ಯಕ್ತಿಯ ಪ್ರತಿನಿಧಿಯಾಗಿ, ಒಂದು ಪಕ್ಷದ ಪ್ರತಿನಿಧಿಯಾಗಿ ಕೆಲಸ ಮಾಡುವುದು ಅಷ್ಟು ಗೌರವವನ್ನು ತರುವುದಿಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇವೆ.

ಮಾನ್ಯ ಅಧ್ಯಕ್ಷಣೀಯವರೇ ಇವತ್ತು ನಾವು ಕಳೆದ 10-20 ತಿಂಗಳಲ್ಲಿ, ಈ ದೇಶದಲ್ಲಿ ನಡೆದಂಥ ಕೆಲವು ಘಟನೆಗಳನ್ನು ಸಭೆಯ ಮುಂದೆ ತರಬೇಕಾಗುತ್ತದೆ. ಮಾನ್ಯ ರಾಜ್ಯಪಾಲರು ಕಳೆದ ವರ್ಷ ತಮ್ಮ ಭಾಷಣದಲ್ಲಿ ''ಹೆಚ್ಚು ಉತ್ಪಾದನೆಯನ್ನು ಮತ್ತು ನ್ಯಾಯವಾದ ವಿತರಣೆಯನ್ನು ಸುನಿಶ್ಚಿತಗೊಳಿಸುವ ನಿಟ್ಟಿನಲ್ಲಿ ಜನತೆಯ ಶಕ್ತಿ ಸಾಮರ್ಥ್ಯಗಳು ಕೇಂದ್ರೀಕೃತವಾಗಿವೆ ಮತ್ತು ಆತ್ಮನಾಶಕ, ನಿರರ್ಥಕ ಚಟುವಟಿಕೆಗಳಲ್ಲಿ ವ್ಯಯವಾಗುತ್ತಿಲ್ಲ'' ವೆಂದು ಹೇಳಿದ್ದಾರೆ. ಆತ್ಮನಾಶಕ ನಿರರ್ಥಕ ಚಟುವಟಿಕೆಗಳು ಯಾವು ಯಾವುದನ್ನು ಉದಾಹರಿಸಿದ್ದರೆ ಬಹಳ ಚೆನ್ನಾಗಿತ್ತು. ಈ ಸಭೆಯಲ್ಲಿ ನಿರ್ಭಯವಾಗಿ ಕೆಲಸ ಮಾಡುವುದಕ್ಕೆ, ಸುಗಮವಾಗಿ ಸಭೆಯ ಕಾರ್ಯಕಲಾಪಗಳನ್ನು ಮಾಮೂಲಿಯಾಗಿ ನಡೆಸಿಕೊಂಡು ಹೋಗುವುದಕ್ಕ ಅಡ್ಡಿ ತರುವುದು ಮತ್ತು ಅವಕಾಶ ಕೊಡದೇ ಇರುವುದು ಆತ್ಮನಾಶಕ ನಿರರ್ಥಕ ಚಟುವಟಿಕೆಗಳು. ನಾವು ಅಲ್ಲಿ ಕುಳಿತು ಕಾಲವ್ಯಯ ಮಾಡುತ್ತಿದ್ದೇವೆಯೋ ?

ಅಧಿಕ ಉತ್ಪನ್ನ ಆಗಿದೆ. ನಾನು ಈ ಮಾತನ್ನು ಲಘುವಾಗಿ ಹೇಳುತ್ತಿಲ್ಲ. 1975–76ನೇ ಸಾಲಿನಲ್ಲಿ ಅಧಿಕ ಉತ್ಪನ್ನವಾಗಿದೆ. ಮಳೆ ಚೆನ್ನಾಗಿ ಬಂತು, ಅಧಿಕ ಉತ್ಪನ್ನವಾಯಿತು. ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳ ಮೇಲೆ ''ಅಧಿಕ ಉತ್ಪನ್ನ'' ಎಂದು ಸಾರುವ ಬೋರ್ಡ್‌ಗಳಿವೆ. ರಿಕ್ಷಾಗಳ ಮೇಲೆ 'ದಿ ನೇಷನ್ ಈಸ್ ಆನ್ ದಿ ಮೂವ್'' ಎಂದು ಬರೆಸಿದ್ದಾರೆ ಇನ್ನೂ ಅನೇಕ ಕಡೆಗಳಲ್ಲಿ ಬರೆಸಿದ್ದಾರೆ. ಇದಕ್ಕೆ ಪೂರ್ವದಲ್ಲಿ ರಾಷ್ಟ್ರದ ಪ್ರಗತಿ ಜಡತ್ವದಿಂದಿತ್ತೆ ? 1975ರ ಜೂನ್ 26ರ ನಂತರ ದಿ ನೇಷನ್ ಈಸ್ ಆನ್ ದಿ ಮೂವ್ ! ರಿಕ್ಷಾ ಮೇಲೆ ಇದನ್ನು ಬರೆದಿದ್ದಾರೆ. ರಿಕ್ಷಾ ಓಡಿದಾಗ, ಅದರ ಹಿಂದೆ ಬರೆದಿರುವ ಬರವಣಿಗೆಯೂ ಕೂಡ ಓಡುತ್ತದೆ !

ಶ್ರೀ ಕೋಣಂದೂರು ಲಿಂಗಪ್ಪ.—ಕೆಟ್ಟು ನಿಂತಿರುವ ಟ್ರಕ್ಕು ಕೂಡ ದೇಶ ಪ್ರಗತಿಯಲ್ಲಿ ಸಾಗಿದೆ ಎಂದು ಸಾರುತ್ತಿದೆ?

ಶ್ರೀ ಹೆಚ್. ಡಿ. ದೇವೇಗೌಡ.—ಹತ್ತೊಂಬತ್ತು ತಿಂಗಳುಗಳಲ್ಲಿ ಎಂಥಾ ಡ್ರಮಾಟಿಕ್ ಚೇಂಜ್, 1975ನೇ ಜೂನ್ 26 ಮತ್ತು 1977ರ ಮಾರ್ಚ್ 22ನೇ ತಾರೀಖುಗಳಲ್ಲಿ ತೆಗೆದುಕೊಂಡ ಎರಡು ನಿರ್ಣಯಗಳನ್ನೂ ಹೋಲಿಕೆ ಮಾಡಿ ನೋಡಬೇಕು. ಹೊಸ ಸರ್ಕಾರಕ್ಕೆ ಈ ಕೆಲಸ ಮಾಡಲಿಕ್ಕೆ ಬಿಡದೆ, ಮಾಜಿ ಪ್ರಧಾನ ಮಂತ್ರಿಗಳು, ಅವೊತ್ತು ಏನೇನು ಮಾಡಿದ್ದರೋ ಅವೆಲ್ಲವನ್ನೂ ಪುನಃ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ.

ನಿಷೇಧಿಸಲ್ಪಟ್ಟ ಸಂಸ್ಥೆಗಳು ! ತುರ್ತು ಪರಿಸ್ಥಿತಿ ಘೋಷಣೆಯಾದ ಸುಮಾರು ನಾಲ್ಕೈದು ತಿಂಗಳು ನನ್ನನ್ನು ಜೈಲಿಗೆ ಹಾಕಿರಲಿಲ್ಲ, ಕೆಲಕಾಲ ಬಿಟ್ಟಿದ್ದರು. ಆಗ ನಾನು ಪತ್ರಿಕೆಯಲ್ಲಿ ಬರುತ್ತಿದ್ದ ಸುದ್ದಿಯನ್ನು ಓದುತ್ತಿದ್ದೆನು. ತಲೆ ಬುರುಡೆ. ಅದರೊಳಗೊಂದು ಹಾವಿನ ಚಿತ್ರ !

ಶ್ರೀ ಕೋಣಂದೂರು ಲಿಂಗಪ್ಪ.—ಮಣಿಪಾಲ ಆಸ್ಪತ್ರೆಯಲ್ಲೂ ಇಂಥವು ಇವೆ !

ಶ್ರೀ ಹೆಚ್. ಡಿ. ದೇವೇಗೌಡ.—ಗದೆಗಳು, ಗುರಾಣಿಗಳು, ಅಲ್ಲಿಷ್ಟು ವಶಪಡಿಸಿಕೊಂಡಿದ್ದಾರೆ. ಇಲ್ಲಿಷ್ಟು ವಶಪಡಿಸಿಕೊಂಡಿದ್ದಾರೆ ಎನ್ನುವ ಸುದ್ದಿ. ಕರ್ನಾಟಕದಲ್ಲಿ 900 ದೊಣ್ಣೆಗಳು, 600 ಗುರಾಣಿಗಳು ಮತ್ತು 542 ಕಠಾರಿಗಳು !

ಶ್ರೀ ಕೋಣಂದೂರು ಲಿಂಗಪ್ಪ.—ಅರಣ್ಯ ಇಲಾಖೆಯವರು ಏನು ಮಾಡುತ್ತಿದ್ದರೋ ?

ಶ್ರೀ ಹೆಚ್. ಡಿ. ದೇವೇಗೌಡ.—ಪಾಪ! ಇವೆಲ್ಲಾ ಮರವವು! ಭದ್ರಾವತಿಯ ಉಕ್ಕು ಕಬ್ಬಿಣದಲ್ಲ ಅಧಿಕಾರಿಗಳು ಇನ್ನು ಸ್ವಲ್ಪ ಶ್ರಮಪಟ್ಟಿದ್ದರೆ, ನಮ್ಮ ಹಳ್ಳಿಗಳಲ್ಲಿ ನಾಟಕಗಳನ್ನಾಡುತ್ತಾರೆ, ಅಲ್ಲಿ ಗದೆ, ಕತ್ತಿಗಳು ಸಿಗುತ್ತಿದ್ದವೇನೋ ! ಎಷ್ಟು ದೂರ ಹೋಗಿದೆ. ಆದರೆ, ಕಳೆದ ತಿಂಗಳ 23–24ನೇ ತಾರೀಖು ಇವೆಲ್ಲಾ ರದ್ದು. ಹೇಗಿದೆ ನೋಡಿ ! 19 ತಿಂಗಳು ಈ ಜನ ದೇಶದ್ರೋಹಿಗಳು, ಸಮಾಜಘಾತುಕರು. ಚುನಾವಣೆಯ ಫಲಿತಾಂಶ ಹೊರಬಿದ್ದ ಮರುಕ್ಷಣದಲ್ಲೇ ಎಂಥಾ ಬದಲಾವಣೆ !

ಶ್ರೀ ಕೆ. ಎಚ್. ಪಾಟೀಲ್.—ಪ್ರಜಾಪ್ರಭುತ್ವದಲ್ಲಿ ಇದೆಲ್ಲಾ ಆಗುವುದೇ.

ಶ್ರೀ ಹೆಚ್ ಡಿ ದೇವೇಗೌಡ —ಅದೇ ಇಂದಿನ ನಮ್ಮ ಹೋರಾಟ. ಯಾವ ರಾಜ್ಯದಲ್ಲಿ ಯಾರೇ ಗೆದ್ದಿರಲಿ, ಕರ್ನಾಟಕದಲ್ಲಿ ನಿಮ್ಮ ಸರ್ಕಾರಕ್ಕೆ ವಿಶ್ವಾಸವಿರಬಹುದು. ಅದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಆದರೆ, ರಾಷ್ಟ್ರದ ರಾಜಕಾರಣದಲ್ಲಿ ನಮ್ಮ ಕರ್ನಾಟಕ ಎತ್ತ ಸಾಗಿದೆ ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕು. ನಾನು ಹೆಮ್ಮೆಯಿಂದ ಹೇಳುತ್ತೇನೆ :

The gang which is responsible to inflict this emergency in the country is wiped of by the Janata Party.

SRI D. B. KALMANKAR.—It happened in 1971 also.

ಶ್ರೀ ಕೋಣಂದೂರು ಲಿಂಗಪ್ಪ,—ಇನ್ನು ನಿಮ್ಮ ಮೊಳಕೆ ಮೇಲೇಳುವುದಿಲ್ಲ !

ಶ್ರೀ ಬಿ. ವಿ. ನಾಯಕ್,—ಇದೇನು ಜನತಂತ್ರ ಗಾಳಿಯೋ, ಜನತಾ ಗಾಳಿಯೋ ವಿಂಧ್ಯ ಪರ್ವತದಿಂದ ಈ ಕಡೆಗೆ ಅದು ಬರಲೇ ಇಲ್ಲ !

ಶ್ರೀ ಕೆ. ಆರ್, ಶ್ರೀನಿವಾಸುಲು ನಾಯುಡು.—ಜನತಾ ಗಾಳಿಗೆ ವಿಂಧ್ಯ ಪರ್ವತವನ್ನು ದಾಟಿ ಬರಲಾಗಲಿಲ್ಲ.

ಅಧ್ಯಕ್ಷರು.—ಯಾವ ಗಾಳಿ ಬಂದರೇನು ? ಅದನ್ನು ಸೇವಿಸಿ ವಾಸ ಮಾಡೋಣ.

SRI H D. DEVE GOWDA.—Let anybody rule this State, I am not bothered whether it is Janata party, Socialist Party or Congress Party again. But we want our liberty. That we got back,

ಶ್ರೀ ಕೊಣಂದೂರು ಲಿಂಗಪ್ಪ.—ಜಯಪ್ರಕಾಶ್ ನಾರಾಯಣ್ ಮತ್ತು ಮುರಾರ್ಜಿಯವರನ್ನು ನಿಮ್ಮ ಪ್ರಧಾನ ಮಂತ್ರಿಯವರು ದೇಶದ್ರೋಹಿಗಳೆಂದು ಕರೆದಿದ್ದರು ?

ಶ್ರೀ ಹೆಚ್. ಡಿ. ದೇವೇಗೌಡ.—ನಾನು. ನನ್ನ ಸನ್ಮಿತ್ರರಿಗೆ ವಿವರಣೆ ಕೊಡುತ್ತೇನೆ. ಅವರು ಒಳ್ಳೆಯ ವಿಚಾರವನ್ನೇ ಪ್ರಸ್ತಾಪ ಮಾಡಿದ್ದಾರೆ, ಬಹಳ ಸಂತೋಷ. ಮುರಾರ್ಜಿಯವರು ಹೇಳಿದ್ದು ಭಾರತದ ಮಹಿಳೆ ಕುರಿತಲ್ಲ. ನೀವು ನನ್ನನ್ನು ಕೆಣಕಿದಿರಿ ಎಂದು ಅವರು ಶ್ರೀಮತಿ ಇಂದಿರಾಗಾಂಧಿಯವರ ಹೆಸರನ್ನು ಹೇಳಿ. ಈ ಮಾತನ್ನು ನುಡಿದಿದ್ದಾರೆ. "ನಾನು ಮಹಿಳೆಯಲ್ಲ, ಪುರುಷ ಮಹಿಳೆ" ಎಂದು ಹೇಳಿದ ಪುರುಷ ಮಹಿಳೆಗೆ ಅವರು ಈ ರೀತಿ ಹೇಳಿದ್ದಾರೆ.

SRI D. B. KALMANKAR.—You say liberty, democracy etc., I appreciate your sentiment. But what is your opinion about the view expressed by our Prime Minister about women ? He doesn't want to apologise on the point. That is the tendency of the Jan Sangh. Do you agree with the remarks made by the Prime Minister?

ಶ್ರೀ ಹೆಚ್. ಡಿ. ದೇವೇಗೌಡ.—ಅವರು ಭಾರತದ ಮಹಿಳೆಯರಿಗಲ್ಲ ಹೇಳಿದ್ದು. ಹಾಗೆಂದು ಅವರೇ ವಿವರಣೆ ಕೊಟ್ಟಿದ್ದಾರೆ. ಈ ದೇಶದಲ್ಲಿ ಪುರುಷರು ಎಂದರೆ "ಶ್ರೀಮತಿ ಇಂದಿರಾ ಗಾಂಧಿಯವರು" ಎನ್ನುವ ಮಟ್ಟಕ್ಕೆ ಬಂದುಬಿಟ್ಟಿತ್ತು. ಈ ಮಾತನ್ನು ಶ್ರೀಮತಿ ಇಂದಿರಾ ಗಾಂಧಿಯವರೇ ಹೇಳಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ. ಆದರೆ, ಈ ಮಾತನ್ನು ಯಾವ ಕಾಂಟೆಕ್ಸ್ಟನಲ್ಲಿ ಹೇಳಿದ್ದಾರೆನ್ನುವುದು ಬೇರೆ ವಿಷಯ. ಇಂದು ಪ್ರಧಾನ ಮಂತ್ರಿಯಾಗಿರುವವರ ಸೊಸೆ ಅವರನ್ನು ನೋಡಲಿಕ್ಕೆ ಹೋಗಬೇಕಾಗಿದ್ದರೆ, ನ್ಯಾಯಾಲಯದ ಪರವಾನಿಗೆಯನ್ನು ಪಡೆಯಬೇಕಾಗಿತ್ತು ! ಅಂದು ಪ್ರಧಾನಿಯಾಗಿದ್ದವರು, ಅಧಿಕಾರ ಸ್ಥಾನದಲ್ಲಿದ್ದವರು ಮಹಿಳೆಯಲ್ಲವೆ ? ಎಂಥಾ ಔದಾರ್ಯ, ಎಂಥಾ ಸೌಹಾರ್ದ ಲಕ್ಷಣವಿದೆ ಈ ದೇಶದಲ್ಲಿ ! ಇದು ಔದಾರ್ಯದ ಲಕ್ಷಣವೆ ? ಯಾವ ಪ್ರಧಾನ ಮಂತ್ರಿಗಳು ಇವತ್ತು ಅಧಿಕಾರ ಪೀಠದಲ್ಲಿದ್ದಾರೆ He is the greatest statesman. ಅಂಥವರ ಸೊಸೆ ಅವರನ್ನು ಹೋಗಿ ನೋಡಿಕೊಂಡು ಬರುವುದಕ್ಕೆ ಕೋರ್ಟಿಗೆ ಅರ್ಜಿ ಹಾಕಿ ನಾಲ್ಕುವರೆ ತಿಂಗಳು ಓಡಾಡಬೇಕಾಯಿತು.

2-30 P. M.

ಶ್ರೀ ಕೆ ಶ್ರೀರಾಮುಲು.—ತಾವು ತಮ್ಮ ಭಾಷಣದಲ್ಲಿ ವ್ಯಕ್ತಿ ಪೂಜೆ ಎಂದು ಹೇಳಿದಿರಿ. ಇದರ ಬಗ್ಗೆ ತಾವು ಯಾವ ತಿಂಗಳಿಂದ ಈ ನಿರ್ಣಯಕ್ಕೆ ಬಂದಿರಿ ?

ಶ್ರೀ ಕೊಣಂದೂರು ಲಿಂಗಪ್ಪ.—ಆಗಸ್ಟ್ 15, 1947.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ರಾಜಕಾರಣದಲ್ಲಿ ಎಂದು ಕಾಲಿಟ್ಟೆನೋ ಅಂದಿನಿಂದ ಇಂದಿನವರೆಗೆ ಯಾವ ವ್ಯಕ್ತಿಪೂಜೆಯನ್ನು ಮಾಡಲಿಕ್ಕೆ ಸಿದ್ಧನಿಲ್ಲ ಮುಂದೆ ಮಾಡುವುದೂ ಇಲ್ಲ, ಏಕೆಂದರೆ ನಾನು ನನ್ನ 15 ವರ್ಷಗಳಲ್ಲಿ 13 ವರ್ಷ ಇಲ್ಲಿಯೇ ಕೂತು ಕೆಲಸ ಮಾಡಿದ್ದೇನೆ, ಆದ್ದರಿಂದ ನಾನು ಯಾವ ವ್ಯಕ್ತಿಪೂಜೆಯನ್ನು ಮಾಡುವುದಕ್ಕೂ ತಯಾರಿಲ್ಲ.

ಶ್ರೀ ಕೆ. ಶ್ರೀರಾಮುಲು.—ತಾವು ವೈಯಕ್ತಿಕವಾಗಿ ಹೇಳುತ್ತಿದ್ದೀರಿ, ಅಕ್ಷರಶಃ ದೃಷ್ಟಿಯಿಂದ ಹೇಳಬೇಕು. ತಾವು ಹಿಂದಿನ ಪಕ್ಷದಲ್ಲಿ ಇದ್ದೀರಿ, ವ್ಯಕ್ತಿಪೂಜೆ ಮಾಡಬಾರದು ಎಂದು ಯಾವತ್ತಿನಿಂದ ನಿರ್ಣಯಕ್ಕೆ ಬಂದಿರಿ ?

ಶ್ರೀ ಹೆಚ್. ಡಿ. ದೇವೇಗೌಡ.—ಹಿಂದಿನ ಪಕ್ಷದ ಪ್ರಶ್ನೆಯೇ ಇಲ್ಲಿ ಉದ್ಭವವಾಗುವುದಿಲ್ಲ. ಜನತಾ ಪ್ರತಿನಿಧಿಯಾಗಿ, ಒಬ್ಬ ಕಾರ್ಯಕರ್ತನಾಗಿ ಹೇಳುವುದಾದರೆ, ಇವತ್ತು ವ್ಯಕ್ತಿಪೂಜೆ ಪ್ರಶ್ನೆ ಪಕ್ಷದ ಸಿದ್ಧಾಂತದಲ್ಲಿ ಇಲ್ಲ. ಅದನ್ನು ಅಳವಡಿಸತಕ್ಕಂಥಾದ್ದು ಯಾರಿಗೂ ಸಾಧ್ಯವಿಲ್ಲ. ಈಗಿನ ಪ್ರಧಾನಿ ಮುರಾರ್ಜಿಯವರು ಅಧಿಕಾರಕ್ಕೆ ಬಂದಕೂಡಲೇ ನನ್ನ ಭಾವ ಚಿತ್ರವನ್ನು ಸರ್ಕಾರಿ ಕಛೇರಿಗಳಲ್ಲಿ ಪ್ರದರ್ಶಿಸಬಾರದೆಂದು ಆಜ್ಞೆ ಮಾಡಿದರು.

ಒಬ್ಬ ಸದಸ್ಯರು.—ಜನತಾ ಪಕ್ಷಕ್ಕೆ ಸಿದ್ಧಾಂತ ಯಾವುದಾದರೂ ಇದೆಯೇ ?

ಶ್ರೀ ಕೆ. ಶ್ರೀರಾಮುಲು.—ಈ ರಾಜ್ಯದ ಮಾಜಿ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು 1965ರಲ್ಲಿ ಮಾಜಿ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರ ತೂಕದಷ್ಟು ಚಿನ್ನ, ಬೆಳ್ಳಿ ಇಟ್ಟು ತೂಗಿ ಅವರನ್ನು ಹೊಗಳಿದರು, ಅದು ವ್ಯಕ್ತಿಪೂಜೆ ಅಲ್ಲವೆ ?

ಶ್ರೀ ಕಾಗೋಡು ತಿಮ್ಮಪ್ಪ.—ಅದು ಕಾಂಗ್ರೆಸ್‌ನಲ್ಲಿ ಇದ್ದಾಗ ಆಗಿದ್ದು.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಮೊದಲೇ ಹೇಳಿದಂತೆ ಭಾಷಣವನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳಬೇಕು. ಈ ಕೆಟ್ಟ ಸಂಪ್ರದಾಯವನ್ನು ಹಿಂದಿನಿಂದಲೂ ಹಾಕಿಕೊಂಡು ಬಂದಿದ್ದಾರೆಂದು ನನ್ನ ಭಾಷಣದ ಪೂರ್ವಭಾಗದಲ್ಲಿಯೇ ಹೇಳಿದ್ದೇನೆ. ಇವತ್ತು ರಾಜಕಾರಣದಲ್ಲಿ ರಾಜ್ಯಪಾಲರನ್ನು ನೇಮಕ ಮಾಡುವುದು ನಿನ್ನೆಯಿಂದ ಪ್ರಾರಂಭವಾಗಿಲ್ಲ. ಈ ದೇಶದಲ್ಲಿ ವ್ಯಕ್ತಿಪೂಜೆ ಮಾಡುವುದು ನಿಲ್ಲಬೇಕು.

SRI K. H PATIL (Minister for Food and Forest).—Madam, with all due respect to the Chair and the Leader of the Opposition, I wish to say that we are now discussing the Governor's Address and as you know, it is customary for the Governor to deliver the address prepared by the Cabinet. So, the hon. Members are free to discuss and criticise anything that is contained in the address. I would therefore appeal to the hon. the Leader of the Opposition to confine his attention to the acts of omission and commission of the Ministry and criticise them and thereby uphold the traditions and the principles of democracy. I would also appeal to my friends on this side not to bring in the name of the Prime Minister because if at all that is a matter to be discussed in the Parliament: Whether it is the Ex-Prime Minister or the present Prime Minister, they are the Prime Ministers of the nation, Let us have good tradition and let us not bring in their names in our discussions here and that is according to law also.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಪಾಟೀಲರು ಏನು ಹೇಳಿದ್ದಾರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ, ಇದನ್ನು ಬರೆಸುವಾಗಲೇ ನಿಮಗೆ ಜ್ಞಾಪಕಕ್ಕೆ ಬರಬೇಕಾಗಿತ್ತು. ಶ್ರೀಮತಿ ಗಾಂಧಿಯವರ ಚೈತನ್ಯಪೂರ್ಣ ನಾಯಕತ್ವವನ್ನು ಬರೆಸುವುದರಲ್ಲಿ ಕೇಂದ್ರಸರ್ಕಾರ,

ಶ್ರೀ ಕೆ. ಹೆಚ್. ಪಾಟೀಲ್.—ನಮಗೆ ಬೈಯಿರಿ.

SRI H. D. DEVE GOWDA.—I am going to tell that also.

SRI H. M. CHANNABASAPPA.—Why do you get provoked ?

ಶ್ರೀ ಎಸ್. ವೈ. ಪಾಟೀಲ್.—ಮಾನ್ಯ ರಾಜ್ಯಪಾಲರಿಗೆ ಬೈದರೆ ನಿಮಗೆ ಬೈದಹಾಗೆ.

ಶ್ರೀ ಹೆಚ್. ಡಿ. ದೇವೇಗೌಡ —ನಾನು ಕಳೆದ 18 ತಿಂಗಳಲ್ಲಿ ನಡೆದಂತಹ ಕೆಲವು ಘಟನೆಗಳನ್ನು ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸಭಾಧ್ಯಕ್ಷಣಿಯವರೇ, ಎಷ್ಟು ದೂರ ಇವತ್ತು ಅಧಿಕಾರ ದುರುಪಯೋಗವಾಗಿದೆ ಎಂದು ನೋಡಿದರೆ ಮಂಗಳೂರಿನಲ್ಲಿ ಕೊಲೆ ಆದ ಸಂದರ್ಭವಲ್ಲಿ ಸುಮಾರು 250 ಮಂದಿಗೂ ಮೇಲ್ಪಟ್ಟು ಬಂಧನಕ್ಕೆ ಒಳಗಾದರು ಇವರನ್ನು ಮೀಸಾ ಕಾನೂನು ಪ್ರಕಾರ ಬಂಧನ ಮಾಡಿದರು. ಎಷ್ಟು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆಂದರೆ ಜನತೆಯನ್ನು ಹತ್ತಿಕ್ಕಲಿಕ್ಕೆ ಪ್ರಯತ್ನ ಮಾಡಿದ್ದಾರೆ, ಮಾನ್ಯ ಚನ್ನಬಸಪ್ಪನವರು ರೂಲ್ ಆಫ್ ಲಾ ಬಗ್ಗೆ ಪದೇ ಪದೇ ಭಾಷಣ ಮಾಡುವುದನ್ನು ಕೇಳಿದ್ದೇವೆ ಮೀಸಾ ಕಾನೂನಿನಲ್ಲಿ ಖಾನಿ ಮೊಕದ್ದಮೆಗೆ ಒಳಗೊಂಡಂತ ವ್ಯಕ್ತಿಗಳನ್ನು ಮೀಸಾ ಪ್ರಕಾರ ಬಂಧಿಸಿದರೆ ಅಧಿಕಾರ ದುರುಪಯೋಗವಲ್ಲವೇ? ಅವರಿಗೆ ಕೊಟ್ಟಿರತಕ್ಕ ಹಿಂಸೆ ಏನು ? ಕೆಲವರನ್ನು 30-35 ದಿವಸಗಳ ವರೆಗೆ ಪೋಲೀಸ್ ಠಾಣೆಯಲ್ಲಿಟ್ಟಿದ್ದಾರೆ. ಹೇಬಿಯಸ್ ಕಾರ್ಪಸ್ ಬಗ್ಗೆ ಉಚ್ಚ ನ್ಯಾಯಾಲಯ ತೀರ್ಪು ಕೊಟ್ಟ ಮೇಲೆ......

ಒಬ್ಬ ಸದಸ್ಯರು.—ನಿಮ್ಮ ಆರ್. ಎಸ್. ಎಸ್. ಅವರ ಹಿಂಸಾಚಾರ ಸರಿಯೇ ?

ಅಧ್ಯಕ್ಷರು.—ನನ್ನ ಅಪ್ಪಣೆಯಿಲ್ಲದೇ ಮಧ್ಯದಲ್ಲಿ ಯಾರು ಮಾತನಾಡಬಾರದು.

ಶ್ರೀ ಹೆಚ್. ಡಿ. ದೇವೇಗೌಡ.—ಕೊಲೆಗಡುಕರು ಜನಸಂಘದವರು ಮಾತ್ರವಲ್ಲ ಕೊಲೆಗಡುಕರು ಆಳುವ ಕಾಂಗ್ರೆಸ್‌ನಲ್ಲೂ ಇದ್ದಾರೆ. ಸಮಾಜಘಾತುಕರು, ಕೊಲೆಗಡುಕರು ಯಾವುದೇ ಒಂದು ಪಕ್ಷಕ್ಕೆ ಸೇರಿರುವುದಿಲ್ಲ, ಎಲ್ಲಾ ವರ್ಗದಲ್ಲೂ ಇದ್ದಾರೆ. ಕೇವಲ ಒಂದು ಪಕ್ಷದ ಹೆಸರನ್ನು ಹಿಡಿದು ಹೇಳುವುದು ಸರಿಯಲ್ಲ ರಾಷ್ಟ್ರದ ಜನತೆ ಈಗಾಗಲೇ ಉತ್ತರ ಕೊಟ್ಟಿದ್ದಾರೆ.

ಲಾರೆನ್ಸ್ ಫರ್ನಾಂಡೀಸ್ ಅವರ ಪ್ರಕರಣವನ್ನು ತಾವು ಪತ್ರಿಕೆಯಲ್ಲಿ ಓದಿರಬಹುದು. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಅವರ ಹೆಲ್ತ್ ಬುಲೆಟಿನ್ ಹೊರಡಿಸುತ್ತೇನೆ ಎಂದು ಹೇಳಿರಬಹುದು, ಆದರೆ 15 ದಿವಸದಲ್ಲಿ ಅವರನ್ನು ಒಂದು ಠಾಣೆಯಿಂದ ಮತ್ತೊಂದು ಠಾಣೆಗೆ ಅಂದರೆ 8 ಪೋಲೀಸ್ ಠಾಣೆಗಳಿಗೆ ಓಡಾಡಿಸಿ ಅಮಾನುಷ ಕೃತ್ಯ ನಡಸಿದ್ದಕ್ಕೆ ನಿಮ್ಮ ಅಧಿಕಾರಿಗಳು ಕಾರಣ ಎಂದು ನಾನು ಹೇಳುವುದಿಲ್ಲ. ಅವರು ಅಧಿಕಾರವನ್ನು ಕೈಗೆ ತೆಗೆದುಕೊಳ್ಳಲಿಕ್ಕೆ ಸರ್ಕಾರ ಕಾರಣ ಎಂದು ತೋರುತ್ತದೆ. ಆ ಮನುಷ್ಯನನ್ನು ಜೈಲಿಗೆ ತೆಗೆದುಕೊಂಡು ಬಂದಾಗ ಅವನನ್ನು ತಂದಂಥ ವಾಹನ ಒಬ್ಬನ ಕಡೆಗೆ ಮಾತನಾಡಲಿಕ್ಕೆ ಅವಕಾಶ ಕೊಡುತ್ತಾ ಇರಲಿಲ್ಲ ಆತನು ಜನಸಂಘದ ಅಭ್ಯರ್ಥಿ ಏನು ! ಅಥವಾ ಪಟ್ಟಭದ್ರ ಹಿತಾಸಕ್ತಿ ಏನು ; ಅವರ ಅಣ್ಣನ ಬಗ್ಗೆ ಸುಳಿವು ಕೊಡಲಿಲ್ಲ ಎನ್ನುವುದೇ ಆರೋಪ. ಆತ ಇನ್ನು ಏನು ಕೆಲಸ ಮಾಡಲಿಲ್ಲ. ಆತನ ಶರೀರದ ಮೇಲೆ ಆದಂತಹ ಪೆಟ್ಟಿಗೆ ಸರ್ಕಾರದ ವತಿಯಿಂದ ಒದಗಿಸತಕ್ಕ ಸೌಲಭ್ಯ ಏನು ಇದೆ ಅದನ್ನು ಕೊಡಿಸಲಿ ಆತನನ್ನು ಕರೆದುಕೊಂಡು ಹೋಗಲಿಕ್ಕೆ ಅಲ್ಲಿಗೆ ಪೋಲೀಸ್ ಎಸ್ಕಾರ್ಟ್ ಬಂದರೆ ಸಾಕು ಆತನು ನಡುಗುತ್ತಿದ್ದ. ತಾವು ಕುಳಿತುಕೊಳ್ಳಿ ಅವರು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾರೆ ಎಂದರೆ, ಆತ ನನ್ನನ್ನು ಸಾಯಿಸುತ್ತಾರೆ ನನ್ನನ್ನು ಉಳಿಸಿ ಎಂದು ಕಾಲು ಹಿಡಿದು ಕೇಳುತ್ತಿದ್ದ. ಇಂತಹ ಅಧಿಕಾರಿಗಳಿಗೆ ಇಂತಹ ಸರ್ಕಾರಕ್ಕೆ ಮನ್ನಣೆ ಕೊಡಬೇಕೇ ? 6 ತಿಂಗಳ ಕಾಲ ಎರಡು ಕಾಲುಗಳು ಅವನಿಗೆ ಹತೋಟಿ ಬರಲಿಲ್ಲ. ಇವೊತ್ತು ತಮಗೆ ಕರ್ನಾಟಕದಲ್ಲಿ ಓಟು ಕೊಟ್ಟಿದ್ದಾರೆ, ಓಟು ಕೊಟ್ಟಿರುವ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇವೊತ್ತು ಜಾರ್ಜ್‌ಫರ್ನಾಂಡೀಸ್ ಅವರ ಮೇಲೆ ಮೊಕದ್ದಮೆ ಹೂಡಿದ ಮೇಲು ಅವರ ಸುಳಿವನ್ನು ಕೊಡಲಿಲ್ಲ ಎಂದು 5 ತಿಂಗಳು ಕಾಲ ಜೈಲ್‌ನಲ್ಲಿ ಇಟ್ಟಿದ್ದರು. ಅವರು ಸಿಕ್ಕಿದ ಮೇಲೆ ಆತನ ಮೇಲೆ, ಮೊಕದ್ದಮೆ ಹೂಡಿದ ಮೇಲೆ ಮಾತ್ತೆ 5 ತಿಂಗಳುಗಳ ಕಾಲ ಜೈಲಿನಲ್ಲಿ ಇಡತಕ್ಕ ಅವಶ್ಯಕತೆ ಏನು ಇತ್ತು ? ಇದು ಸರ್ಕಾರದ ಯೋಗ್ಯ ನಡತೆಯೇ ಎಂದು ಕೇಳುತ್ತೇನೆ. ? ಸ್ನೇಹಲತಾ ರೆಡ್ಡಿ, ಜಾರ್ಜ್ ಫರ್ನಾಂಡೀಸ್, ಅವರು ಸಿಕ್ಕಿದ ಮೇಲೆ ಸರ್ಕಾರ ಅವರ ಮೇಲೆ ಮೊಕದ್ದಮೆ ಹೂಡಬೇಕಾದ್ದು, ಸರ್ಕಾರ ಅದಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಇವೊತ್ತು ಸ್ನೇಹಲತಾ ರೆಡ್ಡಿ, ಜಾರ್ಜ್ ಫರ್ನಾಂಡೀಸ್ ಅವರು ಸಿಕ್ಕಿದ ಮೇಲೆ. ಅವರ ಮೇಲೆ ಮೊಕದ್ದಮೆ ಹೂಡಿದ ಮೇಲೆ, ಈ ಎರಡು ವ್ಯಕ್ತಿಗಳು ಸುಳಿ

ಯನ್ನು ಕೊಡುವುದಕ್ಕಾಗಿ ತಾವು ಯಾರನ್ನು ಬಂಧಿಸಿದ್ದಿರಿ ಅವರನ್ನು ಮತ್ತೆ ಬಂಧನದಲ್ಲಿ ಏತಕ್ಕೆ ಮುಂದುವರೆಸಿದಿರಿ ? ಇವೊತ್ತು ಸ್ನೇಹಲತಾ ರೆಡ್ಡಿಯವರಿಗೆ ಔಷದೋಪಚಾರ ಕೊಡುವುದರಲ್ಲಿ ತಮ್ಮ ಕರ್ತವ್ಯ ಚ್ಯುತಿ ಮಾಡಿದ್ದಾರೆ ಎಂದು ಹೇಳುವುದಿಲ್ಲ ಅವರನ್ನು ಸಾಲಿಟರಿ ಕನ್‌ಫೈನ್‌ಮೆಂಟ್, ಅಂದರೆ ನಾಲ್ಕು ಗೋಡೆ ಇರತಕ್ಕ ಮಧ್ಯೆ ಜಾಗದಲ್ಲಿ, ಇಟ್ಟಿದ್ದೀರಿ, ಅಲ್ಲದೇ ಅನೈತಿಕ ಮಾರ್ಗದ ವ್ಯವಹಾರ ನಡೆಸತಕ್ಕ ಹೆಣ್ಣು ಮಕ್ಕಳನ್ನು ಒಂದು ಕಡೆಗೆ, ಇವರನ್ನು ಇನ್ನೊಂದು ಕಡೆಗೆ ಇಟ್ಟಿದ್ದಾರೆ. ಅವರ ಮನಸ್ಸಿನಲ್ಲಿ ಯಾವ ರೀತಿ ಪರಿಣಾಮ ಆಗಬಹುದು ಅದನ್ನು ತಾವು ಯೋಚನೆ ಮಾಡಬೇಕು. ಅವರು ಸಾಯುವ ನಾಲ್ಕು ದಿವಸಗಳ ಮುಂಚೆ ಹೊರಗೆ ಬಿಟ್ಟಿರಿ. ಸರ್ಕಾರ ತನ್ನ ಅಧಿಕಾರವನ್ನು ಎಷ್ಟು ದೂರ ಮಾಡಿಕೊಂಡಿದೆ ಎಂದು ಹೇಳುತ್ತಿದ್ದೇನೆ. ಇನ್ನು ಸಯ್ಯದ್‌ಸಾಬ್ ಅವರನ್ನು ತಗೆದುಕೊಂಡು ಹೋಗಿ ಬೌರಿಂಗ್ ಆಸ್ಪತ್ರೆಗೆ ಹಾಕಿದರು, ಅವರ ಕುಟುಂಬದವರು ಸುಮಾರು ಮೂರು ನಾಲ್ಕು ಸಾವಿರ ರೂಪಾಯಿನ ಒಂದು ಸಣ್ಣ ಪ್ರಿಂಟಿಂಗ್ ಪ್ರೆಸ್ ಇಟ್ಟುಕೊಂಡು ಜೀವನ ನಡೆಸುತ್ತಿದ್ದರು. ಅವರಿಗೆ ಒಂಭತ್ತು ಜನ ಮಕ್ಕಳಿದ್ದರು. ಅವರು ಹೃದಯಾಘಾತದಿಂದ ತೀರಿಕೊಂಡರು. ಕೇವಲ ವಿವೇಚನೆ ಇಲ್ಲದೇ ಯಾರೋ ಹೇಳಿದ್ದು, ಯಾರೋ ಒಬ್ಬರನ್ನು ತಂದು ಹಾಕಿದರು, ಕೇವಲ ಅಧಿಕಾರಿಗಳು ಏನೋ ಸರ್ಕಾರಕ್ಕೆ ರಾಯಲ್ಟಿ ತೋರಿಸುತ್ತಾರೆ. ಉನ್ನತ ಹುದ್ದೆ ಸಿಕ್ಕುತ್ತದೆ, ಎಂದು ಪ್ರಮೋಷನ್ ಸಿಕ್ಕುತ್ತದೆ ಎಂದು ಆಮಿಷಕ್ಕೆ ಒಳಗಾಗಿ ಅವರು ಕೊಡತಕ್ಕ ರಿಪೋರ್ಟ್ ಪ್ರಕಾರ ನಡೆಸಿಕೊಂಡ, ಹೋಗಬೇಕಾಗುತ್ತದೆ. ಮೂರು ನಾಲ್ಕು ಜನರು ಎಲ್ಲೆ ಮೀರಿದ ವರ್ತನೆ ಮಾಡಿದ್ದಾರೆ. ಅವರ ಮೇಲೆ ತನಿಖೆ ನಡೆಯತಕ್ಕ ಕಾಲ ಏನು ಹೆಚ್ಚು ದೂರವಿಲ್ಲ. ಕೇವಲ ತಮ್ಮ ಇತಿಮಿತಿಯಲ್ಲಿ ಕಾನೂನಿನ ಚೌಕಟ್ಟಿನಲ್ಲಿ ಮಾಡಬೇಕೇ ವಿನಹ ಮಂತ್ರಿಗಳ ಮೇಹರಬಾನಿ ಪಡೆಯಬೇಕೆಂದು ಎಂದು ಕೆಲಸ ಮಾಡಿದರೆ ಒಂದಲ್ಲ ಒಂದು ದಿವಸ ತಕ್ಕ ಶಿಕ್ಷೆಯಾಗುತ್ತದೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಭಾಧ್ಯಕ್ಷಿಣಿಯವರೇ, ಈ ಒಂದು 19 ತಿಂಗಳಲ್ಲಿ ತುರ್ತು ಪರಿಸ್ಥಿತಿಯಿಂದ ಬಹಳ ಗಳಿಕೆಯಾಗಿದೆ ಎಂದು ಹೇಳಿದ್ದಾರೆ, ಅದನ್ನು ಹೇಳುವಾಗ ಕರ್ನಾಟಕದಲ್ಲಿ ಇವೊತ್ತು ಜನತೆ ನಮಗೆ ಬೆಂಬಲ ಕೊಟ್ಟಿದ್ದಾರೆ ಅದರಿಂದ ನಮ್ಮ ಸರ್ಕಾರ ಬಹಳ ಯೋಗ್ಯ ಕೆಲಸ ಮಾಡಿದೆ, ಉತ್ತಮ ಕೆಲಸ ಮಾಡಿದೆ ಜನತೆಯ ವಿಶ್ವಾಸವನ್ನು ಗಳಿಸತಕ್ಕ ಕೆಲಸ ಮಾಡಿದೆ ಎಂದು ನಮ್ಮ ಮಿತ್ರರಾದ ಬಸವಲಿಂಗಪ್ಪನವರು ಹೇಳಿದರು ಅವರಿಗೆ ಈ ಒಂದು ತುರ್ತುಪರಿಸ್ಥಿತಿಯಿಂದ ಆದ ಗಳಿಕೆ ಏಷ್ಟು ಇದೆಯೋ ಗೊತ್ತಿಲ್ಲ. ಮಾನ್ಯ ಬಸವಲಿಂಗಪ್ಪನವರು ಈ ಒಂದು ತುರ್ತುಪರಿಸ್ಥಿತಿಯಲ್ಲಿ ಗಳಿಕೆಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು ಏಕೆಂದರೆ ಅವರು ಆ ಒಂದು ಗಳಿಕೆ ಮಾಡುತ್ತಾರೆ ಅವರು ಮೊದಲು ಇದೇ ಸದನದಲ್ಲಿ ಮಾನ್ಯ ಘೋರ್ಪಡೆಯವರ ಮೇಲೆ ಮಾಡಿದ ಟೀಕೆಗಳ ಪುಸ್ತಕ ಇದೆ. ಅವರು ಮಾನ್ಯ ಘೋರ್ಪಡೆಯವರ ಮೇಲೆ ಪುಸ್ತಕ ಪ್ರಿಂಟ್ ಮಾಡಿಸಿ ಇವರು ಬಡವರಿಗೆ ಶತ್ರುಗಳಾಗಿ ನಿಂತಿದ್ದಾರೆ ಎಂದು ಹೇಳಿ ಪುಸ್ತಕಗಳನ್ನು ಹಂಚಿದ್ದಾರೆ. ಅದ್ದರಿಂದ ಇದು ತುರ್ತುಪರಿಸ್ಥಿತಿ ಗಳಿಕೆ ಎಂದು ನಿಮ್ಮ ಸಾಧನೆಯಲ್ಲಿ ಬರೆದುಕೊಳ್ಳಬಹುದು. ಇದು ಕೇವಲ ಚುನಾವಣೆ ಕೆಲಸದ ಆಧಾರದ ಮೇಲೆ ಆದದ್ದು ಅಲ್ಲ. ಇವೊತ್ತು ರಾಯಬರೇಲಿಯಲ್ಲಿ ಸುಮಾರು 250 ಕೋಟಿ ರೂಪಾಯಿಗಳ ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಕೇವಲ ಅಭಿವೃದ್ಧಿ ಕಾರ್ಯಕ್ಕೆ ಜನರು ಮನಸ್ಸೋತು ತೀರ್ಪುಕೊಡುತ್ತಾರೆ ಎಂದು ಹೇಳುವಂತಿಲ್ಲ, ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ಅಭಿವೃದ್ಧಿ ಕಾರ್ಯಗಳನ್ನು ಮಾಡದೇ ಇದ್ದರೆ ಜನರು ಸರಿಯಾದ ತೀರ್ಪು ಕೊಡುತ್ತಾ ಇರಲಿಲ್ಲವೇ? ಅದು ಮುಖ್ಯವಲ್ಲ ಚುನಾವಣೆ ಕಾಲಕ್ಕೆ ಹಲವಾರು ಕಾರಣಗಳು ಇವೆ. ಅವರು ಅಲ್ಲ ಸೋಲುವುದಕ್ಕೂ ಕೆಲವು ಕಾರಣಗಳು ಇರಬೇಕು. ನಾನೂ ಎಲ್ಲವನ್ನೂ ಈ ಸಭೆಯಲ್ಲಿ ವಿಷದೀಕರಿಸಲಿಕ್ಕೆ ಸಾಧ್ಯವಾಗುವುದಿಲ್ಲ. ತಾವು ತಮ್ಮ ಭಾಷಣದಲ್ಲಿ ಚುನಾವಣೆಯಲ್ಲಿ ಗೆದ್ದಿದ್ದೇವೆ ಎಂದು ಹೇಳಿದರೆ ಈ ಚುನಾವಣೆ ರಾಷ್ಟ್ರಕ್ಕೆ ಸಂಬಂಧಪಟ್ಟ ಚುನಾವಣೆ. ಅವರು ಮಾತನಾಡುವಾಗ ಏನು ಹೇಳಿದರು ಎಂದರೆ ಈಗ ಅಧಿಕಾರದಲ್ಲಿರುವುದು ನಮ್ಮ ಸರ್ಕಾರ ನಾವು ಆಡಳಿತ ನಡೆಸುತ್ತಿರುವುದು, ನಾವು ಏತಕ್ಕೆ ರಾಜೀನಾಮೆ ಕೊಡಬೇಕು ? ನೀವೇ ರಾಜೀನಾಮೆ ಕೊಡಿ ಎಂದು ಇವತ್ತು ವಿರೋಧ ಪಕ್ಷದ ವತಿಯಿಂದ ಪಾರ್ಲಿಮೆಂಟ್ ಸದಸ್ಯರಾಗಿ ಇಬ್ಬರಾದರೂ ಗೆದ್ದು ಬಂದಿದ್ದಾರೆ,

ಶ್ರೀ ಕೆ. ಎಚ್. ಪಾಟೀಲ್.—ತಾವು ರಾಜೀನಾಮೆ ಕೊಡಬೇಕೆಂದು ಯಾರು ತಮ್ಮನ್ನು ಕೇಳಿದರು? ತಾವು ಹೇಳುತ್ತಿರುವುದು ಒಂದಕ್ಕೊಂದು ಕಾಂಟ್ರವರ್ಸಿ ಆಗುತ್ತಿದೆ.

ಶ್ರೀ ಎಚ್. ಡಿ. ದೇವೇಗೌಡ — 1971ನೇ ಇಸವಿಯಲ್ಲಿ ನಡೆದ ಚುನಾವಣೆಯಲ್ಲಿ ಕರ್ನಾಟಕದಲ್ಲಿ 27 ಸೀಟ್‌ಗಳಿದ್ದರೆ 27ನ್ನೂ ತಾವು ಗೆದ್ದಿದ್ದಿರಿ. ಆದರೆ ಇವತ್ತು ಅಂದರೆ 1977ರ ಚುನಾವಣೆಯಲ್ಲಿ ಉತ್ತರ ಪ್ರದೇಶದಲ್ಲಿ, ಬಿಹಾರದಲ್ಲಿ ರಾಜಾಸ್ಥಾನದಲ್ಲಿ ಮಧ್ಯಪ್ರದೇಶದಲ್ಲಿ ಯಾರು ಗೆದ್ದಿದ್ದಾರೆ ಎಂಬುದನ್ನು ನೋಡಿ ಯಾರು ರಾಜೀನಾಮೆ ಕೊಡಬೇಕಾಗುತ್ತದೆ ಎಂಬುದನ್ನು ನೋಡಿ. ಆದರೆ ಇದರ ಬಗ್ಗೆ ಮಾತನಾಡುವುದಕ್ಕೆ ನಾನು ಹೆಚ್ಚು ಮಹತ್ವ ಕೊಡುವುದಿಲ್ಲ. ಈಗ ನಡೆದಿರುವುದು ಇಡೀ ರಾಷ್ಟ್ರಕ್ಕೇ ಸಂಬಂಧಪಟ್ಟಂತಹ ಚುನಾವಣೆ. ಆದರೆ ತಾವು ಈ ಸಂದರ್ಭದಲ್ಲಿ ಒಂದು ಮಾತನ್ನು ಮಾತ್ರ ತಮ್ಮ ಗಮನದಲ್ಲಿಟ್ಟುಕೊಳ್ಳಬೇಕು. ಶಾಸನ ಸಭೆಯ ಅವಧಿ 5 ವರ್ಷಗಳಿಗೆ ಮಾತ್ರ ಸೀಮಿತವಾಗಿರುವುದು ಆದರೆ ನಾವು ಇರುವುದು ಇವತ್ತು ವಿಸ್ತರಿಸಲ್ಪಟ್ಟ ಅವಧಿಯಲ್ಲಿ ನಮ್ಮ ಅಧಿಕಾರದ ಅವಧಿ ಒಂದು ವರ್ಷದ ಹಿಂದೆಯೇ ಮುಗಿದು ಹೋಯಿತು. ಜನತೆ ತಮಗೆ ಅಧಿಕಾರ ಕೊಟ್ಟಿದೆ ಎಂದು 42ನೇ ತಿದ್ದುಪಡಿಯಲ್ಲಿ ತಮ್ಮ ಅಧಿಕಾರಾವಧಿಯನ್ನು ಇನ್ನು ಒಂದು ವರ್ಷಕಾಲ ವಿಸ್ತರಿಸಿಕೊಂಡಿರಿ. ರಾಷ್ಟ್ರದ ಜನತೆಯ ಮುಂದೆ 20 ಅಂಶಗಳ ಒಂದು ಕಾರ್ಯಕ್ರಮ ಪಟ್ಟಿಯನ್ನು ಇಟ್ಟಿದ್ದೀರಿ. ತಾವು ಕಳೆದ 20 ತಿಂಗಳುಗಳಲ್ಲಿ ಮಾಡಿರತಕ್ಕ 42ನೇ ತಿದ್ದುಪಡಿಯೂ ಸೇರಿದಂತೆ ಏನೇನು ಕಾನೂನುಗಳನ್ನು ಮಾಡಿದ್ದೀರಿ ಅವುಗಳೆಲ್ಲವನ್ನೂ ಕೂಡ ನಾವು ಅಧಿಕಾರಕ್ಕೆ ಬಂದಕೂಡಲೇ ಪುನರ್ ಪರಿಶೀಲನೆ ಮಾಡಿ ಯಾವು ಯಾವು ಸರಿಯಾಗಿಲ್ಲ ಅಂಥವನ್ನು ರದ್ದುಮಾಡುತ್ತೇವೆಂದು ನಮ್ಮ ರಾಜಕೀಯ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೇವೆ ಅದನ್ನು ಮಾಡುತ್ತೇವೆ. ಇಡೀ ರಾಷ್ಟ್ರದಲ್ಲಿ ಮೂರನೇ ಎರಡು ಭಾಗಕ್ಕಿಂತ ಹೆಚ್ಚು ಜನ ಈ 42ನೇ ತಿದ್ದುಪಡಿಯನ್ನು ಒಳಗೊಂಡಂತೆ ಕೆಲವು ಬದಲಾವಣೆಗಳನ್ನು ಮಾಡುವುದಕ್ಕೆ ಜನತೆ ತಮ್ಮ ಅಂಗೀಕಾರವನ್ನು ಕೊಟ್ಟಿದ್ದಾರೆ. ತಾವು ಜನತೆಯ ಹಕ್ಕನ್ನು ತಿರಸ್ಕಾರ ಮಾಡಿರುವುದರಿಂದ ಈ ಸ್ಥಾನದಲ್ಲಿ ಕುಳಿತುಕೊಳ್ಳುವುದಕ್ಕೆ ನಿಜವಾಗಿಯೂ ಕೂಡ ತಮಗೆ ಯಾವ ನೈತಿಕ ಹಕ್ಕು ಕೂಡ ಇಲ್ಲವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಪಡುತ್ತೇನೆ ಮತ್ತು ಯಾರೇ ಆಗಲಿ ಚುನಾವಣೆಯಲ್ಲಿ ಆರಿಸಿ ಬಂದವರು ರಾಜ್ಯವನ್ನು ಆಳುವುದು ಯೋಗ್ಯ ಮತ್ತು ಸಾಧುವಾದುದು ಎಂದು ಹೇಳಬಯಸುತ್ತೇನೆ.

ಮಾನ್ಯ ಸಭಾಧ್ಯಕ್ಷಿಣಿಯವರೆ, ಇನ್ನು ದೇಶದಲ್ಲಿ ಜಾರಿಗೆ ತಂದಿದ್ದ ತುರ್ತುಪರಿಸ್ಥಿತಿ ಬಗ್ಗೆ ಒಂದು ಮಾತನ್ನು ನಾನು ಕೇಳುತ್ತೇನೆ. ಹಿಂದೆ ರಾಷ್ಟ್ರದಲ್ಲಿ ಬಡತನದ ರೋಗ ನೂರಕ್ಕೆ 30 ಪರ್ಸೆಂಟ್ ಇದ್ದುದು ಇವತ್ತು 60-62 ಪರ್ಸೆಂಟ್ ಆಗಿದೆ ಇದು ತುರ್ತು ಪರಿಸ್ಥಿತಿ ಕಾಲದ ಗಳಿಕೆಯೇ ಎಂದು ಕೇಳಬಯಸುತ್ತೇನೆ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಆಗ ಜನತೆ ಗಳಿಸಿದ್ದು ಜನತೆಯ ಗಳಿಕೆ.

ಶ್ರೀ ಹೆಚ್. ಡಿ. ದೇವೇಗೌಡ.—ಇದು ಮೊದಲು ನಿಮಗೆ ಅಪ್ಲೈ ಆಗಬೇಕಾಗುತ್ತದೆ. ಸ್ವಾಮಿ ನಾನು ತಮ್ಮನ್ನು ಕೇಳುತ್ತೇನೆ 1975-76ರಲ್ಲಿ ಚೆನ್ನಾಗಿ ಮಳೆ ಬಿದ್ದು ಬೆಳೆ ಆದರೆ ಅದು ನೀವು ಗಳಿಸಿದ ಗಳಿಕೆಯೆ ? ಆಗ ಹೆಚ್ಚು ಆಹಾರೋತ್ಪಾದನೆಯಾದುದು ತುರ್ತು ಪರಿಸ್ಥಿತಿಯಲ್ಲಿ ನೀವು ಗಳಿಸಿದ ಗಳಿಕೆಯೆ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು, ರಾಜ್ಯದಲ್ಲಿ ಬರೀ ಮಳೆ ಬಿದ್ದರೇ ಆಹಾರವನ್ನು ಜಾಸ್ತಿ ಬೆಳೆಯುವುದಕ್ಕೆ ಆಗುವುದಿಲ್ಲ ಅದಕ್ಕೆ ಸಾಕಷ್ಟು ಗೊಬ್ಬರ ಒದಗಿಸಬೇಕು ಔಷಧಿ ಸಾಮಗ್ರಿಗಳನ್ನು ಒದಗಿಸಬೇಕು, ಅವನ್ನೆಲ್ಲಾ ನಾವು ಮಾಡಿದ್ದೇವೆ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಇವತ್ತು ಇಂಡಸ್ಟ್ರೀಸ್ ಸೆಕ್ಟಾರ್‌ನಲ್ಲಿ ತುರ್ತು ಪರಿಸ್ಥಿತಿ ಅವಧಿಯಲ್ಲಿ ಕಾರ್ಮಿಕ ರಂಗದಲ್ಲಿ ಉತ್ಪಾದನೆ ಜಾಸ್ತಿಯಾಗಿದೆ ಎಂದು ಹೇಳುತ್ತೀರಿ, ಆದರೆ ಅದು ಆಗಿದೆಯೇ ? ಇಲ್ಲವೇ ಎಂಬುದನ್ನು ತಾವು ಸರಿಯಾಗಿ ನೋಡಬೇಕು. ಈ ಸಂದರ್ಬದಲ್ಲಿ ಕೆಲವು ನಿದರ್ಶನಗಳನ್ನು ಕೊಡಬಯಸುತ್ತೇನೆ ಕರ್ನಾಟಕದಲ್ಲಿ ಸುಮಾರು 83 ಜನರನ್ನು ತಾವು ಮೀಸಾ ಅಡಿಯಲ್ಲಿ ಬಂಧಿಸಿದ್ದೀರಿ. ಹಟ್ಟಿ ಚಿನ್ನದ ಗಣಿ ಪ್ರದೇಶದಲ್ಲಿ ನಾವು ಹೋಗಿ ಜನಗಳಿಗೆ ಪ್ರಚೋದನೆ ಮಾಡಿದ್ದೇವೆಯೆ ? ಇವತ್ತು ನಾನು ತಮ್ಮನ್ನು ಕೇಳುತ್ತೇನೆ, ಇನ್ನು ಎಷ್ಟು ದಿವಸದ ವರೆಗೆ ಜನರಿಗೆ ಬಂದೂಕು ತೋರಿಸಿಕೊಂಡು ಕಾಲಕಳೆಯುತ್ತೀರಿ ?

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ, ಇವರು ಬಡವರ ಬಂಧು ಅಲ್ಲ, ಬಡವರ ಬಂದೂಕ

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಕೆ. ಇ. ಬಿ. ನಲ್ಲಿ ಕೆಲವರು ತಮ್ಮ ಡಿವ್ಯಾಂಡ್‌ನ್ನು ಕೇಳಿದಕ್ಕೆ ಸುಮಾರು 4 -14 ಜನರನ್ನು ಹಾಗೆಯೇ ಹಿಡಿದುಕೊಂಡು ಬಂದಿದ್ದಾರೆ, ಅವರು ಸರಿಯಾಗಿ ತಮ್ಮ ಮೈ ಮೇಲೆ ಪಂಚೆಯಾಗಲಿ, ಇತರ ಬಟ್ಟೆಯಾಗಲಿ ಹಾಕಿಕೊಂಡಿರಲಿಲ್ಲ. ಇದನ್ನೆಲ್ಲಾ ನೋಡಿದರೆ ಸ್ವಾಮಿ, ತಾವು ಯಾವ ರಂಗದಲ್ಲಿ ಗಳಿಕೆ ಮಾಡಿದ್ದೀರಿ ಎಂದು ತಮ್ಮನ್ನು ಕೇಳ ಬೇಕಾಗುತ್ತದೆ ಇನ್ನೊಂದು ವಿಷಯ ಹೇಳಬೇಕೆಂದರೆ ಈ ಸಾರಿ ವನಸ್ಪತಿ ಬೆಲೆ ಏರಿಕೆಗೆ ಕಾರಣ ಯಾರೋ ಒಬ್ಬರು ಅಧಿಕಾರವನ್ನು ಬಿಟ್ಟು ಹೋದ ಮಂತ್ರಿಗಳು ಎಂದು ಹೇಳಿದ್ದೀರಿ, ಅಂದರೆ ತಮ್ಮ ಹೇಳಿಕೆಗೆ ಏನಾದರೂ ಬೆಲೆ ಇದೆಯೆ ? ಸ್ವಾಮಿ, ಕಳೆದ 19 ತಿಂಗಳಲ್ಲಿ 20 ಅಂಶಗಳ ಬಗ್ಗೆ ಏನೇನು ಪ್ರಚಾರ ಮಾಡಿದ್ದೀರಿ ಎಂಬ ಬಗ್ಗೆ ನಮಗೆ ಒಂದು ಪಟ್ಟಿಯನ್ನು ಮಾಡಿಕೊಡಬೇಕು. ಇದಕ್ಕಾಗಿ ಎಷ್ಟು ಅಡ್ವರ್ಟೈಸ್‌ಮೆಂಟ್ ಛಾರ್ಜಸ್ ಕೊಟ್ಟಿದ್ದೀರಿ. ಈ 25 ಅಂಶಗಳನ್ನು ಜನತೆಗೆ ತೋರಿಸುವ ಸಲುವಾಗಿ ಏನೇನು ನಾಟಕಗಳನ್ನು ಮಾಡುವುದಕ್ಕೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂಬುದಕ್ಕೆ ನಮಗೆ ವಿವರಣೆ ಕೊಡಬೇಕು. ತಾವು ಒಂದೊಂದು ಅಂಶದ ಪ್ರಚಾರ ಕ್ಕಾಗಿಯೇ ಒಂದೊಂದು ಪುಸ್ತಕಗಳನ್ನು ನಮಗೆ ಪ್ರಿಂಟ್ ಮಾಡಿಸಿ ಕಳುಹಿಸಿಕೊಟ್ಟಿದ್ದೀರಿ. ಇದಕ್ಕೆಲ್ಲಾ ದುಡ್ಡು ಎಲ್ಲಿಂದ ಬಂತು ? ಪೇಪರ್ ಎಷ್ಟು ಖರ್ಚಾಯಿತು ಎಂಬುದನ್ನ ನಮಗೆ ತಿಳಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಅದೆಲ್ಲಾ ಕೇಂದ್ರ ಸರ್ಕಾರದಿಂದ ಖರ್ಚಾಗಿದೆ.

ಶ್ರೀ ಹೆಚ್. ಡಿ ದೇವೇಗೌಡ.—ಸ್ವಾಮಿ, ತುರ್ತುಪರಿಸ್ಥಿತಿ ಇದ್ದಾಗ ಯಾವ ಅಸಿಸ್ಟೆಂಟ್ ಇಂಜಿನಿಯರ್ ನೋಡಲ 2 ಅಂಶದ ಕಾರ್ಯಕ್ರಮ, ಎಕ್ಸಿಕ್ಯುಟಿವ್ ಇಂಜಿನಿಯರ್ ನೋಡಲ 20 ಅಂಶದ ಕಾರ್ಯಕ್ರಮ ಸೂಪರಿಂಟೆಂಡೆಂಟ್ ಇಂಜಿನಿಯರ ನೋಡಲ 20 ಅಂಶದ ಕಾರ್ಯ ಕ್ರಮ ಚೀಫ್ ಇಂಜಿನಿಯರ್ ನೋಡಲ 20 ಅಂಶದ ಕಾರ್ಯಕ್ರಮ. ಹೀಗೆ ಮಾಡುವುದರಿಂದ ದೇಶವನ್ನು ಮುಂದಕ್ಕೆ ತರುವುದಕ್ಕಾಗುತ್ತದೆಯೇ ? ಸ್ವಾಮಿ ಒಂದೊಂದು ಜಿಲ್ಲೆಯಲ್ಲಿ ಒಬ್ಬೊಬ್ಬ ಅಧಿಕಾರಿಯೂ ತಾನು ಓಡಾಡುವ ವಾಹನದ ಪೆಟ್ರೋಲ್‌ಗಾಗಿ ಎಷ್ಟು ಖರ್ಚುಮಾಡಿ ದ್ದಾನೆ, ಆತನ ದಿನದ ಭತ್ಯ ಏನು ಎಸ್ಟ್ಯಾಬ್ಲಿಷ್‌ಮೆಂಟ್ ಗೋಸ್ಕರ ಎಷ್ಟು ಖರ್ಚಾಗಿದೆ ಎಂಬುದನ್ನು ಒಮ್ಮೆ ತಾವು ರಿವ್ಯೂ ಮಾಡಬೇಕು. ಆದೇರೀತಿ ಇನ್ನೊಂದು ವಿಷಯ ಹೇಳಬೇಕೆಂದರೆ ವಿಧಾನ ಸೌಧದ ಸೆಕ್ರೆಟರಿಯೇಟ್‌ನಲ್ಲಿ ಕ್ಲಿಯರೆನ್ಸ್ ವೀಕ್ ಎಂದು ಮಾಡಿದಿರಿ. ಅದು ಹೇಗೆ ಎಂದರೆ ಇಲ್ಲಿರುವ ಫೈಲನ್ನು ಬೇರೆ ಕಡೆಗೆ ಫರ್ವಾರ್ಡ್ ಮಾಡುವುದು, ಬೇರ ಕಡೆಯಿಂದ ಇಲ್ಲಿಗೆ ಫರ್ವಾಡ್ ಮಾಡುವುದು. ಅಷ್ಟೇ ಒಂದು ಫೈಲ್ ಇದ್ದರೆ ಅದನ್ನು ಎಕ್ಸಿಕ್ಯುಟಿವ್ ಇಂಜಿನಿಯರ್ ಫರ್ವಾರ್ಡೆಡ್ ಟು ದಿ ಚೀಫ್ ಇಂಜಿನಿಯರ್ ಎಂದು ಬರೆದು ಅವನು ಅದೇ ಫೈಲನ್ನು ಮತ್ತೆ ಫರ್ವಾಡೆಡ್ ಬ್ಯಾಕ್ ಟು ದಿ ಎಕ್ಸಿಕ್ಯುಟ್ ಇಂಜಿನಿಯರ್ ಫಾರ್ ಡಿಸ್ಪೋಸಲ್ ಎಂದು ಬರೆಯು ತ್ತಿದ್ದರು. ಇದು ಬರೀ ಬಾಯಲ್ಲಿ ಹೇಳಿದ್ದು ಆಯಿತೇ ವಿನಃ ಕಾರ್ಯತಃ ತುರ್ತು ಪರಿಸ್ಥಿತಿಯಲ್ಲಿ ಯಾವ ಕೆಲಸವೂ ಕೂಡ ಆಗಲಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ ಇವರು ಕುಟುಂಬ ಯೋಜನೆ ಎಂದು ಮಾಡಿ ರಾಜ್ಯದಲ್ಲಿದ್ದ ಬಡರವನ್ನೆಲ್ಲ ತೊಲಗಿಸಿದರು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಲ್ಪ ತಾವು ಹಿಂದೆ ಏನೇನು ಭಾಷಣ ಮಾಡಿದಿರಿ ಅದನ್ನೆಲ್ಲಾ ಓದಿಕೊಂಡು ಇಲ್ಲಿ ಭಾಷಣ ಮಾಡಿ.

3-00 P. M.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷಣಿಯವರೆ ನಾನು ಹೇಳುತ್ತಾ ಇದ್ದೇನೆ, ಈವತ್ತು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಅದರಲ್ಲಿ 25 ಅಂಶಗಳ ಕಾರ್ಯಕ್ರಮಗಳ ಬಗ್ಗೆ ತಮ್ಮ ಗಮನವನ್ನು ಸೆಳೆಯ ಬಯಸುತ್ತೇನೆ. ಈ 20-25 ಅಂಶಗಳ ಕಾರ್ಯಕ್ರಮದ ಪೂರ್ವ ಹಿನ್ನೆಲೆಯನ್ನು ಪ್ರಸ್ತಾಪ ಮಾಡಿದರೆ ಗ್ರಾಮಾಂತರ ಅಭಿವೃದ್ಧಿಯಾಗಲಿ ಜನತೆಯ ಕಲ್ಯಾಣದ ಕಾರ್ಯಕ್ರಮಗಳಾಗಲಿ, ಆಗಿಲ್ಲ. ಅದರ ವಿರುದ್ಧವಾಗಿ ನಡೆದಿದೆ ಎಂದು ಹೇಳಿದರೆ ತಪ್ಪಾಗಲಾರದು, ಪ್ರಚಾರದಿಂದ ಈವತ್ತಿನದಿವರ ಪ್ರಗತಿಯನ್ನು

ಸಾಧಿಸುವುದಕ್ಕೆ ಸಾಧ್ಯವಾಗುವುದಿಲ್ಲ ಈವತ್ತು ಕೇವಲ ಅಧಿಕಾರ ನಡೆಸತಕ್ಕಂಥ ಅಧಿಕಾರಿಗಳು ಟಿ. ಎ. ಮತ್ತು ಡಿ. ಎ. ಪಡೆಯುವಂಥ ಕೆಲಸದಿಂದ ಸಾಧ್ಯವಾಗುವುದಿಲ್ಲ, ಇಷ್ಟೇ ಅಲ್ಲ ನಾಟಕ ಸಿನಿಮಾಗಳಲ್ಲಿಯೂ ಈ 20 ಅಂಶಗಳ ಕಾರ್ಯಕ್ರಮದ ಪ್ರಚಾರ ನಡೆದಿರುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ದೇಶದ ಆರ್ಥಿಕ ಪ್ರಗತಿಯಾಗಬೇಕಾದರೆ ದೇಶದ ಜನತೆಗೆ ಸರಿಯಾದ ತಿಳಿವಳಿಕೆಯನ್ನು ಕೊಟ್ಟರೇನೇ ಸಾಧ್ಯ. ಆದ್ದರಿಂದ ಸಾಕಷ್ಟು ಪ್ರಚಾರಕಾರ್ಯ ಕೈಗೊಂಡಿದ್ದು. ನಿಮ್ಮ ಸರ್ಕಾರದವರು ಪ್ರಚಾರವಿಲ್ಲದೆ ಆರ್ಥಿಕಪ್ರಗತಿಯನ್ನು ಸಾಧಿಸುತ್ತೇವೆಂದು ಹೇಳಿದರೆ ಪ್ರಚಾರಕಾರ್ಯ ಬಿಟ್ಟುಬಿಡಿ. ನಿಮ್ಮ ಸರ್ಕಾರದವರು ಪ್ರಚಾರವಿಲ್ಲದೆ ಕೈಲಾಸ ತೋರಿಸುವುದಾದರೆ ತೋರಿಸಿ ಬೇಡವೆಂದು ಹೇಳುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಹಾಗಾದರೆ ನೀವು ಹಿಂದೆ ಸರ್ಕಾರವನ್ನು ನಡೆಸಲಿಲ್ಲವೆ ? ಆಗ ಪ್ರಚಾರ ಹೇಗೆ ಮಾಡುತ್ತಿದ್ದೀರಿ, ಈಗಿನ ಪ್ರಚಾರ ಮಾಡಿದ್ದು ದಯವಿಟ್ಟು ತಿಳಿಸಬೇಕು ಸಿನಿಮಾ ನಟಿ ನಟಿಯರನ್ನು ಕರೆಸಿ ಪ್ರಚಾರ ಮಾಡಬೇಕಾಗಿತ್ತೆ ಎಂದು ಕೇಳುತ್ತಿದ್ದೇನೆ. ನಿಮಗೆ ವಯಸ್ಸಾಯಿತು,

ಶ್ರೀ ಎಚ್. ಎಂ. ಚನ್ನಬಸಪ್ಪ.—ನನಗೆ ವಯಸ್ಸಾಗಿಲ್ಲವೆಂದು ಯಾರು ಹೇಳಿದರು.

ಶ್ರೀ ಎಚ್. ಡಿ. ದೇವೇಗೌಡ.—ಸನ್ಮಾನ್ಯ ಸಭಾಧ್ಯಕ್ಷಣಾಯವರೇ ಒಂದು ವಿವರವನ್ನು ಈ ಸಭೆಯಲ್ಲಿ ಕೊಡಲಿಕ್ಕೆ ಇಚ್ಛೆಪಡುತ್ತೇನೆ. ನಮ್ಮ ಪಕ್ಷದವರು ಅಧಿಕಾರಕ್ಕೆ ಬಂದ ಬಡವರಿಗೆ ಮಾಡಿರ ತಕ್ಕಂಥ ಎಲ್ಲ ಕಲ್ಯಾಣಕಾರ್ಯಗಳನ್ನು ವಾಪಸ್ ತೆಗೆದುಕೊಳ್ಳುತ್ತಾರೆ, ಜನತೆಗೆ ಏನು ಹೌಸಿಂಗ್ ಸ್ಕೀಮ್‌ನಲ್ಲಿ ಮನೆಗಳನ್ನು ಕೊಟ್ಟಿರುತ್ತಾರೆ ಆ ಮನೆಗಳನ್ನೆಲ್ಲ ವಾಪಸ್ ತೆಗೆದುಕೊಳ್ಳುತ್ತಾರೆಂದೆಲ್ಲ ಪ್ರಚಾರ ಮಾಡಿರುತ್ತಾರೆ. ನಾನು ಕೇಳುತ್ತಿದ್ದೇನೆ ಅದನ್ನೆಲ್ಲ ತೆಗೆದುಕೊಂಡು ಬಿರ್ಲಾಗ್ ಕೊಡುತ್ತೇವೆಯೋ ? ಅವರೇನು ನಮ್ಮ ಹತ್ತಿರ ಬಂದುವೆ ಶ್ರೀಮಂತರು ನಮ್ಮ ಹತ್ತಿರಬಂದುಗಳೇ ಎಂದು ಈವತ್ತಿನ ದಿವಸ ಕೇಳಬೇಕಾಗಿದೆ ಈ ಪ್ರಚಾರ ಜೊತೆಗೆ ಇದೊಂದು ಪ್ರಚಾರ ಮಾಡಿರುತ್ತಾರೆ ಅದೇನೆಂದರೆ ಜನತಾಪಕ್ಷ ಅಧಿಕಾರಕ್ಕೆ ಬಂದರೆ ಬಡವರ ಕಲ್ಯಾಣಕ್ಕಾಗಿ ಕೈಗೊಂಡಿರ ತಕ್ಕಂಥ ಕಾರ್ಯಗಳೆಲ್ಲ ನಿಂತುಹೋಗುತ್ತವೆ, ಅದನ್ನೆಲ್ಲಾ ವಾಪಸ್ ಪಡೆಯುತ್ತಾರೆ, ಲೇವಾದೇವಿಗಳನ್ನೆಲ್ಲವನ್ನು ಯಥಾ ಪ್ರಕಾರ ಮುಂದುವರಿಸುತ್ತಾರೆ, ಮನೆಗಳನ್ನು ಹರಾಜುಮಾಡಿ ವಾಪಸ್ ತೆಗೆದುಕೊಳ್ಳುತ್ತಾರೆ ಗೇಣಿದಾರರಿಂದ ಭೂಮಿಯನ್ನು ಬಿಡಿಸಿ ಭೂಮಾಲಿಕರಿಗೆ ವಾಪಸ್ ಕೊಡಿಸುತ್ತಾರೆಂದಲ್ಲ ಹೇಳಿ ಜನರಿಗೆ ಒಂದು ಕೆಟ್ಟಭಾವನೆಯನ್ನು ಈ ಪ್ರಚಾರಗಳ ಮುಖಾಂತರ ಮಾಡಿಸಿರುತ್ತಾರೆ. ಈ ಸದನದ ಮುಖಾಂತರ ಒಂದು ವಿವರಣೆಯನ್ನು ಕೊಡಲು ಇಚ್ಛೆಪಡುತ್ತೇನೆ ಬಹುಶಃ ಕಾಂಗ್ರೆಸ್ ಸರ್ಕಾರ ಬಡವರಮೇಲೆ ಎಷ್ಟು ಕಾಳಜಿ ಇಟ್ಟುಕೊಂಡು ಕೆಲಸಮಾಡಿತೋ ಅದಕ್ಕಿಂತಲೂ ಹೆಚ್ಚಿನ ಕಾಳಜಿ ಅನುಕಂಪ ಜನತಾ ಪಕ್ಷದ ಕಾರ್ಯಕರ್ತರಿಗಾಗಲಿ ಅವರ ಮುಖಂಡರಿಗಾಗಲಿ ಕಡಿಮೆ ಇಲ್ಲವೆಂದು ಹೇಳುತ್ತಾ ಬಡವರ ಕಲ್ಯಾಣಕ್ಕಾಗಿ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಈ ಸಭೆಯಲ್ಲಿ ತಿಳಿಸ ಬಯಸುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ನಮ್ಮ ಅಳಿಯನಿಗೆ ನಾಗಮಂಗಲದಲ್ಲಿ ಜಮೀನು ಕೊಡುವುದಿಲ್ಲ. ಅಲ್ಲಿ ಒಂದು ಸೈಟನ್ನೂ ಕೂಡ ಕೊಡುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ರಾಷ್ಟ್ರೀಕೃತ ಬ್ಯಾಂಕ್‌ಗಳನ್ನು ಸಾಮಾಜಿಕ ಹತೋಟಿಗೆ ತರುತ್ತೀರಾ ?

ಶ್ರೀ ಕೊಣಂದೂರು ಲಿಂಗಪ್ಪ.—ನಾವು ಯಾವ ನಗರ್‌ವಾಲಾರಿಗೂ ರಾಷ್ಟ್ರೀಕೃತಬ್ಯಾಂಕಿನಿಂದ 60 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡುವುದಿಲ್ಲ.

SRI. H. M. CHANNABASAPPA.—Every day is not Sunday

ಶ್ರೀ ಎಚ್. ಡಿ. ದೇವೇಗೌಡ.—ನೀವು ಅದನ್ನು ತಿಳಿದುಕೊಂಡಿದ್ದೀರಾ, ನಿಮಗೆ ಜ್ಞಾನೋದಯವಾಗಿದೆಯೇ ಎಂದು ಕೇಳುತ್ತೇನೆ. ರಾಷ್ಟ್ರದ ಜನತೆಗೆ ವಿವರ ಕೊಡಲಿಕ್ಕೆ ಇಚ್ಛೆಪಡುತ್ತೇನೆ, ಜನತಾ ಪಕ್ಷವೂ ಬಡವರ ವಿರೋಧಿ, ಸಮಾಜದಲ್ಲಿರತಕ್ಕಂಥ ದುರ್ಬಲವರ್ಗಗಳ ವಿರೋಧಿ

ಎಂದು ಹೇಳತಕ್ಕಂತ ಆರೋಪ ಏನು ಇದೆ ಅದು ನಿಜಕ್ಕೂ ಹುಸಿಯಾಗಿರುತ್ತದೆ. ಜನತೆಯ ಮನಸ್ಸಿನಲ್ಲಿ ಏನು ಈ ಒಂದು ಭಾವನೆಯನ್ನು ಮೂಡಿಸಿದ್ದಾರೆ ಅದನ್ನು ಕಿತ್ತೊಗೆಯಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಅಧ್ಯಕ್ಷಣಿಯವರೇ ಶ್ರೀಮಾನ್ ಬಸವಲಿಂಗಪ್ಪನವರು ರಾಜ್ಯಸರ್ಕಾರದ ಬಗ್ಗೆ ಮಾತನಾಡುತ್ತಾ ಹೇಳಿದರು, ಅದರ ಬಗ್ಗೆ ನಾನು ಯೋಚನೆ ಮಾಡುವುದಕ್ಕೆ ಹೋಗುವುದಿಲ್ಲ.

ಇನ್ನು ಲಾ ಮತ್ತು ಆರ್ಡರ್ ಪರಿಸ್ಥಿತಿ ಬಗ್ಗೆ ಬಂದು ಮಾತನ್ನು ಹೇಳಿದರು- ನಮ್ಮ ಜನತಾಪಕ್ಷದ ಕಾರ್ಯಕರ್ತರು ನಿಮ್ನವರ್ಗದವರು, ಅಲ್ಪಸಂಖ್ಯಾತರ ಬಗ್ಗೆ ಬಹಳ ನಿಕೃಷ್ಟ ಭಾವನೆಯಿಂದ ನೋಡುತ್ತಿದ್ದಾರೆಂದು ಹೇಳಿದರು. ನಾನು ಬಹಳ ವಿಷಾದದಿಂದ ಹೇಳುತ್ತೇನೆ ಸಮಾಜದಲ್ಲಿ ಯಾವುದೇ ವ್ಯಕ್ತಿಯಾಗಲಿ ಯಾವುದೇ ಪಕ್ಷವಾಗಲಿ ಈವತ್ತು ಸಮಾಜಘಾತುಕತನದಿಂದ ನಡೆದುಕೊಂಡಿದ್ದರೆ ಆತನಿಗೆ ಶಿಕ್ಷೆಯನ್ನು ಮಾಡಲೇಬೇಕು. ಈಗಲೂ ನಿಮ್ಮ ಕೈಯಲ್ಲಿಯೇ ಅಧಿಕಾರವಿರುತ್ತದೆ. ಒಂದು ಪಕ್ಷದ ಹಿತಕ್ಕಾಗಿ ಪಕ್ಷದ ಯಶಸ್ವಿಗಾಗಿ ಮಾಡತಕ್ಕದಲ್ಲ. ಪ್ರಜಾಪ್ರಭುತ್ವದ ಉಳುವಿಗಾಗಿ ಮಾಡತಕ್ಕದ್ದಾಗಿರುತ್ತದೆ. ಆದ್ದರಿಂದ ದಯವಿಟ್ಟು ಏನಾದರೂ ಮಾಡಿ ಈ ಒಂದು ಅಪಪ್ರಚಾರವನ್ನು ತಡೆಹಿಡಿಯಬೇಕೆಂದು ಈ ಸಂದರ್ಭಧಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ, ರಾಜ್ಯ ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಯಾವ ಪಕ್ಷವೇ ಆಗಲಿ ಈವತು ತಪ್ಪು ಮಾಡಿದರೆ ಪಕ್ಷಾತೀತ ಭಾವನೆಯಿಂದ ಕೆಲಸ ಮಾಡದಿದ್ದರೆ ಅದರಿಂದ ಆಗತಕ್ಕಂಥ ಅನಾಹುತಕ್ಕೆ ನೀವೇ ಜವಾಬ್ದಾರರಾಗಬೇಕಾಗುತ್ತದೆ. 80 ಮನೆಗಳು ಅಂದರೆ 80 ಕುಟುಂಬಗಳು ಇರಬಹುದು, ಅವರು ಯಾರು ಬಹುಸಂಖ್ಯಾತರಿಗೆ ಸೇರಿದವರಲ್ಲ. ಹುಪ್ಪಾರರು, ಅವರು ಅಲ್ಪಸಂಖ್ಯಾತರಾಗಿರುತ್ತಾರೆ. ಅವರ ಮೇಲೆ ನಡೆನ ದೌರ್ಜನ್ಯಕೃತ್ಯದಿಂದ ಅವರು ಊರನ್ನು ಬಿಟ್ಟು ಹೊರಟು ಹೋಗಿರುತ್ತಾರೆ ಯಾರ್ಯಾರು ಹೋಗಿದ್ದಾರೆ, ಯಾರ್ಯಾರು ಕಾರ್ಯಕರ್ತರು ಎನ್ನುವುದನ್ನೆಲ್ಲ ಪೋಲೀಸ್ ಸ್ಟೇಷನ್‌ಗೆ ದೂರು ಕೂಡ ಕೊಟ್ಟಿರುತ್ತಾರೆ. ತಮ್ಮ ಸರ್ಕಾರ ವಿಚಾರಣೆ ಮಾಡಿ ದೂರು ಕೊಟ್ಟಾಕ್ಷಣಕ್ಕೆ ವಿರುದ್ಧವಾಗಿ ವರ್ತಿಸಿದವರಿಗೆಲ್ಲ ಗಲ್ಲಿಗೆ ಏರಿಸಿ ಎಂದು ಹೇಳುವುದಿಲ್ಲ. ಆದರೆ ಅವರಿಗೆ ರಕ್ಷಣೆಯನ್ನು ಕೊಡುವುಧು ರಾಜ್ಯದ ಎಲ್ಲ ಮೂರುಕೋಟಿ ಜನರ ಹೊಣೆಯಾಗಿದೆ, ತಾವು ಅಧಿಕಾರದಲ್ಲಿದ್ದೀರಿ, ಈ ಕೆಲಸವನ್ನು ನಿರ್ವಂಚನೆಯಿಂದ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷಣೀಯವರೇ ಮತ್ತೊಂದು ವಿಷಯ, ಲಾ ಅಂಡ್ ಆರ್ಡರ್ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯಕ್ಕೆ ಯೂತ್ ಕಾಂಗ್ರೆಸ್ ನೇತಾರರು ಬಂದಾಗ ಮಾಡಿದಂಥ ಬಂದೋಬಸು ಪ್ರಧಾನ ಮಂತ್ರಿಯವರು ಬಂದಾಗಲೂ ಕೂಡ ಅಷ್ಟೊಂದು ಬಂದೂಬಸ್ತು ಮಾಡಿರಲಿಲ್ಲ. ಸುಮಾರ 50 ಲಕ್ಷ ರೂಪಾಯಿ ಮೇಲ್ಪಟ್ಟು ಖರ್ಚುಮಾಡಿರುತ್ತಾರೆ.

8 ಜನ ಪೋಲೀಸ್ ಕಮಿಷನರ್ಸ್, 24 ಜನ ಸರ್ಕಲ್ ಇನ್‌ಸ್ಪೆಕ್ಟರ್ಸ್ 54 ಜನ ಸಬ್‌ಇನ್‌ಸ್ಪೆಕ್ಟರ್ಸ್ 222 ಜನ ಹೆಡ್‌ಕಾನ್‌ಸ್ಟೇಬಲ್ಸ್ 612 ಜನ ಪೋಲೀಸ್ ಕಾನ್‌ಸ್ಟೇಬಲ್ಸ್, ಕೆ.ಎಸ್ ಆರ್.ಪಿ.ಸಿ.ಯ 45 ಪ್ಲಾಟೂನ್ಸ್‌ನಲ್ಲಿ 2160 ಜನ ಸಿ.ಆರ್.ಪಿ.ಯ 63 ಪ್ಲಾಟೂನ್ಸ್ ಜನ ಸೇರಿದರೆ ಒಟ್ಟು 3082 ಜನರನ್ನು ಸರ್ಕಾರದ ಬಂದೂಬಸ್ತ್‌ಗೆ ಇಟ್ಟುಕೊಂಡಿದ್ದಾರೆ. ಇದು ಕರ್ನಾಟಕ ರಾಜ್ಯ ಸರ್ಕಾರ ಇದನ್ನು ಮಾನ್ಯ ಸಿದ್ಧವೀರಪ್ಪನವರು ಮರೆತರೇ?

ಶ್ರೀ ಎಚ್. ಸಿದ್ಧವೀರಪ್ಪ.—ನಿಮ್ಮ ಅವಧಿಯಲ್ಲಿ ಇದಕ್ಕಿಂತ ಹೆಚ್ಚಾಗಿ ಮಾಡಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.— ತಾವು ಈಗ ತಮ್ಮ ಮನಸ್ಸಿನ ಕ್ರೋಧವನ್ನು ಬಿಡಿ. ಇಲ್ಲಿ ನೋಡಿ. ಇದು ನಿಮ್ಮ ಸರ್ಕಾರದ ಆಜ್ಞೆ ಇದರಲ್ಲಿ ಇಂಟ್ರಾಡಕ್ಷನ್, ಪ್ರಿಯಾಂಬಲ್ಲನ್ನು ಹಾಕಿ ಪ್ರೋಗ್ರಾಂನ ವ್ಯವಸ್ಥೆಯನ್ನೆಲ್ಲಾ ಹೇಳಿದ್ದಾರೆ. ಅರೇಂಜ್‌ಮೆಂಟ್ಸ್ ಆಫ್ ಲಾಲ್‌ಬಾಗ್. ಅರೇಂಜ್‌ಮೆಂಟ್ಸ್ ಅಫ್ ಎರ್‌ಪೋರ್ಟ್ ಟು ಲಾಲ್‌ಬಾಗ್ ಇದೆಲ್ಲವನ್ನೂ ಇದರಲ್ಲಿ ಹೇಳಿದ್ದಾರೆ ಮಾನ್ಯ ಪ್ರಧಾನ ಮಂತ್ರಿಯವರಿಗೂ ಇಷ್ಟೊಂದು ಅರೇಂಜ್‌ಮೆಂಟ್ಸ್ ಇರಲಿಲ್ಲ. ಈ ಲಾ ಅಂಡ ಆರ್ಡರ್ ಪರಿಸ್ಥಿತಿಯನ್ನು ಮೈನ್‌ಟೈನ್ ಮಾಡುವಾಗ ಈ ವ್ಯಕ್ತಿಯ ರಕ್ಷಣೆಗೆ ತಾವು ಏನೇನು ಮಾರ್ಪಾಡುಗಳನ್ನು ಮಾಡಿದ್ದೀರಿ ಇದರಲ್ಲಿ ಕಿಂಚಿತ್ತಾದರೂ ರಾಜ್ಯದ ಜನತೆಯ ಬಗ್ಗೆ ಅನುಕಂಪ

ಇರಲಿ ಎನ್ನುವ ದೃಷ್ಟಿಯಿಂದ ಈ ವಿಷಯವನ್ನು ನಾನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಇವತ್ತು ಈ ಫ್ಯಾಮಿನ್ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಈಗ ಚುನಾವಣೆ ಮುಗಿದುಹೋಗಿದೆ. ಈ ಶಾಸನಸಭೆಯ ಚುನಾವಣೆ ಬರುವವರೆಗೆ ಚುನಾವಣೆ ಇಲ್ಲ ಈಗ ಅನೇಕ ಊರಿನಲ್ಲಿ ಜನರಿಗೆ ಕುಡಿಯುವುದಕ್ಕೆ ನೀರು ಇಲ್ಲವಾಗಿದೆ. ಈ ಸಮಸ್ಯೆ ಕೇವಲ ಒಂದೇ ಒಂದು ಕ್ಷೇತ್ರಕ್ಕೆ ಸೀಮಿತವಾದುದಲ್ಲ. ತಾವು 1972ನೇ ಇಸವಿಯಲ್ಲಿ ಎಷ್ಟು ಟ್ರಕ್‌ಗಳನ್ನು ಕೊಂಡಿದ್ದೀರಿ. ಅವು ಈಗ ಇದ್ದರೆ ಆ ಟ್ರಕ್‌ಗಳನ್ನಾದರೂ ಕಳಿಸಿ ಅವರಿಗೆ ನೀರನ್ನು ಒದಗಿಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ತಾವು ಈ ಹುಲ್ಲನ್ನು ಒದಗಿಸತಕ್ಕಂಥಾದ್ದು ಸಾಧ್ಯ ಇಲ್ಲ. ಇದಕ್ಕಾಗಿ ಪಿ. ಡಬ್ಲ್ಯು. ಡಿ ಇಲಾಖೆಯಿಂದ ಲಾರಿಯನ್ನು ಕೊಡಿಸುತ್ತೇವೆಂದು ಹೇಳಿದ್ದರು. ಅದು ಏನೇ ಇದ್ದರೂ ನನ್ನ ತಾಲ್ಲೂಕಿನಲ್ಲಿ ಇರುವ ಪರಿಸ್ಥಿತಿಯೇ ಎಲ್ಲಾ ಕಡೆಯಲ್ಲೂ ಇದೆಯೆಂದು ನಾನು ಭಾವಿಸುತ್ತೇನೆ. ಈ ಕುಡಿಯುವ ನೀರಿನ ಬಗ್ಗೆ ಕೊಟ್ಟಿರುವ ಸುಮಾರು 180 ಅರ್ಜಿಗಳು ಹಾಗೆಯೇ ಬಿದ್ದಿವೆ. ಇದಕ್ಕಾಗಿ ಇವತ್ತು ಸ್ವಲ್ಪ ಹಣವನ್ನು ಆದರೂ ವೆಚ್ಚ ಮಾಡುವ ಚಿಂತೆ ಸರ್ಕಾರಕ್ಕೆ ಇಲ್ಲ. ಯುವಕರ ಮೇಳವನ್ನು ಮಾಡುವುದಕ್ಕೆ ಖಾಸಗೀ ಲಾರಿಗಳನ್ನು ಏರ್ಪಾಡು ಮಾಡಿದ್ದೀರಿ. ಇದಕ್ಕಾಗಿ ಕೆ.ಎಸ್.ಆರ್.ಟಿ.ಸಿ ಬಸ್‌ಗಳನ್ನು ಹಿಡಿದುಕೊಂಡು ಬನ್ನಿ ಎಂದು ಹೇಳಿದಂತ ಜನ ನೀವು ಈ ಸತ್ಕಾರಕ್ಕೆ ಖಾಸಗೀ ಲಾರಿಗಳನ್ನಾದರೂ ಕಳಿಸಿ ಈ ನೀರ. ಸಾಕಾಣಿಕಾ ವೆಚ್ಚದ ಹೊಣೆಗಾರಿಕೆಯನ್ನು ನೀವೇ ವಹಿಸಿಕೊಂಡು ಇದನ್ನು ಮಾಡಿ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇನ್ನು ಕೊನೇದಾಗಿ ಈ ಎಕನಾಮಿಕ್ ಅಫೆಂಡರ್ಸ್ ಏನಿದ್ದಾರೆ ಈ ಸಮಾಜ ಘಾತುಕಶಕ್ತಿಗಳನ್ನು ಕಾಫಿಪೋಸಾ ಕೆಳಗೆ ಹಿಡಿದುಕೊಂಡು ಬಂದು ಜೈಲಿಗೆ ಹಾಕಿದರು. ನಮ್ಮ ಕರ್ನಾಟಕ ರಾಜ್ಯದ ಮಾನ್ಯ ಮುಖ್ಯ ಮಂತ್ರಿಯವರು ಶಿವಮೊಗ್ಗದಲ್ಲಿ ಭಾಷಣ ಮಾಡುತಾ ಈ ಸೊಸೈಟಿಯಲ್ಲಿ ದುಡ್ಡು ಹೊಡೆಯುವವರನ್ನೆಲ್ಲಾ ಒಳಕ್ಕೆ ಹಾಕಿಬಿಡುತ್ತೇವೆಂದು ಹೇಳಿದರು.

ಶ್ರೀ ಕೋಣಂದೂರು ಲಿಂಗಪ್ಪ.—ಅವರನ್ನೆಲ್ಲಾ ಕಾಂಗ್ರೆಸ್ ಒಳಕ್ಕೆ ಹಾಕುತ್ತಾರೆಂದು ಹೇಳಿದ್ದಾರೆಯೇ?

Sri H. D. DEVE GOWDA. –Misa will be applied to all the economic offenders.— ಈ ಸೊಸೈಟಿಗಳಲ್ಲಿ ದುಡ್ಡನ್ನು ಹೊಡೆದವರು ಪಂಚಾಯತಿಗಳಲ್ಲಿ ದುಡ್ಡು ಹೊಡೆದವರನ್ನು ಒಳಕ್ಕ ಹಾಕುತ್ತೇವೆಂದು ಹೇಳಿದ್ದಾರೆ. Audit and Appropriation account of 1971–72, 1973–74, 1974–75, on the co-operation Institutions ಬಗ್ಗೆ ಮಾನ್ಯ ಚನ್ನಬಸಪ್ಪನವರು ಯಾವುದನ್ನಾದರೂ ಓದಿದ್ದಾರೆಯೇ ಎಂದು ನಾನು ಅವರನು ಕೇಳುತ್ತೇನೆ. ಇದರ ಬಗ್ಗೆ ತಾವು ಏನು ಕಾರ್ಯ ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಬೇಕು. ಈ ಸಭೆಯಲ್ಲಿ ನಿಮ್ಮೆಲ್ಲರ ಆದೇಶದ ಮೇಲೆ ಈ ಸದನದ ಒಂದು ಸಮಿತಿಯವರು ಮಾಡಿದಂತ ಕೆಲಸದ ಬಗ್ಗೆ, ಸಮಿತಿಯವರು ಕೊಟ್ಟಂತಹ ವರದಿಯ ಬಗ್ಗೆ ಇಷ್ಟೊಂದು ತುಚ್ಛ ಮನೋಭಾವನೆ ಇದೆಯೇ? ಎಂದು ನಾನು ಕೇಳಬೇಕಾಗಿದೆ. ಇದು ಯಾವ ಸರ್ಕಾರಕ್ಕಾದರೂ ಗೌರವವನ್ನು ತರುತ್ತದೆಯೇ ಈ ಸಮಿತಿಯವರು ಕೇವಲ ಒಂದೇಒಂದು ಪಕ್ಷಕ್ಕೆ ಸಂಬಂಧಪಟ್ಟವರು ಅಲ್ಲ. ಈ ಸಮಿತಿಯಲ್ಲಿ ವಿರೋಧಪಕ್ಷದ ಸದಸ್ಯರು ಇದ್ದಾರೆ. ನಿಮ್ಮ ಪಕ್ಷದ ಸದಸ್ಯರೂ ಇದ್ದಾರೆ ಅದರಲ್ಲೂ ನಿಮ್ಮ ಪಕ್ಷದ ಸದಸ್ಯರು ಹೆಚ್ಚು ಇದ್ದಾರೆ. ಇಂತಹ ಒಂದು ರಿಪೋರ್ಟನ್ನು ನಾವು ಕೊಟ್ಟರೆ ಇದನ್ನು ಇಷ್ಟೊಂದು ನಿರ್ಲಕ್ಷ ಮನೋಭಾವನೆಯಿಂದ ನೋಡುತ್ತಿದ್ದೀರಿ ಎಂದರೆ ಇದು ನಿಮಗೆ ಗೌರವವನ್ನು ತರುತ್ತದೆಯೇ ? ಇವತ್ತು ಸರ್ಕಾರಕ್ಕೆ ತಾವು ಯಾವ ಮೇರೆಯನ್ನು ತೋರಿಸುತ್ತೀರಿ ಎಂದು ನಾನು ಬಹಳ ನೊಂದ ಮನಸ್ಸಿನಿಂದ ಕೇಳುತ್ತೇನೆ. ಇವತ್ತು ಸಣ್ಣಪುಟ್ಟ ತಪ್ಪನ್ನು ಮಾಡಿದವರನ್ನು ಮೀಸಾದಲ್ಲಿ ಹಾಕಿದ್ದೀರಿ. ಕೋಟ್ಯಾಂತರ ರೂಪಾಯಿಗಳ ಹಣವನ್ನು ಇವತ್ತು ಅಪವ್ಯಯ ಮಾಡಿದ್ದಾರೆ ಎನ್ನತಕ್ಕಂಥಾ ತೀರ್ಪನ್ನು ಈ ಸಮಿತಿಯವರು ಕೊಟ್ಟರೆ ತಾವು ಕೈಕೊಂಡಿರುವ ಕ್ರಮ ಏನು ಎಂಬುದನ್ನು ತಾವು ಹೇಳಬೇಕು. ನಿಮಗೆ ಇನ್ನೂ ಈ ದೇಶದಲ್ಲಿ ಅಧಿಕಾರದಲ್ಲಿರಬೇಕು. ಎಂದು ಆಸೆ ಇದೆ, ಈ ಕಾರು, ಬಂಗಲೆಗಳನ್ನು ನೋಡುತ್ತಾ ಅಧಿಕಾರದ ಆಸೆ ವ್ಯಾಮೋಹ ನಿಮಗೆ ಹೆಚ್ಚಾಗುತ್ತಿದೆ. ಇದು ನಿಮ್ಮ ಒಂದುಭ್ರಮೆ ಅಷ್ಟೆ. ಇದನ್ನು ಬಿಟ್ಟರೆ ನೀವು ನಿಮ್ಮ ಜೀವನದಲ್ಲಿ ಕೈಲಾಸವನ್ನು ಕಾಣುವುದಕ್ಕೆ ಆಗುವುದಿಲ್ಲ, ನಿಮಗೆ ಈ ಬಗ್ಗೆ ಜವಾಬ್ದಾರಿ ಇರಬೇಕು.

ಶ್ರೀ ಕೊಣಂದೂರು ಲಿಂಗಪ್ಪ.—ಜಂಟಿ ಜವಾಬ್ದಾರಿ ಇಲ್ಲ. ಒಂಟಿ ಜವಾಬ್ದಾರಿ ಇದೆ,

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರಿಯಾದ ಹಿಮ್ಮೇಳ ಇದೆ.

ಶ್ರೀ ಎಚ್. ಡಿ. ದೇವೇಗೌಡ.—ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಡೈರೆಕ್ಟರ್ ಫಾರಿನ್‌ನಲ್ಲಿದ್ದಾರೆ He has been summoned, ಅವರ ಮೇಲೆ ನಾಗಾಲೋಟದಲ್ಲಿ ಕ್ರಮ ತೆಗೆದುಕೊಳ್ಳುತ್ತಾರೆಯೇ ಎಂದು ನಾನು ಕೇಳುತ್ತೇನೆ. ಅವರನ್ನು ಸಸ್ಪೆಂಡ್ ಮಾಡುವುದಿಲ್ಲ. ಆವರನ್ನು ಬಿಟ್ಟು ತಬ್ಬಲಿಗಳಾದ ಗುಮಾಸ್ತರನ್ನು ಈ ರಾಜ್ಯದಲ್ಲಿ ಸಸ್ಪೆಂಡ್ ಮಾಡಿದ್ದಾರೆ. ನಿರಪರಾಧಿಗಳಾದಂತ 17 ಜನ ಗುಮಾಸ್ತರನ್ನು ತುರ್ತುಪರಿಸ್ಥಿತಿಯ ಸಮಯದಲ್ಲಿ ಸಸ್ಪೆಂಡ್ ಮಾಡಲಾಗಿದೆ ಎಂದು ಬೆಂಗಳೂರು ಆಕಾಶವಾಣಿಯಲ್ಲಿ ಹೇಳಿದ್ದಾರೆ. ಇವತ್ತು ನಾವು 1 1/2 ಕೋಟಿ ರೂಪಾಯಿ ಅಪವ್ಯಯವಾಗಿದೆ ಎಂದು ಹೇಳಿದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲ. ಇದು ಯಾರ ದುಡ್ಡು ಎಂದು ಕೇಳುತ್ತೇನೆ. A day will come when you will have to answer the public and it is not far of.

ನಮ್ಮನ್ನು ಈ ದೇಶದಲ್ಲಿ ಯಾರು ಕೇಳುವವರಿದ್ದಾರೆ ಎನ್ನುವಷ್ಟು ತುಚ್ಛ ಮನೋಭಾವನೆ ನಿಮ್ಮಲ್ಲಿದೆ. ಇನ್ನು ನಿಮ್ಮ ಆಟ ನಡೆಯುವುದಿಲ್ಲ. ನಡೆಯುವುದಕ್ಕೆ ಬಿಡುವುದಿಲ್ಲ.

ಶ್ರೀ ಕೊಣಂದೂರು ಲಿಂಗಪ್ಪ.—ರಿಪೀಟ್, ರಿಪೀಟ್, ರಿಪೀಟ್,

ಶ್ರೀ ಎಚ್ ಡಿ. ದೇವೇಗೌಡ.—ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ, ಸೇಲ್ಸ್ ಇಂಟರ್ ನ್ಯಾಷನಲ್‌ನಲ್ಲಿ, ಕೋ ಆಪರೇಟಿವ್ ಫೆಡರೇಷನ್‌ನಲ್ಲಿ ಕೋಟಿಗಟ್ಟಲೆ ಹಣ ದುರುಪಯೋಗ ಆಗಿದೆ. ಶಾಸನ ಸಭೆಯಲ್ಲಿ ನನ್ನ ಪಕ್ಷದ ಬೆಂಬಲ ಇದ್ದರೆ ಯಾರೂ ಕೇಳಲಿಕ್ಕೆ ಅಧಿಕಾರ ಇಲ್ಲ ಎಂದು ಮುಖ್ಯ ಮಂತ್ರಿಗಳು ಹೇಳುತ್ತಾರೆ. Those days have gone, you must know that. ನಿರ್ಮಲ ಎಂಜಿನಿಯರಿಂಗ್ ಕಂಪೆನಿಬಗ್ಗೆ ಜುಡಿಷಿಯಲ್ ಪ್ರೋಬ್ ಆಗಬೇಕು ಎಂದು ಕಮಿಟಿ ರಿಪೋರ್ಟ್ ಕೊಟ್ಟಿದೆ. ಅದರ ಬಗ್ಗೆ ಎಷ್ಟು ತಿರಸ್ಕಾರ. ಅದರಲ್ಲಿ ಏನು ಹೇಳಿದೆಯೆಂದರೆ.

> The Committee therefore recommends that a Commission of Enquiry be appointed under the Commission of Enquairy Act to enquire into the matter and the enquiry completed within six months.

ರಿಪೋರ್ಟ್ ಸಬ್‌ಮಿಟ್ ಮಾಡಿರುವುದು 17ನೇ ಸೆಪ್ಟಂಬರ್ 1975ರಲ್ಲಿ. ಇದು ನನ್ನ ವೈಯಕ್ತಿಕವಾದ ಪ್ರಶ್ನೆಯಲ್ಲ. ಈ ಸದನದಲ್ಲಿರತಕ್ಕ ನನ್ನ ಎಲ್ಲ ಸೋದರರಲ್ಲಿ ಕೇಳುತ್ತೇನೆ, ತಾವು ಇದಕ್ಕೆ ಜವಾಬ್ದಾರರಲ್ಲವೇ, ತಮಗೆ ಒಳ್ಳೆಯ ಆಡಳಿತ ಬೇಕು. ಎಂದು ಹೇಳುವ ಅಪೇಕ್ಷೆ ಇಲ್ಲವೇ ಯಾವ ಹಂಗಿಗಾಗಿ ಇದರ ಬಗ್ಗೆ ಡಿಮ್ಯಾಂಡ್ ಮಾಡುತ್ತಿಲ್ಲ. ಈ ಸದನದ ಸದಸ್ಯತ್ವ ನಿಮಗೆ ಶಾಶ್ವತವೆ? ನೀವು ಮಾಡಿದಂತಹ ಕೆಲಸವನ್ನು ಈ ದೇಶದ ಜನತೆ ನೋಡುವುದಿಲ್ಲವೆ? ಎಷ್ಟು ಜನ ನಿಮ್ಮಲ್ಲಿ ಯೋಗ್ಯರಿದ್ದೀರಿ? ಪ್ರಾಮಾಣಿಕರಿದ್ದೀರಿ ಯಾವ ಒಂದು ಕಾರಣದಿಂದ ತಾವು ಸದಸ್ಯ ಸ್ಥಾನದಲ್ಲಿದ್ದುಕೊಂಡು ಈ ಬಗ್ಗೆ ನ್ಯಾಯವಾದ ವಿಚಾರಣೆ ಮಾಡಬೇಕು ಎಂದು ಸರ್ಕಾರವನ್ನು ಒತ್ತಾಯ ಮಾಡುತ್ತಿಲ್ಲ ಎಂದು ನಾನು ಕೇಳುತ್ತೇನೆ? ವಿರೋಧಪಕ್ಷಗಳ ಕಡೆ ಕುಳಿತಿರತಕ್ಕ ಜನತೆಯ ಸಮಸ್ಯೆಯಲ್ಲ ಇದು. ಒಳ್ಳೆಯ ಆಡಳಿತ ಕೊಡಬೇಕು ಎಂಬ ಬಗ್ಗೆ ನಿಮಗೆ ಕಳಕಳಿ ಇದೆ. ಆದರೆ ಯಾತಕ್ಕೆ ನೀವು ಇವತ್ತು ಸುಮ್ಮನೆ ಇದ್ದೀರಿ, ಇದು ಕೇವಲ ಯಾವುದೋ ಒಬ್ಬ ವ್ಯಕ್ತಿಯ ಪ್ರಶ್ನೆಯಲ್ಲ. ಉತ್ತಮವಾದ ಆಡಳಿತ ಕೊಡುವುದು ಬೇಡ ಎಂದು ನಾವು ಹೇಳುವುದಿಲ್ಲ ಮತ್ತೆ ಜನ ನಿಮ್ಮನ್ನು ಅಧಿಕಾರಕ್ಕೆ ತಂದರೆ ನೀವೇ ಅಧಿಕಾರದಲ್ಲಿರಿ. ಸಾರ್ವಜನಿಕ ಹಣವನ್ನು ಎಷ್ಟು ದುಂದು ಮಾಡುವುದು? ಇವತ್ತು ಖಜಾನೆ ಹಣಕೂ ಸ್ವಂತ ಹಣಕ್ಕೂ ಯಾವುದೇ ವ್ಯತ್ಯಾಸವೇ ಇಲ್ಲ. ನಮ್ಮ ಹಿರಿಯ ಸದಸ್ಯರಾದ ಕೆ ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿಯವರು ಎರಡು ರಿಪೋರ್ಟ್ ಕೊಟ್ಟಿದ್ದಾರೆ. ಒಂದು ಕೆ ಎಸ್ ಆರ್‌ಟಿ.ಸಿ.ಗೆ ಸಂಬಂಧಿಸಿದ್ದು, ಇನ್ನೊಂದು ಫಿಲಂ ಡೆವಲಪ್‌ಮೆಂಟ್ ಕಾರ್ಪೋರೇಷನ್‌ಗೆ ಸಂಬಂಧಿಸಿದ್ದು. ಆ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಏನೂ

ಕರ್ನಾಟಕ ವಿಧಾನಮಂಡಲ
ಬೆಂಗಳೂರು. Bangalore.
ದಿನಾಂಕ Date.....

ಮಾಡದಿದ್ದಮೇಲೆ ಆ ಕಮಿಟಿಗಳನ್ನು ಯಾತಕ್ಕೆ ಮಾಡುತ್ತೀರಿ. ರದ್ದು ಮಾಡಿ ಕೇವಲ ಟಿ.ಎ., ಡಿ.ಎ. ಗೋಸ್ಕರ ನಾವು ಬಂದಿದ್ದೇವೆಯೋ ? ಅಥವಾ ಕೇವಲ ಈ ಸದನದ ಕೆಲಸವನ್ನು ನಡೆಸಿ ಕೊಂಡು ಹೋಗುವುದಕ್ಕೆ ಮಾತ್ರ ಬಂದಿದ್ದೇವೆಯೋ ಸಮಿತಿಯ ವರದಿ ಬಗ್ಗೆ ಗೌರವ ಕೊಡ ಬೇಕು. ಆಡಳಿತ ಸೂತ್ರವನ್ನು ಹಿಡಿದಿರತಕ್ಕ ನಿಮಗೆ ಹಳ್ಳಿಯ ... ಹಾಕುವುದಕ್ಕೆ ಸಾಧ್ಯವಿಲ್ಲವೆ? ಈ ಸದನದಲ್ಲಿ ಸದಸ್ಯರಾ ಸಂಖ್ಯಾಬಲ ಇದ್ದರೆ ಏನು ಬೇಕಾದರೂ ನಾವು ಮಾಡ ಬಹುದು ಎಂದು ಹೇಳುತ್ತೀರಾ ತಮಗೆ ಮರ್ಯಾದೆ ಇದ್ದರೆ ಇವತ್ತು ಮಂತ್ರಿಗಳ ಕೆಲಸಕ್ಕೆ ರಾಜೀನಾಮೆ ಕೊಟ್ಟು ಮನೆಗೆ ಹೋಗಿ. when they are not able to deliver the goods ರಾಜೀನಾಮೆ ಕೊಟ್ಟು ಮನೆಗೆ ಹೋಗಿ.

ಶ್ರೀ ಕೋಣಂದೂರು ಲಿಂಗಪ್ಪ — ಕೊಲೆ ಮಾಡಿ ಕ್ಷಮಿಸಿ ಎಂದ ಹಾಗೆ ಅವರು ಅಪಾಲಜಿ ಕೇಳುವುದು.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಸಮಿತಿಗಳು ಕೊಟ್ಟಂಥ ವರದಿಯ ಬಗ್ಗೆ ವಿಫಲವಾದ ಚರ್ಚೆ ನಡೆದಿದೆ.

ಶ್ರೀ ಕೆ. ಪುಟ್ಟಸ್ವಾಮಿ.— ವಿಫುಲವೋ ವಿಫಲವೋ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ವಿಫುಲವಾದ ಚರ್ಚೆ ನಡೆದಿದೆ. ಮಾನ್ಯ ಮುಖ್ಯಮಂತ್ರಿಗಳು ಆವತ್ತಿನ ದಿವಸ ಏನು ಹೇಳಿಕೆ ಕೊಟ್ಟಿದ್ದಾರೆಂದರೆ ಅಪಾದನೆಗಳನ್ನು ನಾನು ಓದುತ್ತೇನೆ, ಪರಿ ಶೀಲನೆ ಮಾಡುತ್ತೇನೆ, ಬೇರೆಯವರಿಂದಲೂ ಪರೀಕ್ಷೆ ಮಾಡಿಸುತ್ತೇನೆ. ಅವಶ್ಯಕತೆ ಬಂದರೆ ಸಂಬಂಧಪಟ್ಟವರನ್ನು ವಿಚಾರಣೆಗೆ ಸಹ ಗುರಿಪಡಿಸುತ್ತೇನೆ ಎಂಬ ಮಾತನ್ನು ಹೇಳಿದ್ದಾರೆ. ಈಗ ಮಾನ್ಯ ದೇವೇಗೌಡರು ಆ ಅಪಾದನೆಗಳನ್ನು ಪುನರುಚ್ಚಾರಣೆ ಮಾಡಿದ್ದಾರೆ. Allegations that are made by the several committees are now reiterated by Sri Devegowda.

SRI H D. DEVEGOWDA.—They are not the allegations they are the findings.

SRI H. T. KRISHNAPPA.—You call it 'findings' or 'allegations' or what ever it is. ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವ ಆಶ್ವಾಸನೆಯನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಪುನಃ ವಿಚಾರಣೆ ಮಾಡಿ ಸಂಬಂಧಪಟ್ಟವರನ್ನು ಶಿಕ್ಷೆಗೆ ಗುರಿಪಡಿಸುವು ದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹೇಳಿಕೆ ಕೊಡುತ್ತೇನೆ ಎಂದು ಹೇಳಿದ್ದಾರೆ. ಮಾನ್ಯ ದೇವೇಗೌಡರಲ್ಲಿ ಕೇಳಿಕೊಳ್ಳುವುದು ಇಷ್ಟೆ. ಮಾನ್ಯ ಮುಖ್ಯಮಂತ್ರಿ ಗಳು ಇದರ ಸಂಬಂಧವಾಗಿ ಹೇಳಿಕೆ ಕೊಡಲಿ ಎಂದು ಕೇಳಿದರೆ ಸಾಕು ಅಥವಾ ವಿಚಾರಣೆ ಮಾಡು ತ್ತಾರೋ ಇಲ್ಲವೋ ಎಂದು ಕೇಳಿದರೆ ಸಾಕು.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾಜಿ ನಮ್ಮ ನಾಯಕರೂ, ಹಾಲಿ ಕಾಂಗ್ರೆಸ್ಸಿನವರೂ ಆದ ಶ್ರೀಮಾನ್ ಎಚ್.ಟಿ. ಕೃಷ್ಣಪ್ಪನವರು

ಶ್ರೀ ಎಚ್. ಟಿ. ಕೃಷ್ಣಪ್ಪ.—ನಾನೇನೂ ಜನತಾ ಪಾರ್ಟಿಯವನಲ್ಲ. ನಾನು ಮೊದಲೂ ಕಾಂಗ್ರೆಸ್, ಈಗಲೂ ಕಾಂಗ್ರೆಸ್. ಮೂರು ತಿಂಗಳ ಕೂಸಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಆಶ್ವಾಸನೆ ಕೊಟ್ಟು ಒಂದು ವರ್ಷಕ್ಕಿಂತ ಹೆಚ್ಚಿಗೆ ಆಯಿತು. ಅವರಿಗೆ ಹೇಳಿಕೆ ಕೊಡುವುದಕ್ಕೆ ಇನ್ನೂ ಎಷ್ಟು ಕಾಲ ಬೇಕು.

ಅಧ್ಯಕ್ಷರು.—ಮಾನ್ಯ ಕೃಷ್ಣಪ್ಪನವರೆ ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಾಗ ದೇವೇಗೌಡರು ಈ ಸಭೆಯಲ್ಲಿರಲಿಲ್ಲ. ಅದು ನಿಮಗೆ ಜ್ಞಾಪಕ ಇರಬಹುದು. ಈ ವಿಷಯವನ್ನು ಲಂಬಿಸಬೇಕೋ ಬಿಡಬೇಕೋ ಎಂಬುದು ಅವರಿಗೆ ಸೇರಿದ್ದು. ಮಾನ್ಯ ದೇವೇಗೌಡರೇ ತಾವು ಬೇಗ ಮುಗಿಸಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಇದು ಆಶ್ವಾಸನೆ ಪ್ರಶ್ನೆ ಅಲ್ಲ. The Committee has categorically said we want a Commission of Enquires under the Commission of Enquiry Act, in respect of Nirmala Engineering works.

SRI H. SIDDAVEERAPPA.—Nirmala Engineering Company came into prominence not during the time of this Ministry but earlier.

SRI H.D. DEVEGOWDA.—Why do you want to take that shelter, knowing that we have recommended that a Commission of Enquiry be appointed for a judicial probe. whether 'X' is there or 'Y' is there, or 'Z' is there, we are not bothered.

SRI H. M. CHANNABASAPPA.—This Government is not anxious to shield anybody who has done the wrong thing.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈ ಜನ್ಮದಲ್ಲೇ ವಿಚಾರಣೆ ಮಾಡುತ್ತೀರಾ ಅಥವಾ ಪುನರ್ಜನ್ಮದಲ್ಲಿ ಮಾಡುತ್ತೀರಾ ಎಂಬುದನ್ನು ಹೇಳಿಬಿಡಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ವಿಧಿನಿಯಮವನ್ನು ಬಿಟ್ಟು ಯಾವುದೂ ಮಾಡುವುದಿಲ್ಲ. ವಿಧಿನಿಯಮದ ಪ್ರಕಾರ ಮಾಡುತ್ತೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನೀವಿಬ್ಬರು (ಮಾನ್ಯ ಸಚಿವರಾದ ಎಚ್. ಎಂ. ಚನ್ನಬಸಪ್ಪ, ಎಚ್. ಸಿದ್ಧವೀರಪ್ಪ) ನಮ್ಮೆದುರಿಗೆ ಕುಳಿತಿರುವುದರಿಂದ ನಮ್ಮ ಕಣ್ಣು ಚುಚ್ಚುತ್ತದೆ. ನಮಗೆ ಎಳ್ಳು ಮೊನೆಯಷ್ಟಾದರೂ ಮರ್ಯಾದೆ ಇದ್ದರೆ ಮಂತ್ರಿ ಪದವಿಯಿಂದ ಬಿಟ್ಟು ಬಂದುಬಿಡಿ.

ಶ್ರೀ ಎಚ್.ಡಿ. ದೇವೇಗೌಡ.—1975ರಲ್ಲಿ ಕಮಿಟಿ ರಿಪೋರ್ಟ್ ಕೊಟ್ಟಿದೆ. ಇದುವರೆವಿಗೂ ಆ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಈ ಸಭೆಗೆ ನೀವು ಎಷ್ಟು ಗೌರವ ತೋರಿಸುತ್ತಿದ್ದೀರಿ ಎಂಬುದು ಗೊತ್ತಾಗುತ್ತದೆ.

ಶ್ರೀ ಎಚ್ ಸಿದ್ಧವೀರಪ್ಪ.—ನೀವು ಹೇಳುತ್ತಿರುವುದು ಅರ್ಥವಾಗುತ್ತಿದೆ.

ಶ್ರೀ ಎಚ್. ಡಿ. ದೇವೇಗೌಡ.—ಆದರೆ ಕಾರ್ಯಗತ ಮಾಡುವುದಕ್ಕೆ ಶಕ್ತಿ ಇಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮುಖ್ಯಮಂತ್ರಿಯವರು ಏನು ಆಶ್ವಾಸನೆ ಕೊಟ್ಟಿದ್ದರು, ಅದನ್ನು ಪೂರೈಸುತ್ತೇವೆ.

3-30 ಪಿ. ಎಂ.

ಶ್ರೀ ಕೋಣಂದೂರು ಲಿಂಗಪ್ಪ.—ಎಷ್ಟು ಕಾಲಾವಕಾಶ ಬೇಕು ?

ಶ್ರೀ ಹೆಚ್. ಎಂ. ಚನ್ನಬಸಪ್ಪ.— ಸ್ವಲ್ಪ ಕಾದು ನೋಡಿ.

ಶ್ರೀ ಹೆಚ್. ಡಿ. ದೇವೇಗೌಡ.—ಇದರಲ್ಲಿರುವ ಗಿರಾಕಿಗಳಿಗೆಲ್ಲ ತಮ್ಮ ರಕ್ಷಣೆ ಇದೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಯಾವ ಯಾವ ಕಾಲದಲ್ಲಿ ಯಾವ ಯಾವ ಗಿರಾಕಿಗಳು ಇದ್ದರೂ, ಅವರೆಲ್ಲ ಬರಲಿ, ಸಂತೋಷ.

ಶ್ರೀ ಕೋಣಂದೂರು ಲಿಂಗಪ್ಪ.— 1947ನೇ ಆಗಸ್ಟ್ 15ರಿಂದ ಇಲ್ಲಿಯವರೆಗೆ ವಿಚಾರಣೆಯಾಗಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಅದು ಬಹಳ ಒಳ್ಳೆಯ ಅಭಿಪ್ರಾಯ.

ಶ್ರೀ ಹೆಚ್. ಡಿ. ದೇವೇಗೌಡ.—ಈ ಸ್ಥಾನದಲ್ಲಿ ಕುಳಿತು ಹಲವಾರು ಸಾರಿ ಹೇಳಿದ್ದನ್ನೇ ಪುನರುಚ್ಚರಿಸುವ ಅವಶ್ಯಕತೆ ಇಲ್ಲ. ಪುನರುಚ್ಚಾರದ ಅವಶ್ಯಕತೆ ಬೇಕೆಂದರೆ ಹಿಂದಿನ ಮಂತ್ರಿ

ಗಳು ಯಾರಿದ್ದರು. ಅದಕ್ಕೆ ಹಿಂದಿನ ಮಂತ್ರಿಗಳು ಯಾರಿದ್ದರು, ಅವರೆಲ್ಲರ ಬಗ್ಗೆ ವಿಚಾರಣೆ ಮಾಡಿ ಅದಕ್ಕೆ ನಮ್ಮದೇನೂ ತಕರಾರು ಇಲ್ಲ.

ಶ್ರೀ ಬಿ ಪುಟ್ಟಸ್ವಾಮಯ್ಯ.—ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲೇ ವಿಚಾರಣೆ ನಡೆಯಲಿ.

ಶ್ರೀ ಎಚ್. ಎಂ. ಚನ್ನಬಸಪ್ಪ —ಅದನ್ನು ನಾನು ಸ್ವಾಗತಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಮ್ಮ ದೇಶದಲ್ಲಿ ಎಷ್ಟು ಮಂದಿ ನಿಷ್ಠಾವಂತರಿಗೆ ರಕ್ಷಣೆ ಕೊಟ್ಟಿದ್ದೀರಿ

ಶ್ರೀ ಎಚ್ ಸಿದ್ಧವೀರಪ್ಪ.—ಅದಕ್ಕೆ ಲೆಕ್ಕಾಚಾರವೇ ಇಲ್ಲ.

ಶ್ರೀ ಎಚ್. ಡಿ, ದೇವೇಗೌಡ.—ಸ್ವಲ್ಪ ಸಾಕು ನಿಲ್ಲಿಸಿ... ನೀವು ನಿಷ್ಠಾವಂತರಿಗೆ ರಕ್ಷಣೆ ಕೊಟ್ಟಿರುವುದಕ್ಕೆ I would like to read one letter issued from the Government. It reads as follows :-

"From the Commissioner and Secretary to Government, Food and Forest Department, Bangalore.

DEAR SRI S. M. LINGAPPA,

I am desired to inform you that the Government have decided to reconstitute the Board of the Karnataka State Food and Civil Supplies Corporation Limited and request you to resign from the Directorship of the Board".

ಶ್ರೀವಾನ್ ಎಸ್. ಎಂ. ಲಿಂಗಪ್ಪನವರು, ನಿಮ್ಮ ಆಡಳಿತದ ಅಂಗ ಸಂಸ್ಥೆಯಾದ ಫುಡ್ ಕಾರ್ಪೊರೇಷನ್ನಿನಲ್ಲಿ ಕೆಲಸ ಮಾಡುವುದಕ್ಕೆ ಚಾರಿತ್ರ್ಯ ಇಲ್ಲವೆಂದು ರಾಜೀನಾಮೆ ಕೊಡಲು ಒತ್ತಾಯಿಸಿದ್ದೀರಾ ಪ್ರಜಾಪ್ರಭುತ್ವವನ್ನು ಶಕ್ತಿಯುತವಾಗಿ ಬೆಳೆಸುವುದಕ್ಕೆ ಪಣತೊಟ್ಟಿರತಕ್ಕ ಜನ ಆಳುವ ಪಕ್ಷ ದಿಂದ ಹೊರಗಡೆ ಬಂಧಾಕ್ಷಣವೇ ತಾವಿದ್ದ ಸ್ಥಾನಕ್ಕೆ ರಾಜೀನಾಮೆ ಕೊಡಬೇಕೆ ?

ಕೊನೆಯದಾಗಿ, ನಾನು ಸಾಕಷ್ಟು ಕಾಲವನ್ನು ತೆಗೆದುಕೊಂಡಿದ್ದರೂ, ಒಂದು ಮಾತನ್ನು ಹೇಳಬಯಸುತ್ತೇನೆ. ಇವತ್ತು ಕೇಂದ್ರ ಸರ್ಕಾರದಲ್ಲಿರತಕ್ಕ ವರಿಷ್ಠರಿಗೆ ಒಂದು ಮಾತನ್ನು ಹೇಳಬೇಕಾಗಿದೆ. ರಾಜ್ಯಪಾಲರ ಸ್ಥಾನವನ್ನು ತುಂಬುವಾಗ ಯೋಗ್ಯ ಚಾರಿತ್ರ್ಯವಿರತಕ್ಕ ವ್ಯಕ್ತಿಗಳನ್ನು ಆರಿಸಿ ತುಂಬಬೇಕೆಂದು ತಮ್ಮ ಮುಖೇನ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ. ಆ ಸ್ಥಾನವನ್ನು ಕಾಪಾಡತಕ್ಕ ವ್ಯಕ್ತಿ ಚಿಕ್ಕವರಿರಬಹುದು. ಆದರೆ ಆ ಸ್ಥಾನ ಮಾತ್ರ ದೊಡ್ಡದು ಮತ್ತು ಮಹತ್ತರವಾದುದು. ಆದಕಾರಣ, ಎಲ್ಲ ವಿಚಾರಗಳ ಬಗ್ಗೆ ಇನ್ನು ಮುಂದಾದರು ಎಚ್ಚರಿಕೆಯಿಂದ ತಪ್ಪದೆ ನಡೆದುಕೊಳ್ಳಲಿ ಎಂಬ ಆಶಯವನ್ನು ವ್ಯಕ್ತಪಡಿಸಿ, ಇವತ್ತು ಮಾನ್ಯ ಅಧ್ಯಕ್ಷರ ಇಷ್ಟು ವೇಳೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುವುದಕ್ಕೆ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷಣೆಯವರೇ, ಮಾನ್ಯ ರಾಜ್ಯಪಾಲರು ಈ ಸದನದಲ್ಲಿ ಮಾಡಿರತಕ್ಕ ಭಾಷಣಕ್ಕೆ ಬೆಂಬಲ ಸೂಚಿಸುತ್ತಾ ನಾನು ಕೆಲವಾರು ವಿಷಯಗಳನ್ನು ಪ್ರಸ್ತಾಪಿಸುವುದಕ್ಕೆ ಇಚ್ಛೆಪಡುತ್ತೇನೆ. ನಾನು ರಾಜ್ಯಪಾಲರ ಭಾಷಣವನ್ನು ಆಮೂಲಾಗ್ರವಾಗಿ ಓದಿದ್ದೇನೆ. ಮತ್ತು ವಿರೋಧ ಪಕ್ಷದ ನಾಯಕರಾದ ಮಾನ್ಯ ದೇವೇಗೌಡರು ಮಾಡಿದ ಭಾಷಣವನ್ನು ಕೂಡ ಯಾವ ಪದವನ್ನೂ ಬಿಡದೆ ಕೇಳಿ ಬಹಳ ಸಂತೋಷವಾಯಿತು. ಮಾನ್ಯ ದೇವೇಗೌಡರು ತುರ್ತುಪರಿಸ್ಥಿತಿ ಆದಿಯಾಗಿ ಅದರಿಂದ ಸಿಕ್ಕಿರತಕ್ಕ ಲಾಭಗಳು/ ಚುನಾವಣೆಯ ವಿಷಯ ಹಾಗೂ ಹಲವಾರು ಇತರ ವಿಷಯಗಳನ್ನು ಕುರಿತು ಪ್ರಸ್ತಾಪ ಮಾಡಿದ್ದಾರೆ.

ಅಧ್ಯಕ್ಷರು.—ಆ ಕಡೆ6 ಹೆಸರುಗಳನ್ನು ಮತ್ತು ಈ ಕಡೆ 4 ಹೆಸರುಗಳನ್ನು ಕಳುಹಿಸಿಕೊಟ್ಟಿದ್ದಾರೆ. ಆದಕಾರಣ ಹೆಚ್ಚು ಕಾಲವನ್ನು ತೆಗೆದುಕೊಳ್ಳದೆ ಮಾತನಾಡಬೇಕು.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ದೇವೇಗೌಡರು ರಾಜ್ಯಪಾಲರ ಭಾಷಣದ 3ನೇ ಸಾಲನ್ನು ಪ್ರಪ್ರಥಮವಾಗಿ ತೆಗೆದುಕೊಂಡು ಚುನಾವಣಾ ರಂಗದಿಂದ ನೀವು ಮರಳಿ ಬಂದಿದ್ದೀರಿ ಎಂದು ರಾಜ್ಯಪಾಲರು ಏನು ತಮ್ಮ ಭಾಷಣದಲ್ಲಿ ಹೇಳಿದ್ದಾರೆ, ಆ ವಾಕ್ಯವನ್ನು ಹೇಳುತ್ತಾ ಇನ್ನೊಂಥು ಅಂಶವನ್ನು ಕೂಡ ಹೇಳಿದರು. ಅವರ ಆ ಮಾತಿನ ಅರ್ಥ ಹೀಗಿರಬೇಕೆಂದು ನಾನು ಭಾವಿಸುತ್ತೇನೆ. ಚುನಾವಣೆಯಿಂದ ಮರಳಿ ಬಂದಿದ್ದೀರಿ ಅಂದರೆ ನೀವು ಚುನಾವಣೆಯಲ್ಲಿ ಸೋತಿದ್ದೀರಿ, ಸೋತು ಬಂದಿದ್ದೀರಿ, ಎನ್ನತಕ್ಕ ಮಾತನ್ನು ಆ ಪಕ್ಷದ ವತಿಯಿಂದ ಅವರು ಹೇಳಿದರಲ್ಲ, ಅದರ ಬಗ್ಗೆ ವ್ಯಾಖ್ಯಾನ ಮಾಡುತ್ತಿದ್ದೇನೆ. ಸಂಕ್ಷೇಪವಾಗಿ ಅದರ ಅರ್ಥ ಏನು ಇತ್ತು ಎಂದರೆ ಕೇಂದ್ರ ಸರ್ಕಾರವನ್ನು ರಚನೆ ಮಾಡತಕ್ಕ ಶಕ್ತಿ ಕಾಂಗ್ರೆಸ್ ಪಕ್ಷಕ್ಕೆ ಇಲ್ಲವಾಯಿತು. ಅರ್ಥಾತ್ ಚುನಾವಣೆಯಲ್ಲಿ ನೀವು ಸೋತಿದ್ದೀರಿ ಎಂದು ಚುನಾವಣೆಯಲ್ಲಿ ನೀವು ಸೋತಿದ್ದೀರಿ ಎನ್ನತಕ್ಕ ಮಾತನ್ನು ತೆಗೆದುಕೊಳ್ಳುವುದಕ್ಕೆ ಅದು ಪಾರ್ಲಿಮೆಂಟ್ ಚುನಾವಣೆ, ರಾಷ್ಟ್ರ ಮಟ್ಟದ ಚುನಾವಣೆ. ಒಟ್ಟಿನಲ್ಲಿ ಆ ಒಂದು ಸ್ಥಾನಕ್ಕೆ ಮಾತ್ರವೇ ವಿನಹ ಇಲ್ಲಿಗೆ ಸಂಬಂಧ ಇಲ್ಲ ಎನ್ನುವ ಅರ್ಥದಲ್ಲಿ ಮಾತನಾಡಿರಬೇಕೆಂದು ನನ್ನ ಭಾವನೆ. ಇದನ್ನು ಬಿಟ್ಟರೆ ಬೇರೆ ಅರ್ಥವನ್ನು ಕಲ್ಪಿಸುವುದು ಸಾಧ್ಯವಿಲ್ಲ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಭಾರತದಲ್ಲಿ ಹಲವಾರು ರಾಜ್ಯಗಳಿವೆ. ಉದಾಹರಣೆಗೆ, ಚುನಾವಣೆ ಕಾಲದಲ್ಲಿ ಅಖಂಡ ಭಾರತದಲ್ಲಿರತಕ್ಕ ಎಲ್ಲ ರಾಜ್ಯಗಳ ಜನರು ಎಲ್ಲ ಅಭ್ಯರ್ಥಿಗಳ ಪಟ್ಟಿಯನ್ನು ಒಟ್ಟಿಗೆ ಹಾಕಿ ಒಟ್ಟಿಗೆ ಓಟು ಮಾಡಿ ಕರ್ನಾಟಕಕ್ಕೆ 28 ಸೀಟೆಂದೂ ಉತ್ತರ ಪ್ರದೇಶಕ್ಕೆ 80 ಸೀಟೆಂದೂ, ಹಾಗೆಯೇ ಇಂಥಿಂಥ ರಾಜ್ಯಕ್ಕೆ ಇಷ್ಟಿಷ್ಟು ಸೀಟುಗಳೆಂದು ತೀರ್ಮಾನ ಮಾಡುವುದಕ್ಕೆ ಸಾಧ್ಯವಿದ್ದಿದ್ದರೆ ಆ ಮಾತನ್ನು ಹೇಳಬಹುದಿತ್ತು.

[*Mr. Chairman (Sri K. M. Rudrappa) in the Chair.*]

ಆಯಾ ಪಕ್ಷದ ಹೆಸರಿನಲ್ಲಿ ಅಭ್ಯರ್ಥಿಗಳು ಚುನಾವಣೆಯ ಕಣಕ್ಕೆ ಇಳಿಯುತ್ತಾರೆ ಈ ಸಂದರ್ಭದಲ್ಲಿ ಪ್ರತಿಯೊಂದು ರಾಜ್ಯಕ್ಕೂ ಇಷ್ಟು ಸ್ಥಾನಗಳು ಎಂದು ಇದೆ. ಇಲ್ಲಿ ಒಂದು ಅಂಶವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಅಖಂಡ ಭಾರತದಲ್ಲಿ ಎಲ್ಲಾ ರಾಜ್ಯಗಳಲ್ಲಿಯೂ ಕೂಡ ಜನತೆಯ ತೀರ್ಪು ಭಿನ್ನ ಭಿನ್ನವಾಗಿರುತ್ತದೆ. ಬಿಹಾರ, ಉತ್ತರ ಪ್ರದೇಶ, ಪಂಜಾಬ್ ಮತ್ತು ಹರಿಯಾಣದಲ್ಲಿ ಕಾಂಗ್ರೆಸ್‌ಗೆ ಒಂದು ಸ್ಥಾನವೂ ಬರದೆ, ದಕ್ಷಿಣದ ರಾಜ್ಯಗಳಲ್ಲಿ ಬೇರೆ ಪಾರ್ಟಿಯವರಿಗೆ ಒಂದು ಸ್ಥಾನವೂ ಬರದೆ ಚುನಾವಣೆಯು ನಡೆದಿದೆ. ಕಾಂಗ್ರೆಸ್ಸಿನ ಆಡಳಿತದ ಬಗ್ಗೆ ಸಂಪೂರ್ಣವಾಗಿ ಜನತೆ ದಕ್ಷಿಣದಲ್ಲಿ ವಿರೋಧವಾಗಿದ್ದಾರೆ ಎನ್ನುವುದನ್ನು ನಾವು ಗಮನಿಸಬೇಕಾಗುತ್ತದೆ. ಒಂದು ರಾಜ್ಯದಲ್ಲಿ ಜನತೆಯ ತೀರ್ಪು ಏನಾಗಿದೆ ಅದು ಇನ್ನೊಂದು ರಾಜ್ಯಕ್ಕೆ ಪ್ರತ್ಯೇಕವಾಗಿದೆ ಎನ್ನುವ ಮಾತನ್ನು ಮಾನ್ಯ ದೇವೇಗೌಡರು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾವು 1971ರ ಚುನಾವಣೆಯ ನೆನಪನ್ನು ಮಾಡಿಕೊಳ್ಳುವುದಾದರೆ, ಅಖಂಡ ಭಾರತದಲ್ಲಿಯೇ ಜನತೆ ಒಂದು ದೊಡ್ಡ ತೀರ್ಪನ್ನು ಮಾಡಿದೆ. ಅದು ಆ ಪಕ್ಷದ ಆಡಳಿತದ ಬಗ್ಗೆ ಜನತೆ ಕೊಟ್ಟಂಥ ತೀರ್ಮಾನವಾಯಿತು. ದಕ್ಷಿಣದಲ್ಲಿರತಕ್ಕ ರಾಜ್ಯಗಳಲ್ಲಿ ಜನತಾಪಕ್ಷಕ್ಕೆ ಈಗಿನ ಚುನಾವಣೆಯಲ್ಲಿ ಉತ್ತರದಲ್ಲಿ ಪಡೆದಿರತಕ್ಕ ಬೆಂಬಲ ಬರಲಿಲ್ಲ. ಇದರ ಅರ್ಥ ಏನು ಅಂದರೆ ಈ ರಾಜ್ಯದ ಆಡಳಿತ ಸರಿಯಾಗಿತ್ತು ಎಂದು ಬಹುಮತ ಪಡೆದಿರತಕ್ಕ ತೀರ್ಮಾನ, ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿರುವ ತೀರ್ಮಾನ ಎಂದು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಆದರೆ ದಕ್ಷಿಣ ಭಾರತದಲ್ಲಿ ಆ ಒಂದು ತೀರ್ಮಾನ ಬಾರದೆ ಇರುವುದರಿಂದ ಅಥವಾ ಜನತೆ ಬೇರೆ ಕಾರಣಗಳನ್ನು ಕಂಡಿರುವುದರಿಂದ ಉತ್ತರದ ತೀರ್ಮಾನ ಇಲ್ಲಿ ಬರಲಿಲ್ಲ. ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತವನ್ನು ವಿರೋಧ ಮಾಡುವ ಮಟ್ಟಕ್ಕೆ ಜನತೆ ಹೋಗಲಿಲ್ಲ ಅಥವಾ ಜನತೆಗೆ ಸರಿಯಾದ ತೀರ್ಮಾನ ಕೊಡಲಿಕ್ಕೆ ಅವಕಾಶವಾಗಲಿಲ್ಲ ಎಂದು ಭಾವಿಸಬೇಕಾಗುತ್ತದೆ. ಮಾನ್ಯ ದೇವೇಗೌಡರು ಜನತೆಯ ತೀರ್ಮಾನದಂತೆ ನಮ್ಮ ಪಕ್ಷಕ್ಕೆ ಎರಡು ಸೀಟುಗಳು ಬಂದಿವೆ, ಉಳಿದಿರತಕ್ಕಂಥವು ಕಾಂಗ್ರೆಸ್ಸಿಗೆ ಲಭ್ಯವಾಗಿವೆ ಎಂದು ಹೇಳತಕ್ಕ ಕಾಲದಲ್ಲಿ ರಾಜ್ಯದ ಆಡಳಿತದ ಬಗ್ಗೆ ವ್ಯಾಖ್ಯಾನ ಮಾಡಿದರು ಉತ್ತರ ಭಾರತದ ರಾಜ್ಯದ ಆಡಳಿತಕ್ಕೆ ನಮ್ಮ ಆಡಳಿತವನ್ನು ಹೋಲಿಸಿದರೆ ನಮ್ಮ ಆಡಳಿತ ಅಷ್ಟು ಕೆಟ್ಟದ್ದಾಗಿರಲಿಲ್ಲ ಎಂದು ನಾವು ಹೇಳಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಅದಕ್ಕೆ ಈ ಸದನದ ರಿಪೋರ್ಟ್ ಸಾಕು.

ಶ್ರೀ ಎಸ್. ಬಂಗಾರಪ್ಪ.—ಜನತೆಯ ತೀರ್ಮಾನವನ್ನು ನಾವು ಒಪ್ಪಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಜನತೆಯ ತೀರ್ಮಾನದಂತೆ ಲೋಕಸಭೆಯಲ್ಲಿ ನಾವು ಗೆದ್ದು ಬಂದಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಜನತೆಯ ತೀರ್ಮಾನ ಆರೀತಿ ಆದರೆ ಅದನ್ನು ಎಲ್ಲರೂ ಕೂಡ ಒಪ್ಪಬೇಕಾಗುತ್ತದೆ. ಇನ್ನೊಂದು ಪ್ರಮುಖವಾದ ಅಂಶವನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ನಮ್ಮ ರಾಜ್ಯಕ್ಕೆ ಲೋಕಸಭೆಯ ಚುನಾವಣೆಗೆ28 ಸ್ಥಾನಗಳನ್ನು ರಾಜ್ಯಾಂಗದ ಪ್ರಕಾರ ಕಾದಿರಿಸಲಾಗಿದೆ. ಜನಸಂಖ್ಯೆ ದೃಷ್ಟಿಯಿಂದ ಈ ಸ್ಥಾನಗಳನ್ನು ನಿಗಧಿ ಮಾಡತಕ್ಕದ್ದು ಇವೆ. ಇದರ ಪ್ರಕಾರ ಉತ್ತರ ಭಾರತಕ್ಕೆ ಹೆಚ್ಚಿನ ಸ್ಥಾನಗಳು ದೊರತು ಅಲ್ಲಿಯವರೇ ಪ್ರಧಾನಮಂತ್ರಿಗಳಾಗತಕ್ಕ ಅವಕಾಶವಿರುತ್ತದೆ. ದಕ್ಷಿಣದಲ್ಲಿರತಕ್ಕವರಿಗೆ ಇಂಥ ಆವಕಾಶವನ್ನು ಪಡೆಯುವುದಕ್ಕೆ ಸಾಧ್ಯವಿಲ್ಲ. ಇದನ್ನು ಹೇಳುವಾಗ ನಾನು ದಕ್ಷಿಣ ಭಾರತ ಬೇರೆ, ಉತ್ತರ ಭಾರತ ಬೇರೆ ಎಂದೂ ಹೇಳುತ್ತಿಲ್ಲ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಇವತ್ತು ನಾವು ಆಡಳಿತವನ್ನು ನಡೆಸಬೇಕು ಎನ್ನುವ ಆಸೆಯನ್ನು ಇಟ್ಟುಕೊಂಡಿದ್ದೇವೆ ರಾಜ್ಯಾಂಗದ ಪ್ರಕಾರ ಪ್ರಧಾನ ಮಂತ್ರಿಯವರನ್ನು ಆರಿಸಬೇಕಾಗುತ್ತದೆ. ಹಿಂದೆ ಅಧ್ಯಕ್ಷರಾಗಿದ್ದಂಥ ಡಾ॥ ರಾಧಾಕೃಷ್ಣನ್ ಅವರು ದಕ್ಷಿಣದವರಾದ್ದರು. ಶ್ರೀಮಾನ್ ಗಿರಿ ಯವರು ದಕ್ಷಿಣದವರು. ಪ್ರಧಾನ ಮಂತ್ರಿಯವರ ಜಾಗ ಶಕ್ತಿಯುತವಾದುದು, ಅಧಿಕಾರಯುತವಾದುದು, ಈ ದೃಷ್ಟಿಯಿಂದ ದಕ್ಷಿಣದವರೂ ಕೂಡ ಪ್ರಧಾನಮಂತ್ರಿಯಾಗುವುದಕ್ಕೆ ಅವಕಾಶ ಇರಬೇಕು ಎಂದು ನನ್ನ ಅಭಿಪ್ರಾಯ. ಇದಕ್ಕೆ ನಾನು ಒಂದು ಸಲಹೆಯನ್ನು ಕೊಡುತ್ತೇನೆ ಭಾರತದ ಎಲ್ಲಾ ರಾಜ್ಯಗಳಿಗೂ ಜನಸಂಖ್ಯೆ ತಕ್ಕ ಹಾಗೆ ಸ್ಥಾನಗಳು ಇರದೆ. ಎಲ್ಲಾ ರಾಜ್ಯಗಳಿಗೂ ಸರಿಸಮವಾಗಿ ಸ್ಥಾನಗಳು ಇರಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಪರಿಶೀಲನೆಗೆ ಅರ್ಹವಾದ ವಿಚಾರ.

ಶ್ರೀ ಎಸ್. ಬಂಗಾರಪ್ಪ.—ಮುಂದಿನ ದೃಷ್ಟಿಯಿಂದ ಪ್ರಧಾನ ಮಂತ್ರಿಯಾರು ಆಗಬೇಕು ಎಂದು ಹೇಳುತ್ತಿದ್ದೇನೆ

ಚೇರ್ಮನ್‌ರವರು.—ಇದು ರಾಜ್ಯಾಂಗಕ್ಕೆ ಸಂಬಂಧಪಟ್ಟ ವಿಚಾರ. ಗವರ್ನರ್ ಅಡ್ರಸ್‌ಗೆ ಸಂಬಂಧಪಟ್ಟ ವಿಚಾರವಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಜನಸಂಖ್ಯೆಯ ಆಧಾರವನ್ನು ಬಿಟ್ಟು ಕೇವಲ ರಾಜ್ಯಗಳ ಆಧಾರದ ಮೇಲೆ ಚುನಾವಣೆಯಾಗಬೇಕು ಎಂದು ಹೇಳುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಇದನ್ನೇ ಡಾ॥ ಅಂಬೇಡ್ಕರ್ ಅವರು 1954ರಲ್ಲಿ ಹೇಳಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಸಲಹೆಯನ್ನು ನಿಮ್ಮ ಸರ್ಕಾರದವರು ಹಿಂದೆ 42ನೇ ತಿದ್ದುಪಡಿಯನ್ನು ತಂದಾಗ ಕೊಟ್ಟಿದ್ದರೆ ಬಹಳ ಚೆನ್ನಾಗಿತ್ತು ಎಂದು ಕಾಣುತ್ತದೆ. ಅವನ್ನು ಅಗಲೇ ರಾಟಿಫೈ ಮಾಡಲಾಗಿದೆ. ನಾವು ಪುನಃ ಅದನ್ನು ತಿದ್ದುವ ಕಾಲ ಬಂದಿವೆ. 42ನೇ ತಿದ್ದುಪಡಿಯನ್ನು ಎಲೆಕ್ಷನ್ ಕಾನೂನಿನಲ್ಲೇ ಅಳವಡಿಸಿದ್ದರೆ ಸರಿ ಹೋಗುತ್ತಿತ್ತೋ ಏನೋ ?

ಶ್ರೀ ಎಸ್ ಬಂಗಾರಪ್ಪ —42ನೇ ತಿದ್ದುಪಡಿಗೆ ನಾನುವ್ಯಾಖ್ಯಾನ ಮಾಡತಕ್ಕ ಕಾಲದಲ್ಲಿ ನಾನು ಇದನ್ನು ಕೇಳಿದ್ದೇನೆ ಡಾಕ್ಟರ್ ಅಂಬೇಡ್ಕರ್ ಅವರು ಈ ವಿಷಯವನ್ನೇ ಪ್ರಸ್ತಾಪ ಮಾಡಿದ್ದಾರೆ ಮುಂದಿನ ಭವಿಷ್ಯದ ದೃಷ್ಟಿಯಿಂದ ಒಂದೇ ಭಾಗದವರಿಗೆ ದೇಶದ ಆಡಳಿತದ ಸೂತ್ರವನ್ನು ವಹಿಸುವುದಕ್ಕೆ ಅವಕಾಶ ಇರಬಾರದು. ಎಲ್ಲರಿಗೂ ಸರಿಸಮನಾಗಿ ಇದರಲ್ಲಿ ಅವಕಾಶ ಇರಬೇಕು. ಈ ದೃಷ್ಟಿಯಿಂದ ಚುನಾವಣೆಗೆ ಸ್ಥಾನಗಳನ್ನು ನಿಗಧಿ ಮಾಡತಕ್ಕ ಕಾಲದಲ್ಲಿ ಜನಸಂಖ್ಯೆಯ ಆಧಾರವನ್ನು ಇಟ್ಟುಕೊಳ್ಳದೆ, ಎಲ್ಲರಿಗೂ ಎಲ್ಲ ರಾಜ್ಯಗಳವರಿಗೂ ಸರಿ ಸಮವಾಗಿ ಸ್ಥಾನಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಎಚ್. ಡಿ. ದೇವೇಗೌಡ—ನಾಳೆ ಕರ್ನಾಟಕದವರೇ ಪ್ರಧಾನಮಂತ್ರಿ ಯಾಗಬಹುದು, ಅದನ್ನು ಹೇಗೆ ಹೇಳುವುದಕ್ಕೆ ಆಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಇದನ್ನೇ ನಾವು ಕೇಂದ್ರ ಸರ್ಕಾರಕ್ಕೆ ಬರೆಯಬೇಕು. ನ್ಯಾಯದ ದೃಷ್ಟಿಯಿಂದ ನಾವೆಲ್ಲರೂ ಅದನ್ನು ಒಪ್ಪಬೇಕಾಗುತ್ತದೆ. ಇತ್ತೀಚೆಗೆ ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ನೋಡಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಹೇಳುವ ಪ್ರಕಾರ ರಾಜ್ಯಗಳಿಗೆ ಸರಿಸಮವಾದ ಪ್ರಾತಿನಿಧ್ಯ ಕೊಡಬೇಕು ಅನ್ನುವುದಾದರೆ ಅರುಣಾಚಲದ ಶಾಸನಸಭೆಯಲ್ಲಿರುವ ಸಂಖ್ಯೆ 30-32 ಇದೆ, ಅದೇ ಪ್ರಮಾಣದಲ್ಲಿ ಗೋವಾ ಶಾಸನಸಭೆಯ ಸಂಖ್ಯೆಯೂ ಇದೆ ಇವುಗಳಿಗೂ ಕೂಡ ಕರ್ನಾಟಕದ ಶಾಸನಸಭೆಯಲ್ಲಿ ಎಷ್ಟು ಸಂಖ್ಯೆ ಇದೆಯೋ ಅದೇ ಪ್ರಮಾಣದಲ್ಲೇ ಅವಕ್ಕೂ ಇರಬೇಕು ಎಂದು ಹೇಳುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಈ ವಿಷಯದ ಬಗ್ಗೆ ನಾನು ಲೋಕಸಭೆಗೆ ಹೇಳುತ್ತಿದ್ದೇನೆ. ಇದರ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಬೇಕು ಎಂದು ದೇಶದ ಭವಿಷ್ಯ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ, ನಾನು ಪತ್ರಿಕೆಯಲ್ಲಿ ಪದೇ ಪದೇ ನೋಡುತ್ತಿದ್ದೇನೆ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಬಿಟ್ಟು ಜನತಾ ಪಕ್ಷ ಸರ್ಕಾರ ರಚನೆಯಾದ ಮೇಲೆ ನಾವು ಎಲ್ಲಾ ರಾಜ್ಯಗಳಲ್ಲೂ ಚುನಾವಣೆ ನಡೆಸಬೇಕು ಅನ್ನುವ ವಿಚಾರ ಈ ಬಗ್ಗೆ ಶ್ರೀ ಮಾನ್ಯ ಜಯಪ್ರಕಾಶನಾರಾಯಣ ಅವರೂ ಹೇಳುತ್ತಿದ್ದಾರೆ ಮತ್ತು ಶ್ರೀಮಾನ್ ಚರಣಸಿಂಗ್ ಅವರೂ ಕೂಡ ಈ ಬಗ್ಗೆ ವಿಚಾರ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಈ ವಿಚಾರ ಕಾನೂನು ಪ್ರಕಾರವಾಗಿ, ಸಂವಿಧಾನದ ಪ್ರಕಾರವಾಗಿ ಬರುವುದಿಲ್ಲ. ನಮ್ಮ ಮಿತ್ರರು ಚುನಾವಣೆ ಕಾಲದಲ್ಲಿ ಹೇಳಿದರು, ಈ ಪ್ರಜಾಪ್ರಭುತ್ವದ ಸಂವಿಧಾನದ ಚೌಕಟ್ಟಿನಲ್ಲಿ ಆಡಳಿತ ನಡೆಸುತ್ತೇವೆ, ಅದರ ಬಗ್ಗೆ ಕಿಂಚಿತ್ ಕೂಡ ದಾರಿ ಬಿಟ್ಟು ಹೋಗುವುದಿಲ್ಲ ಎಂದು. ಇದರ ಜೊತೆಗೆ ಇನ್ನೂ ಭಾರಿ ಭಾರಿ ಪ್ರಮಾಣದಲ್ಲಿ ಮಾತನಾಡಿದ್ದಾರೆ. ಈವೊತ್ತು ನಮ್ಮ ಮಿತ್ರರಿಗೆ ನಾನು ನೇರವಾಗಿ ಕೇಳುತ್ತೇನೆ ನಿಮಗೆ ಸಂವಿಧಾನದಲ್ಲಿ ನಂಬಿಕೆ ಇರುವುದಾದರೆ ಅವರು ಹೇಳಬಹುದು 42ನೇ ತಿದ್ದುಪಡಿ ಬಿಟ್ಟು ಅಂತ, ಅದರೂ ಕೂಡ ಈವೊತ್ತು ಸಂವಿಧಾನದ ಪ್ರಕಾರ ಚುನಾವಣೆ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. 42ನೇ ತಿದ್ದುಪಡಿ ಪ್ರಕಾರ 6 ವರ್ಷಕ್ಕೆ ಚುನಾವಣೆ ಮಾಡಬೇಕು. ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಈವೊತ್ತು 42 ನೇ ತಿದ್ದುಪಡಿ ಎಲ್ಲರೂ ಒಪ್ಪಿ ಅದು ದೇಶದಲ್ಲಿ ಕಾನೂನಾಗಿ ಬಿಟ್ಟಿದೆ. ಅದನ್ನು ಮಾನ್ಯ ಸದಸ್ಯರುಗಳು ಮರೆಯಬಾರದು ಅದನ್ನು ರದ್ದು ಮಾಡುವುದಾದರೆ ಸಂವಿಧಾನದ ಚೌಕಟ್ಟಿನಲ್ಲಿ ಅದನ್ನು ತೆಗೆಯಬೇಕಾದರೆ ಪಾರ್ಲಿಮೆಂಟ್‌ನಲ್ಲಿ ರಾಜ್ಯಸಭೆಯಲ್ಲಿ, ರಾಜ್ಯ ಶಾಸನಸಭೆಗಳಲ್ಲಿ ತಿದ್ದುಪಡಿ ತಂದು 5 ವರ್ಷಕ್ಕೊಂದು ಸಾರಿ ಚುನಾವಣೆ ನಡೆಸಬೇಕು ಅನ್ನುವ ತೀರ್ಮಾನ ತೆಗೆದುಕೊಂಡು ಅದರ ಬಗ್ಗೆ ಒಂದು ಕಾನೂನು ಆಗಬೇಕು, ಹಾಗೆ ಮಾಡ ಬೇಡ ಅನ್ನುವುದಿಲ್ಲ. ಒರದು ವೇಳೆ ಹಾಗೆ ಮಾಡುವುದನ್ನು ಬಿಟ್ಟು ಚುನಾವಣೆ ನಡೆಸುತ್ತೇವೆ ಅನ್ನುವುದಾದರೆ ಅದು ಸಾಧ್ಯವಾಗುವುದಿಲ್ಲ. ಕೇಂದ್ರ ಗೃಹ ಸಚಿವರು ಹೇಳಿದ್ದಾರೆ ಕರ್ನಾಟಕ ರಾಜ್ಯದಲ್ಲೂ ಕೂಡ ಚುನಾವಣೆ ನಡೆಸುತ್ತೇವೆ ಎಂದು. ಅವರು ಯಾವ ಕಾರಣದ ಮೇಲೆ ಹೇಳಿದರು ಅನ್ನುವುದು ಗೊತ್ತಾಗಬೇಕು. ಈ ದೃಷ್ಟಿಯಿಂದ ನಾನು ರಾಜ್ಯ ಸರ್ಕಾರವನ್ನು ಕೇಳುತ್ತೇನೆ; ಚುನಾವಣೆ ನಡೆಸುವುದಕ್ಕೆ ಕಾನೂನು ಎಲ್ಲಿದೆ ಎಂದು. ಕೇಂದ್ರ ಸರ್ಕಾರದವರು ಈ ರೀತಿ ತೀರ್ಮಾನ ಮಾಡಿದರು ಅನ್ನುವುದಾದರೆ ರಾಜ್ಯ ಸರ್ಕಾರದವರು ಈ ಬಗ್ಗೆ ಕಾನೂನು ಪ್ರಕಾರ ಇದು ಸರಿಯಾಗಿದೆಯೋ ಅನ್ನುವುದನ್ನು ವಿಚಾರ ಮಾಡಬೇಕು ಎಂದು ಸರ್ಕಾರದ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಜೊತೆಗೆ ನಮ್ಮ ಮಿತ್ರರಿಗೆ ಹೇಳುತ್ತೇನೆ, ನಾವು ಈ ಬಗ್ಗೆ ಏನು ತೀರ್ಮಾನ ಮಾಡಿದೆವೋ ಅದು ಸಂವಿಧಾನದಲ್ಲಿ ತಿದ್ದುಪಡಿ ಆಗಿರುವುದು ಗೊತ್ತಿಲ್ಲವೇ ? ಆದುದರಿಂದ ಚುನಾವಣೆ ಮಾಡುವುದಾದರೆ ಇದು ಕಾನೂನಿಗೆ ವಿರುದ್ಧವಾದಂತಾಗುವುದಿಲ್ಲವೇ ಎಂದು ನಾನು ಸ್ಪಷ್ಟವಾಗಿ ಕೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನೂ 20 ಅಂಶಗಳ ಕಾರ್ಯಕ್ರಮಗಳ ಬಗ್ಗೆ ನಮ್ಮ ಮಿತ್ರರು ಬಿರ್ಲಾರವರಿಗೆ ಕೊಡುವುದಕ್ಕೋಸ್ಕರ ಈ ಜನತಾ ಮನೆಗಳನ್ನು ಕಟ್ಟಿಸಿದು ಎಂದು ಕೆಲವು ವ್ಯಾಖ್ಯಾನ ಮಾಡಿದ್ದಾರೆ. ಅವರಿಗೆ ಮನೆಗಳು ಇರಲಿಲ್ಲವೇ ? ಈ 20 ಅಂಶಗಳ ಕಾರ್ಯಕ್ರಮದ ಬಗ್ಗೆ ನಾನು ಒಂದು ವಿಷಯವನ್ನು ಸ್ಪಷ್ಟಪಡಿಸುತ್ತೇನೆ ಗ್ರಾಮಾಂತರ ಪ್ರದೇಶದ ಜನರಿಗಾಗಲಿ, ಪಟ್ಟಣದ ಜನರಿಗಾಗಲಿ ಇದರಿಂದ ಒಳ್ಳೆಯ ಸೌಲಭ್ಯಗಳು ಸಿಕ್ಕುತ್ತವೆ ಅನ್ನುವುದನ್ನು ಮರೆಯು

ಬಾರದು. ಚುನಾವಣಾ ಸಂದರ್ಭದಲ್ಲಿ ನಮ್ಮ ಮುಖ್ಯಮಂತ್ರಿಗಳು ಮತದಾರರ ಸಂದರ್ಶನ ಮಾಡಿದಾಗ ಈ ಬಗ್ಗೆ ಇರುವಂಥಾ ಕಾರ್ಯಕ್ರಮಗಳನ್ನು ಎದುರಿಸುತ್ತೇವೆ ಅಂತ ಹೇಳಿದ್ದರಿಂದಲೇ ಆ ಜನತೆ ಒಪ್ಪಿ ನಮಗೆ ಒಳ್ಳೆಯ ತೀರ್ಪು ಕೊಟ್ಟಿದ್ದಾರೆ. ನಮ್ಮ ಕಾರ್ಯಕ್ರಮವನ್ನು ಅವರು ಬಹಳವಾಗಿ ಒಪ್ಪಿಕೊಂಡಿದ್ದಾರೆ. ಆಡಳಿತದಲ್ಲಿ ಕೆಲವು ತಪ್ಪುಗಳು ನಡೆದಿರಬಹುದು, ಕೆಲವು ಲೋಪದೋಷಗಳು ಇರುತ್ತವೆ. ಮಾನ್ಯ ದೇವೇಗೌಡರು ಹೇಳಿದರು ಲಾರೆನ್ಸ್ ಫರ್ನಾಂಡಿಸ್ ಅವರನ್ನು ಜೈಲಿನಲ್ಲಿ ಹೊಡೆದು ಬಹಳ ತೊಂದರೆಕೊಟ್ಟರು ಎಂದು. ಅವರು ಹೇಳಿದಂತೆ ಅವರನ್ನು ಏನಾದರೂ ಹೊಡೆದಿದ್ದರೆ ಅದು ಖಂಡನೀಯ, ಅಂಥಾ ಕೆಲಸವನ್ನು ಯಾರಾದರೂ ಮಾಡಿದ್ದರೆ ಅದನ್ನು ಯಾರೂ ಮೆಚ್ಚುವುದಿಲ್ಲ ಎಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಶ್ರೀ ಮಾನ್ ದೇವೇಗೌಡರಿಗೆ ಒಂದು ವಿಷಯ ಹೇಳುತ್ತೇನೆ. ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಎಷ್ಟೋ ಜನ ನಿರಪರಾಧಿಗಳನ್ನು ಪೋಲೀಸ್ ಸ್ಟೇಷನ್‌ನಲ್ಲಿ ಹೊಡೆದಿರುವುದರ ಬಗ್ಗೆ ನಾವು ಖಂಡಿಸಿದ್ದೇವೆ. ಆವಾಗ ಅವರು ಈ ಬಗ್ಗೆ ಶಾಸನಸಭೆಯಲ್ಲಿ ಏನು ವರದಿ ಕೊಡುತ್ತಿದ್ದರು ಎಂದರೆ ಅವನು ಫಾಲಿಡಾಲ್ ತೆಗೆದುಕೊಂಡು ಸತ್ತಿದ್ದಾನೆ ಎಂದು. ಬೇಕಾದರೆ ಈ ಸದನದಲ್ಲಿರುವ ಕಡಿತದಲ್ಲಿದೆ ನೋಡಬಹುದು. ನಾನು ಕೆಲವು ತಪ್ಪುಗಳನ್ನು ಮುಚ್ಚು ಹಾಕುವುದಕ್ಕೆ ಈ ರೀತಿ ಮಾತನಾಡುತ್ತಿದ್ದಾನೆ ಅಂತ ತಿಳಿದು ಕೊಳ್ಳಬಾರದು. ಆಡಳಿತದಲ್ಲಿ ತಪ್ಪು ಏನಾದರೂ ಇದ್ದರೆ ಅದನ್ನು ತಿದ್ದೋಣ. ಅನ್ಯಾಯವಾಗಿ ಇರುವಂಥಾ ಜನರನ್ನು ಜೈಲಿಗೆ ಹಾಕಿದರೆ ಅದನ್ನು ಯಾರೂ ಕೂಡ ಒಪ್ಪುವುದಿಲ್ಲ.

ಇನ್ನು ಇದೇ ಸಂದರ್ಭದಲ್ಲಿ ಒಂದು ಪ್ರಾಮುಖ್ಯವಾದ ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಜೈಲಿನಲ್ಲಿರುವವರನ್ನು ಬಿಡುಗಡೆ ಮಾಡುವ ವಿಚಾರದಲ್ಲಿ ಏನು ಮಾಡಿದ್ದಾರೆ ಎಂದರೆ ಕಾಫೀಪೋಸಾನಲ್ಲಿ ಇರುವವರನ್ನು ಕೂಡ ಬಿಡುಗಡೆ ಮಾಡಿದ್ದಾರೆ. ಕೆಲವರು ಬೇಲ್ ಮೇಲೆ ಇದ್ದರು, ಕೆಲವರು ಬಾಂಡ್ ಬರೆದುಕೊಟ್ಟಿದ್ದರು. ಅಂಥಾದ್ದರಲ್ಲೂ ಅವರನ್ನು ಬಿಡುಗಡೆ ಮಾಡಿದ್ದಾರೆ. ಜೈಲುಗಳಲ್ಲಿ ಒಳ್ಳೊಳ್ಳೆಯ ಜನರು ಇದ್ದರು, ಅವರನ್ನು ಬಿಟ್ಟಿರುವುದಕ್ಕೆ ನಾನೂ ಕೂಡ ಸಂತೋಷಪಟ್ಟಿದ್ದೇನೆ. ಅನ್ಯಾಯ ಮಾಡುವಂಥಾ ವ್ಯಕ್ತಿ ಇದ್ದರೆ, ಅವರ ಬಗ್ಗೆ ಕೋರ್ಟಿನಲ್ಲಿ ಛಾರ್ಜ್‌ಷೀಟ್ ಇದ್ದಾಗೂ ಕೂಡ ಅವರನ್ನೆಲ್ಲಾ ಏತಕ್ಕೆ ಬಿಟ್ಟರು ಅನ್ನುವ ವಿಷಯವನ್ನು ಕೇಳಿದರೆ ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟದ್ದು, ಇದನ್ನು ಡೆಲ್ಲಿ ಪಾರ್ಲಿಮೆಂಟಿನಲ್ಲಿ ಕೇಳಬೇಕು. ಅದಕ್ಕೂ ಇದಕ್ಕೂ ಸಂಬಂಧವಿಲ್ಲ ಎಂದು ಹೇಳಬಹುದು. ಈ ರೀತಿಯಾಗಿ ಕಾಫಿಪೋಸಾದಲ್ಲಿರುವವರನ್ನೂ ಕೂಡ ಜೈಲಿನಿಂದ ಬಿಡುಗಡೆ ಮಾಡಿರುವುದನ್ನು ವಿರೋಧಪಕ್ಷದವರಾದರೂ ಕೂಡ ಒಪ್ಪುತ್ತಾರೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಯಾವುದಾದರೂ ನಿದರ್ಶನ ಇದ್ದರೆ ಹೇಳಿ, ರಾಜ್ಯ ಸರ್ಕಾರದ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ಅದು ಬಿಟ್ಟು ಸುಮ್ಮನೆ ಲಘುವಾಗಿ ಹೇಳಬಾರದು.

ಶ್ರೀ ಎಸ್. ಬಂಗಾರಪ್ಪ.—ದೇಶದಲ್ಲಿ ತುರ್ತು ಪರಿಸ್ಥಿತಿ ರದ್ದಾದ ಎರಡು ದಿವಸದಲ್ಲೇ ಸಮಾಜ ಘಾತುಕ ವ್ಯಕ್ತಿಗಳನ್ನು ಬಿಡುಗಡೆ ಮಾಡಿದರಲ್ಲಾ ಇದು ಖಂಡನಾರ್ಹ ಎಂದು ಹೇಳುತ್ತೇನೆ. ಆಡಳಿತ ನಡೆಸುವುದಕ್ಕೆ ಜನತೆ ನಿಮ್ಮಗೆ ತೀರ್ಪು ಕೊಟ್ಟಿರಬಹುದು. ನಿಮ್ಮ ಆಡಳಿತ ಚೆನ್ನಾಗಿ ನಡೆಯಲಿ, ಅದಕ್ಕೆ ನಾನೂ ಸಹ ಬೆಂಬಲ ಕೊಡುತ್ತೇನೆ. ಜನತಾ ಪಕ್ಷದ ಒಂದು ಒಳ್ಳೆಯ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಮಾನ್ಯ ಅಧ್ಯಕರೇ, ಮಾನ್ಯ ದೇವೇಗೌಡರು ವ್ಯಕ್ತಿ ಪ್ರಶ್ನೆಯನ್ನು ತೆಗೆದು ಕೊಂಡು ಅದರಲ್ಲಿ ವ್ಯಕ್ತಿ ಪೂಜೆ ಅನ್ನುವ ಒಂದು ಮಾತನ್ನು ಹೇಳಿದರು. ವ್ಯಕ್ತಿ ಪೂಜೆ ಬಗ್ಗೆ ಕಳೆದ ಅಧಿವೇಶನದಲ್ಲೂ ಕೂಡ ಹೇಳಿದ್ದಾರೆ. ಅದಕ್ಕೆ ಈಗ ವ್ಯಕ್ತಿ ಪ್ರಾತಿನಿಧ್ಯ ತಡೆಗಟ್ಟಿ ಜನತಾ ಪ್ರಾತಿನಿಧ್ಯ ಇರಬೇಕು ಎಂದು ಹೇಳಿದ್ದಾರೆ. ಅದಕ್ಕೆ ಮಾನ್ಯ ಕಲ್ಮನ್‌ಕರ್‌ರವರು ಪ್ರಸ್ತಾಪ ಮಾಡುತ್ತಾ ಹೇಳಿದರು ಒಂದು ಸಾರಿ ಶ್ರೀ ಮಾನ್ ನಿಜಲಿಂಗಪ್ಪನವರು ಶ್ರೀಮತಿ ಇಂದಿರಾಗಾಂಧಿಯವರೆಗೆ ಒಂದು ಕಡೆ ಬಂಗಾರ ಹಾಕಿ ತೂಕ ಮಾಡಿಸಿದಂಥ ಜನವಲ್ಲವೇ ನೀವು ಅಂತ ಹೇಳಿದ್ದಾರೆ. ಹಿಂದೆ ಈ ರಾಜ್ಯಕ್ಕೆ ಗುರುಗಳು ಏನು ಆಗಿದ್ದರು ಅವರು ಆ ಸಂದರ್ಭದಲ್ಲಿ ಅವರಿಗೆ ವ್ಯಕ್ತಿ ಪೂಜೆ ಮಾಡಲಿಲ್ಲವೇ? ವ್ಯಕ್ತಿ ಪೂಜೆಗೆ ಅವಕಾಶ ಕೊಟ್ಟವರಾರು ? ಅದನ್ನು ಇಲ್ಲ ಎಂದು ಹೇಳುತ್ತೀರಾ ? ಇನ್ನೊಂದು ವಿಷಯ

ವನ್ನು ಮಾನ್ಯ ದೇವೇಗೌಡರು ಹೇಳಿದರು. ಅದು ರಿಕಾರ್ಡ್ ಆಗಿದೆ. ನಾನು ಮಹಿಳೆಯಲ್ಲ ಪುರುಷ ಅನ್ನುವ ಮಾತನ್ನು ಶ್ರೀಮತಿ ಇಂದಿರಾಗಾಂಧಿಯವರು ಹೇಳಿದರು ಅಂತ ಮಾನ್ಯ ದೇವೆ. ಗೌಡರು ಹೇಳಿದರು. ಅವರು ಆರೀತಿ ಹೇಳಿಲ್ಲಾ.

4–00 P. M.

ನಾನು ಹೇಳುತ್ತೇನೆ, ಏನೆಂದರೆ, ಮಾನ್ಯ ದೇವೇಗೌಡರಿಗೆ ಏನಾದರು ಮಹಿಳೆಯರ ಬಗ್ಗೆ ಗೌರವವಿದ್ದರೆ ಶ್ರೀಮಾನ್ ಮೊರಾರ್ಜಿದೇಸಾಯಿ ಅವರಿಗೇನಾದರೂ ಈ ದೇಶದ ಬಗ್ಗೆಗೌರವವಿದ್ದರೆ ಶ್ರೀಮತಿ ಮತು, ಇಂದಿರಾಗಾಂಧಿಯವರು ಏನಾದರು ಆ ಮಾತನ್ನು ಆಡಿದ್ದರೆ.........

SRI B. BASAVALINGAPPA.—Mr. Speaker, I remember what Smt. Indira Gandhi has said on the floor of the House when she was addressed as "lady", she said "I am not a lady, I am a woman". ಎನ್ನುವ ಮಾತನ್ನು ಅವರು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಆ ಸಂದರ್ಭದಲ್ಲಿ ಅವರು ನಾನು "ಪರ್ಸನ್" ಎಂದು ಹೇಳಿದ್ದಾರೆ. ಅದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಆದರೆ ಅದು ಯಾವ ಪತ್ರಿಕೆಯಲ್ಲಿ ವರದಿಯಾಗಿತ್ತು ಎಂಬುದು ನನಗೆ ಗೊತ್ತಿಲ್ಲ. ಆದರೆ "I am not a woman but I am a man"..................ಅನ್ನತಕ್ಕಂಥ ಮಾತನ್ನು ಶ್ರೀಮತಿ ಇಂದಿರಾಗಾಂಧಿಯವರು ಹೇಳಿದ್ದಾರೆಂದು ಮಾನ್ಯ ದೇವೇಗೌಡರು ಹೇಳಿದ್ದಾರೆ. ನಾನು ಹೇಳುತ್ತೇನೆ, ಶ್ರೀಮತಿ ಇಂದಿರಾಗಾಂಧಿಯವರೇನಾದರೂ ಆ ರೀತಿ ಹೇಳಿದ್ದರೆ............

ಚೇರ್‌ಮನ್‌ರವರು.—ಅವರು "ಪರ್ಸನ್" ಎಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ —ಶ್ರೀಮಾನ್ ಮೊರಾರ್ಜಿದೇಸಾಯಿ ಅವರು ಆ ರೀತಿ ಹೇಳಿದ್ದೇನೂ ದೊಡ್ಡ ವಿಷಯವಲ್ಲವೆಂದು ಶ್ರೀಮಾನ್ ದೇವೇಗೌಡರು ಹೇಳಿದ್ದಾರೆ. ಹಾಗಿದ್ದರೆ ಅವರು ಅವರ ನಾಯಕರಿಗೆ ಹೇಳಲಿ, ಏನೆಂದರೆ, ಶ್ರೀಮಂತಿ ಇಂದಿರಾಗಾಂಧಿಯವರು ಮಹಿಳೆಯಲ್ಲ, ಪುರುಷ ಎಂದು ಹೇಳುವುದಾದರೆ, ಅವರ ಹಿನ್ನೆಲೆ ಏನು ಎಂಬುದನ್ನು ಇವರೇ ಹೇಳುವ ಬದಲು ಅವರ ಬಾಯಿಂದಲೇ ಹೇಳಿಸಲಿ, ಆಗ ನಾನು ಸಂತೋಷಪಡುತ್ತೇನೆ.

ಇನ್ನು ಮಾನ್ಯ ದೇವೇಗೌಡರು ಚುನಾವಣಾ ಫಲಿತಾಂಶದ ಬಗ್ಗೆ ಒಂದ ಮಾತನ್ನು ಹೇಳಿದರು. ಏನೆಂದರೆ, 1971ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ 60 ರಿಂದ 70 ಪರ್ಸೆಂಟ್‌ವರೆಗೆ ಮತಗಳನ್ನು ಗಳಿಸಿತ್ತು, ಆದರೆ ಈ ಸಲದ ಚುನಾವಣೆಯಲ್ಲಿ ಅದು 50 ಪರ್ಸೆಂಟ್ ಚಿಲ್ಲರೆಗೆ ಇಳಿದಿದೆ ಎಂದು ಹೇಳಿದರು. ಮತ್ತು ಆಗ ವಿರೋಧಪಕ್ಷದ 21 ಪರ್ಸೆಂಟ್‌ನಷ್ಟು ಮತಗಳನ್ನು ಗಳಿಸಿದ್ದರೆ ಈ ಸಲ 39 ರಿಂದ 40 ಪರ್ಸೆಂಟ್ ಚಿಲ್ಲರೆವರೆಗೆ ಹೆಚ್ಚಾಗಿದೆ ಎಂದು ಹೇಳಿದರು. ಅಂದರೆ ತಮಗೆ ಜನತೆಯ ಬೆಂಬಲ ಶೇಕಡಾವಾರು ಹೆಚ್ಚಾಗಿದೆ ಎಂದು ಹೇಳಿದ್ದಾರೆ. ಈ ಬಗ್ಗೆ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ, ಏನೆಂದರೆ ಉತ್ತರ ಭಾರತದಲ್ಲಿ ಆಗಿರತಕ್ಕಂಥ ತೀರ್ಮಾನವೇ ಬೇರೆ, ದಕ್ಷಿಣ ಭಾರತದಲ್ಲಿ ಆಗಿರತಕ್ಕಂಥ ತೀರ್ಮಾನವೇ ಬೇರೆ ನಮ್ಮರಾಜ್ಯದಲ್ಲಿ ಆಗಿರತಕ್ಕಂಥ ತೀರ್ಮಾನ ಸ್ಪಷ್ಟವಾಗಿದೆ. ಅವರು ಅಖಿಲ ಭಾರತದ ಅಂಕಿಅಂಶಗಳನ್ನು ಕೊಟ್ಟು ಹೇಳಿದರು. ಆದರೆ ನಾನು ನಮ್ಮ ರಾಜ್ಯದ ಬಗ್ಗೆ ಮಾತ್ರ ಹೇಳುತ್ತಿದ್ದೇನೆ. ಕಾಂಗ್ರೆಸ್ ಪಕ್ಷದಲ್ಲಿ ಕೆಲವೊಂದು ಲೋಪದೋಷಗಳಿದ್ದರೂ ಸಹ ಬೇರೆಯವರು ಅಧಿಕಾರಕ್ಕೆ ಬಂದರೆ ಏನೇನು ತಪ್ಪುಗಳನ್ನು ಮಾಡಿಬಿಡುತ್ತಾರೋ ಎಂಬ ಕಾರಣದಿಂದ ಕಾಂಗ್ರೆಸ್‌ಪಕ್ಷದವರೇ ಅಧಿಕಾರದಲ್ಲಿ ಮುಂದುವರೆಯಬೇಕೆಂಬ ತೀರ್ಮಾನವನ್ನು ಈ ರಾಜ್ಯದ ಜನತೆ ಕೊಟ್ಟಿದೆ. ತುರ್ತುಪರಿಸ್ಥಿತಿಯ ಕಾಲದಲ್ಲಿ 70–80 ಜನರನ್ನು ಜೈಲಿನಲ್ಲಿಟ್ಟಿದ್ದರೆಂದು ಹೇಳಿದರು. ಆದರೆ ಶ್ರೀಮಾನ್ ನಿಜಲಿಂಗಪ್ಪನವರ ಸರ್ಕಾರ ಅಧಿಕಾರದಲ್ಲಿದ್ದಾಗ ಎಷ್ಟು ಜನರ ಮೇಲೆ ಕೇಸ್‌ಗಳನ್ನು ಹಾಕಿದರೆಂಬುದು ನನಗೆ ಗೊತ್ತಿದೆ. ಬೆಂಗಳೂರು ಒಂದರಲ್ಲಿಯೇ ನೂರಾರು ಜನರ ಮೇಲೆ ಮೊಕದ್ದಮೆ ಹೂಡಿದರು. ಕೆಲವರನ್ನು ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಹೊಡೆದಿದ್ದಾರೆ. ತಪ್ಪಿಲ್ಲದವರೂ ಸಹ ಕೋರ್ಟಿಗೆ ಅಲೆಯುವಂತೆ ಮಾಡಿದರು. ಅಂದರೆ ಅವರು ಮಾಡಿದಂತೆ ನಾವೂ ಮಾಡಬೇಕು ಎಂಬುದು ಇದರ ಅರ್ಥವಲ್ಲ. ಆದರೆ ಎಲ್ಲಿಯಾದರೂ ಅನ್ಯಾಯ ನಡೆದರೆ, ಅದನ್ನು ಯಾರೂ ಒಪ್ಪು

ವುದಿಲ್ಲ. ಎಲ್ಲಿಯಾದರು ತಪ್ಪುಗಳು ಆದಾಗ, ಅದನ್ನು ಸರಿಪಡಿಸತಕ್ಕ ಜವಾಬ್ದಾರಿ ನಮ್ಮ ಮೇಲಿದೆ. ನಿರ್ಮಲ ಇಂಜಿನಿಯರಿಂಗ್ ಕಂಪನಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮತ್ತು ಆ ಬಗ್ಗೆ ವಿಚಾರಣೆಯಾಗಬೇಕೆಂದು ಹೇಳುತ್ತಿದ್ದಾರೆ. ಆ ಒಂದು ಪ್ರಕರಣ ತಮ್ಮ ಕಾಲದಲ್ಲಿಯೇ ಆಗಿದ್ದು ಎಂಬುದಾಗಿ ಮಾನ್ಯ ಸಿದ್ಧವೀರಪ್ಪನವರು ಹೇಳಿದರು ಮಾನ್ಯ ಕೋಣಂದೂರು ಲಿಂಗಪ್ಪನವರು 1947ನೇ ಇಸವಿಯಿಂದ ಅಂದರೆ ನಮಗೆಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿಯವರೆಗೆ ನಡೆದಿರುವ ಎಲ್ಲ ಪ್ರಕರಣಗಳ ಬಗ್ಗೆ ವಿಚಾರಣೆಯಾಗಲೀ ಎಂದು ಹೇಳಿದರು. ಶರಾವತಿ ಕರ್ಮಕಾಂಡದ ಬಗ್ಗೆ ಸಹ ವಿಚಾರಣೆಯಾಗಬೇಕೆಂದು ನಾವು ಇದೇ ಸಭೆಯಲ್ಲಿ ಗಂಟೆಗಟ್ಟಲೆ ಮಾತನಾಡಿದ್ದೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅದನ್ನು ವಿಚಾರಣೆ ಮಾಡಿ ಎಂದು ಮಾನ್ಯ ವೀರೇಂದ್ರ ಪಾಟೀಲರೇ ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಈ ಸರ್ಕಾರದ ಮೇಲೆ ಕೆಲವೊಂದು ಅಪಾದನೆಗಳನ್ನು ಹೊರಿಸಿ ಅವರ ಬಗ್ಗೆ ವಿಚಾರಣೆಯಾಗಬೇಕೆಂದು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದಿದ್ದನ್ನು ನಾನು ಪತ್ರಿಕೆಗಳಲ್ಲಿ ನೋಡಿದ್ದೇನೆ, ಅದೇರೀತಿ ಶ್ರೀಮಾನ್ ನಿಜಲಿಂಗಪ್ಪನವರ ಸರ್ಕಾರವಿದ್ದಾಗ ನಡೆದಂಥ ಶರಾವತಿ ಕರ್ಮಕಾಂಡದ ಬಗ್ಗೆಯೂ ವಿಚಾರಣೆಯಾಗಲಿ. ಆ ಸಂಬಂಧದಲ್ಲಿ ಬೇರೆ ಬೇರೆ ಚಾರ್ಜಸ್‌ನ್ನು ಮಾಡಲಾಗಿದೆ. 20 ರಿಂದ 50 ಲಕ್ಷ ರೂಪಾಯಿಗಳವರೆಗೆ ಕಂಟ್ರಾಕ್ಟರ್‌ಸ್‌ಗೆ ಕೊಟ್ಟ ಬಗ್ಗೆ ವಿಚಾರಣೆಯಾಗಬೇಕೆಂದು ಜನತೆ ಕೇಳುತ್ತಿದ್ದಾರೆ. ಈ ಬಗ್ಗೆಯೂ ಸಹ ತನಿಖೆಯಾಗ ಬೇಕೆಂದು ಕೇಂದ್ರ ಸರ್ಕಾರದ ಮೇಲೆ ಇವರು ಒತ್ತಡ ತರಲಿ, ಮತ್ತು ವಿಚಾರಣೆಯಾಗಬೇಕೆಂದು ಈ ಸದನದಲ್ಲಿ ಅವರ ಬಾಯಿಂದಲೇ ಹೊರಬರಲಿ.

SRI KAGODU THIMMAPPA.—The hon' ble Member is speaking on behalf of the Ruling Party; he is insisting that judicial enquiry should be held in connection with Sharavathy Project ಈ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದು ತಾವೇ ಏತಕ್ಕೆ ಮುಖ್ಯಮಂತ್ರಿಗಳ ಮೇಲೆ ಒತ್ತಾಯ ಮಾಡಬಾರದು ? ಮತ್ತು ಅವಕಾಶ ವಿದ್ದಾಗ ತಾವೇ ಏತಕ್ಕೆ ಅದನ್ನು ಮಾಡಬಾರದು ?

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಸಲಹೆ ಒಳ್ಳೆಯದು. ವಿಚಾರಣೆ ಮಾಡಿ ಎನ್ನುವ ದೃಷ್ಟಿ ಯಿಂದ ಅಪಾದನೆಗಳು ಸೀಮಿತವಾಗಬಾರದು. ಶರಾವತಿ ಕರ್ಮಕಾಂಡದ ಬಗ್ಗೆ ಏನೇನು ಚಾರ್ಜಸ್ ಇವೆ, ಅವೆಲ್ಲಾ ಹೊರಗೆ ಬರಬೇಕು. ಕೆಲವು ಪ್ರಕರಣಗಳು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿವೆ ಎಂಬುದನ್ನು ನಾನು ಪತ್ರಿಕೆಗಳಲ್ಲಿ ನೋಡಿದ್ದೇನೆ. ಆ ಪ್ರಕರಣಗಳ ಜೊತೆ ಯಲ್ಲಿ ಈ ಶರಾವತಿ ಕರ್ಮಕಾಂಡದ ಪ್ರಕರಣವೂ ಸಹ ಸೇರಬೇಕು. ಮಾನ್ಯ ನಿಜಲಿಂಗಪ್ಪನವರ ಮಂತ್ರಿಮಂಡಲ ಇದ್ದಾಗ ಇದು ನಡೆದಿದ್ದು. ಇದಕ್ಕೆ ಸಂಬಂಧಪಟ್ಟವರು ಯಾರೇ ಇರಲಿ, ಕೇಂದ್ರ ಸರ್ಕಾರದವರು ಇದನ್ನು ವಿಚಾರಣೆ ಮಾಡಬೇಕು ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಈಗ ಏನು ಒಂದು ತೀರ್ಮಾನವಾಗಬೇಕೆಂದು ನಮ್ಮ ಮಿತ್ರರು ಹೇಳುತ್ತಿದ್ದಾರೆ, ಅದರ ಜೊತೆಗೆ ಈ ಪ್ರಕರಣದ ಬಗ್ಗೆ ತನಿಖೆಯಾಗಲೀ ಎಂಬತಕ್ಕಂಥ ಕೂಗು ಅವರ ಬಾಯಿಂದಲೇ ಪ್ರಬಲವಾಗಿ ಬರಬೇಕು. ಮತ್ತು ಒತ್ತಡವನ್ನು ಕೇಂದ್ರದ ಮೇಲೆ ತರಲಿ ಎಂದು ಹೇಳುತ್ತಿದ್ದೇನೆ.

ಇನ್ನು ಇಪ್ಪತ್ತು ಅಂಶಗಳ ಕಾರ್ಯಕ್ರಮದ ಅಡಿಯಲ್ಲಿ ಬರತಕ್ಕಂಥ ಜನತಾ ಮನೆಗಳ ಬಗ್ಗೆ ಉದಾಹರಣೆ ಕೊಟ್ಟು ಕೆಲವರು ಹೇಳಿದರು ಆದರೆ ಬಹಳಷ್ಟು ಕೆಲಸಕಾರ್ಯಗಳು ಈ ಇಪ್ಪತ್ತು ಅಂಶಗಳ ಕಾರ್ಯಕ್ರಮದ ಅಡಿಯಲ್ಲಿ ಆಗಿವೆ ಎಂಬುದು ನನ್ನ ಭಾವನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಕುಟುಂಬ ಯೋಜನೆಯ ಬಗ್ಗೆ ಹೇಳಿ ?

ಶ್ರೀ ಎಸ್. ಬಂಗಾರಪ್ಪ.—ಇಂದು ಜನರು ತಮ್ಮಷ್ಟಕ್ಕೆ ತಾವೇ ಹೋಗಿ ಸಂತಾನ ಹರಣ ಚಿಕಿತ್ಸೆಯನ್ನು ಮಾಡಿಸಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಒತ್ತಡ ತರಲಾಗುತ್ತಿದೆ ಎಂಬುದಾಗಿ ನನಗೆ ಒಂದೆರಡು ಕಡೆಗಳಿಂದ ದೂರ ಬಂತು. ತಕ್ಷಣವೇ ನಾನು ಅಲ್ಲಿಗೆ ಹೋಗಿ ಹೇಳಿದ್ದರಿಂದ ಆ ಕೆಲಸ ನಿಂತುಹೋಯಿತು. ಆದರೆ ನಿಮ್ಮ ಭಾಗದಲ್ಲಿ ಯಾವ ರೀತಿ ನಡೆದಿದೆ ಎಂಬುದು ನನಗೆ ಗೊತ್ತಿಲ್ಲ.

ಶ್ರೀ ಬಿ. ವಿ. ಕಕ್ಕಿಲ್ಲಾಯ.—ಈ ಚಿಕಿತ್ಸೆಯಿಂದ ಯಾರಿಗಾದರೂ ತೊಂದರೆ ಯಾಗಿದ್ದರೆ ಅಂತಹವರಿಗೆ 5 ಸಾವಿರ ರೂಪಾಯಿಗಳನ್ನು ಕೊಡುವುದಾಗಿ ಕೇಂದ್ರದ ಆರೋಗ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—5 ಸಾವಿರ ರೂಪಾಯಿಗಳನ್ನು ಕೊಡುವುದಾಗಿ ಅವರು ಪ್ರಕಟಣೆ ಮಾಡಿದ್ದಾರೆ. ಈ ಹಣ ಪಡೆಯುವುದಕ್ಕಾಗಿ ಕೆಲವರು ಸೇರಿಕೊಂಡು ಸಂತಾನ ಹರಣ ಚಿಕಿತ್ಸೆಯ ಶಿಬಿರಗಳನ್ನು ಏರ್ಪಾಡು ಮಾಡುತ್ತಿದ್ದಾರೆಂದು ನಾನು ಕೇಳಿದ್ದೇನೆ. ಅನೇಕ ಜನರು ಇದರ ಒಂದು ದುರ್ಲಾಭವನ್ನು ಪಡೆಯುತ್ತಾರೆಂದು ನಾನು ಕೇಳಿದ್ದೇನೆ 5 ಸಾವಿರ ರೂಪಾಯಿಗಳನ್ನು ಕೊಡುವುದಾಗಿ ಅವರು ಪ್ರಕಟಣೆ ಮಾಡಿರುವುದರ ಉದ್ದೇಶವಾದರೂ ಏನು ? ಇದು ಕೇವಲ ರಾಜಕೀಯಕ್ಕಾಗಿ ಎಂಬುದು ನಮಗೆ ಸ್ಪಷ್ಟವಾಗಿ ಗೊತ್ತಿದೆ. ಈ ಮೂಲಕ ಉತ್ತರ ಭಾರತದ ಜನರನ್ನು ಬೃಹತ ಪ್ರಮಾಣದಲ್ಲಿ ಸಂತೃಪ್ತಿಪಡಿಸುವಂತಹ ಒಂದು ಪ್ರಯತ್ನಕ್ಕೆ ಅವರು ಕೈಹಾಕಿದ್ದಾರೆ. ಯಾವ ಒಂದು ಕೆಲಸವನ್ನು ಅವರು ಮಾಡಬಾರದಾಗಿತ್ತೋ, ಅದೇ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅನ್ಯಾಯವಾಗಿರುವ ಕುಟುಂಬಗಳ ಜೀವನಕ್ಕೋಸ್ಕರವಾಗಿ ಎಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಅಲ್ಲೇ ಇವರು ಎಡವಿರುವುದು. ಅಷ್ಟು ಸುಲಭವಾಗಿ ಅಂಥಾ ವಿಷಯಕ್ಕೆಲ್ಲಾ ಆ ರೀತಿ ಹಣವನ್ನು ಕೊಡಬಾರದು ನಿಜವಾಗಿಯೂ ಅನ್ಯಾಯವಾಗಿದ್ದರೆ 5 ಸಾವಿರ ರೂಪಾಯಿಗಳಲ್ಲ 10 ಸಾವಿರ ರೂಪಾಯಿಗಳನ್ನು ಕೊಡಿ ನಾನು ಬೇಡ ಎಂದು ಹೇಳು ವುದಿಲ್ಲ. ದುರ್ಲಾಭವನ್ನು ಪಡೆಯತಕ್ಕಂಥಾ ಈ ಒಂದು ಕಾನೂನನ್ನು ಈಗ ಅಧಿಕಾರಕ್ಕೆ ಹೋಗಿ ರುವ ಸರಕಾರದವರು ಸ್ಪಷ್ಟವಾಗಿ ಬಹಳ ಎಚ್ಚರಿಕೆಯಿಂದ ನೋಡಬೇಕಾಗುತ್ತದೆ. ಈ ರೀತಿ ಒಂದೊಂದು ಕುಡುಂಬಕ್ಕೆ 5 ಸಾವಿರ ರೂಪಾಯಿಗಳನ್ನು ಕೊಡುತ್ತಾ ಹೋದರೆ ಎಷ್ಟು ಕೋಟಿ ರೂಪಾಯಿಗಳು ಬೇಕಾಗುತ್ತದೆಂಬುದನ್ನೂ ಯೋಚನೆ ಮಾಡಬೇಕಾಗುತ್ತದೆ. ಆ ಮೇಲೆ ಆ ಹಣವನ್ನು ತುಂಬಿಕೊಳ್ಳಬೇಕಾದರೆ ಮತ್ತೆ ಜನತೆಯ ಮೇಲೆ ತೆರಿಗೆಯನ್ನು ಹಾಕಬೇಕಾಗುತ್ತದೆ. ಜನತೆಗೆ ತಾವೇ ಉತ್ತರ ಕೊಡಬೇಕಾಗುತ್ತದೆ. ಈ ದೃಷ್ಟಿಯಿಂದ ಇದನ್ನು ಯೋಚನೆ ಮಾಡ ಬೇಕಾಗುತ್ತದೆ.

ವಿಧಾನಸಭೆಯ ಚುನಾವಣೆಯು ಈಗಲೇ ಬರಬಹುದು, ಅಥವಾ ಇನ್ನು 6 ತಿಂಗಳಿಗೆ ಬರ ಬಹುದು, ಅಥವಾ ಇನ್ನು ಒಂದು ವರ್ಷಕ್ಕೆ ಬರಬಹುದು. ಆದರೆ ಕಾನೂನಿನ ಪ್ರಕಾರ 1978ನೇ ಇಸವಿ ಫೆಬ್ರವರಿ ಅಥವಾ ಮಾರ್ಚಿ ತಿಂಗಳಲ್ಲಿ ನಡೆಯಬೇಕಾಗಿದೆ. ಇದನ್ನು ನಮ್ಮ ಮಾನ್ಯ ಮಿತ್ರ ರೆಲ್ಲರೂ ಒಪ್ಪುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಆಗ ಚುನಾವಣೆಯು ನಡೆದಂತಹ ಕಾಲದಲ್ಲಿ ನಾವು ನಮ್ಮ ಮತದಾರರನ್ನು ಕಾಣಬೇಕಾಗುತ್ತದೆ ಆಗ ಅಲ್ಲಿ ನಾವು ನಮ್ಮ ಮಾತನ್ನು ಮುಂದುವರಿಸುತ್ತೇವೆ. ಒಳ್ಳೆಯ ಕೆಲಸಗಳನ್ನು ಮಾಡತಕ್ಕ ಯೋಜನೆಯನ್ನು ನಮ್ಮ ಸರ್ಕಾರ ದವರು ಹಾಕಿದ್ದಾರೆ. ಇದನ್ನು ನಮ್ಮ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸ್ಪಷ್ಟಪಡಿಸಿದ್ದಾರೆ. ಜನತಾ ಗೃಹನಿರ್ಮಾಣ ಯೋಜನೆಯನ್ನು ಈಗ ಇರುವುದಕ್ಕಿಂತ 4ರಷ್ಟು 5ರಷ್ಟು ಜಾಸ್ತಿ ಮಾಡತಕ್ಕ ಒಂದು ಯೋಜನೆಯನ್ನು ಸರ್ಕಾರದವರು ಹಾಕಿಕೊಳ್ಳಬೇಕು ಎಂದು ನಾನು ಆಶಯುಳ್ಳವನಾಗಿದ್ದೇನೆ. ಹೈಸ್ಪೀಡ್ ರಿಗ್‌ಗಳನ್ನು ತರಿಸಿಬಾವಿಗಳನ್ನು ತೋಡಿಸಿ ಜನಗಳಿಗೆ ಕುಡಿಯುವುದಕ್ಕೆ ಜಾಸ್ತಿ ನೀರನ್ನು ಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು 20 ಅಂಶಗಳ ಕಾರ್ಯಕ್ರಮದಲ್ಲಿ ಜೀತದ ಆಳುಗಳನ್ನು ಬಿಡುಗಡೆ ಮಾಡತಕ್ಕದ್ದರಲ್ಲಿ ಒಳ್ಳೆಯ ಕೆಲಸ ಆಗಿದೆ. ಅದನ್ನು ಸಂಪೂರ್ಣವಾಗಿ ಸದುಪಯೋಗ ಪಡಿಸಿಕೊಂಡಿದ್ದಾರೆ. ಅದಕ್ಕಾಗಿ ಕಾಂಗ್ರೆಸ್ ಸರ್ಕಾರಕ್ಕೆ ಹೆಚ್ಚಿನ ಬೆಂಬಲವನ್ನು ಕೊಡತಕ್ಕ ಕೆಲಸ ಆಗಿದೆ. ಜೀತದ ಆಳುಗಳನ್ನು ಬಿಡುಗಡೆ ಮಾಡತಕ್ಕ ಕಾರ್ಯವನ್ನು ನನ್ನ ತಾಲ್ಲೂಕಿನಲ್ಲಿಯೂ ಕೂಡ ಮಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ನನ್ನ ತಾಲ್ಲೂಕಿಗೆ ಪ್ರವಾಸ ಬಂದಿದ್ದಾಗ 2400 ಜೀತದ ಆಳು ಗಳನ್ನು ಬಿಡುಗಡೆ ಮಾಡತಕ್ಕ ಒಂದು ಕಾರ್ಯ ನಡೆದಿದೆ, ಅವರಿಗೆ ಪುನರ್ ವಸತಿಯನ್ನು ಮಾಡಿದ್ದಾರೆ. ಇದು ಬಹಳ ಒಳ್ಳೆಯ ಯೋಜನೆ. ಜೀತದಾಳುಗಳನ್ನು ಬಿಡುಗಡೆ ಮಾಡಿದ್ದಾರೆ ಮತ್ತು ಅವರಿಗೆ ಪುನರ್ ವಸತಿಯನ್ನು ಕೂಡ ಮಾಡಿದ್ದಾರೆ. ಇದು ಒಳ್ಳೆಯ ಕೆಲಸವಲ್ಲವೇ ಇದನ್ನು ವಿರೋಧಪಕ್ಷದವರು ಒಪ್ಪುವುದಿಲ್ಲವೇ ?

ಭೂಸುಧಾರಣಾ ಕಾನೂನನ್ನು ಜಾರಿಗೆ ತಂದು ಹಲವಾರು ಜನಗಳಿಗೆ ಭೂಮಿಯನ್ನು ವಿತರಣೆ ಮಾಡಿದ್ದಾರೆ. 25 ಅಂಶಗಳ ಕಾರ್ಯಕ್ರಮ ಬಹಳ ಯಶಸ್ವಿಯಾಗಿ ನಡೆದಿದೆ ಈ 25 ಅಂಶಗಳ ಕಾರ್ಯಕ್ರಮವನ್ನು ಕಾರ್ಯಗತ ಮಾಡುವಾಗ ಯಾವುದಾದರೂ ಒಂದು ಸಾರಿ ತಪ್ಪು ನಡೆದರೆ 25 ಅಂಶಗಳ ಕಾರ್ಯಕ್ರಮವೇ ಅನ್ಯಾಯ ಎಂದು ಹೇಳುತ್ತೀರಾ ? ಈಗ ನಾಳೆ ಒಂದು ಜನತಾ ಪಕ್ಷದ ಸರ್ಕಾರವೇ 35 ಅಂಶಗಳ ಒಂದು ಕಾರ್ಯಕ್ರಮವನ್ನು ಹಾಕಿಕೊಂಡರು ಅಥವಾ 5 ಅಂಶದ ಕಾರ್ಯಕ್ರಮವನ್ನು ಹಾಕಿಕೊಂಡರು ಎಂದು ಇಟ್ಟುಕೊಳ್ಳಿ. ಅಷ್ಟಗಳನ್ನು ಕಾರ್ಯಗತ ಮಾಡುವಾಗ ಒಂದು ಸಣ್ಣ ತಪ್ಪು ಆದರೆ ಇಡೀ ಕಾರ್ಯಕ್ರಮವೇ ತಪ್ಪು ಎಂದು ಹೇಳುವುದಕ್ಕಾಗುತ್ತದೆಯೇ ? ಈ ದೃಷ್ಟಿಯಿಂದ ತುರ್ತುಪರಿಸ್ಥಿತಿಯು ಸ್ಪಷ್ಟವಾದ ಲಾಭ ದೇಶದ ಜನತೆಗೆ ಆಗಿದೆ ಎಂದು ನನ್ನ ಅಭಿಪ್ರಾಯ. ಒಂದು ವೇಳೆ ತಪ್ಪುಗಳಾಗಿದ್ದರೆ ಅವುಗಳನ್ನು ನಾವು ಸರಿಪಡಿಸುತ್ತೇವೆ. ಆ ತಪ್ಪುಗಳನ್ನು ರಿಪೇರಿ ಮಾಡುವುದಕ್ಕೆ ಬಾರದಿದ್ದರೆ ಆಗ ತಮ್ಮ ಕ್ಷಮೆಯನ್ನು ಕೋರುತ್ತೇವೆ. ದೇಶದ ಜನತೆ ಒಪ್ಪುತಕ್ಕಂಥಾ ಕಾರ್ಯವನ್ನು ಮಾಡುತ್ತೇವೆ. ಅಂಥಾ ಒಂದು ಉದ್ದೇಶವನ್ನು ನಾವು ಇಟ್ಟುಕೊಂಡಿದ್ದೇವೆ ಮುಂದೆ ಬರತಕ್ಕ ಚುನಾವಣೆಯಲ್ಲಿ ಮಾತ್ರ ನಾವು ನಮ್ಮ ಮತದಾರರನ್ನು ಭೇಟಿ ಮಾಡುತ್ತೇವೆ ಅವರ ಬೆಂಬಲವನ್ನು ಪಡೆಯುತ್ತೇವೆ ಎಂದು ನಾನು ಹೇಳುತ್ತೇನೆ. ನಾನು ನಮ್ಮ ಜನತಾ ಪಕ್ಷದ ಮಿತ್ರರಿಗೆ ಹೇಳುವುದು ಏನೆಂದರೆ ಇವೊತ್ತು ಕೇಂದ್ರ ಸರ್ಕಾರದಲಿ ಜನತಾ ಪಕ್ಷದ ಸರ್ಕಾರ ಇರಬಹುದು. ಆದರೆ ರಾಜ್ಯ ಸರ್ಕಾರಕ್ಕೆ ಕಾಂಗ್ರೆಸ್ ಪಕ್ಷವೇ ಇರಬೇಕೆಂದು ಜನತೆ ತೀರ್ಮಾನ ಮಾಡಿದೆ. ಅದರೆ ಬೇರೆ ರೀತಿಯಿಂದ ಸರ್ಕಾರವನ್ನು ಉರುಳಿಸಿದರೆ ಸಂವಿಧಾನ ಬಾಹಿರವಾಗಿ ಮಾಡಿದರೆ ಅದು ಬೇರೆ ವಿಷಯ.

SRI D. B. KALMANKAR.—Do you know that there is one extra-constitutional authority for the Janatha Party who is dictating these things (Sri Jayaprakash Narain)?

SRI KAGODU THIMMAPPA.—I take strong objection to this sort of insinuation. It is shameful on his part to claim him as the extra-constitutional authority.

SRI KONANDUR LINGAPPA.—He should not talk like that. What nonsense he is talking?

(At this stage four hon'ble. members were seen standing and denouncing the remarks made by Sri D. B. Kalmankar).

SRI KAGODU THIMMAPPA.—The hon'ble. member should hold his tongue and talk.

SRI KONANDUR LINGAPPA.—You are the murderer of democracy

SRI KAGODU THIMMAPPA.—What do you know about Shri Jayaprakash Narain?

MR. CHAIRMAN.—Please close the matter

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಸದಸ್ಯರಾದ ಶ್ರೀಮಾನ್ ದಿಗಂಬರ್‌ರಾವ್ ಕಲಮಂಕರ್ ಅವರು ಈ ಸಭೆಯಲ್ಲಿ ರಾಷ್ಟ್ರದ ಮಹಾ ನಾಯಕರಾದ ಶ್ರೀ ಜಯಪ್ರಕಾಶ್ ನಾರಾಯಣ್ ಅವರ ಹೆಸರನ್ನು ಹೇಳಿ ಅವರನ್ನು ಇಷ್ಟು ಲಘುವಾಗಿ ನೋಡುತ್ತಾರೆ ಎಂದು ನಾವ್ಯಾರೂ ಊಹಿಸಿರಲಿಲ್ಲ ಆ ರೀತಿ ಅವರು ಮಾತನಾಡಿದ್ದು ಸರಿಯಲ್ಲ ಎಂದು ನಾನು ಅಧ್ಯಕ್ಷರ ಮುಖಾಂತರ ತಿಳಿಸುವುದಕ್ಕೆ ಇಷ್ಟಪಡುತ್ತೇನೆ

ಶ್ರೀ ಎಸ್. ಬಂಗಾರಪ್ಪ.—ಶ್ರೀಮಾನ್ ಜಯಪ್ರಕಾಶ್ ನಾರಾಯಣ್ ಅವರ ಹೆಸರನ್ನು ತೆಗೆದರು ಎನ್ನುವ ದೃಷ್ಟಿಯಿಂದ ನಮ್ಮ ವಿರೋಧ ಪಕ್ಷದ ನಾಯಕರು ಈ ರೀತಿ ಗಲಾಟೆ ಮಾಡಿದರು ಎಂದು ಕಾಣುತ್ತದೆ. ಶ್ರೀಮಾನ್ ಕಲ್ಮಂಕರ್ ಅವರ ಅಭಿಪ್ರಾಯ ಈ ರೀತಿ ಇದೆಯೆಂದು

ನನ್ನ ಭಾವನೆ. ಶ್ರೀಮಾನ್ ಜಯಪ್ರಕಾಶ್ ನಾರಾಯಣ್ ಅವರು ವ್ಯಕ್ತಪಡಿಸಿರುವ ಅಭಿಪ್ರಾಯ ಪತ್ರಿಕೆಯಲ್ಲಿ ಬಂದಿದೆ. ಅದು ಎಕ್ಸ್‌ಟ್ರಾ ಕಾನ್‌ಸ್ಟಿಟ್ಯೂಷನಲ್ ಮೆಥೆಡ್ ಆಗುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದರು.

SRI KAGODU THIMMAPPA.—He says that Sri Jayaprakash Narain is exercising extra-constitutional authority.

ಶ್ರೀ ಎಸ್ ಬಂಗಾರಪ್ಪ.—ಎಕ್ಸ್‌ಟ್ರಾ ಕಾನ್‌ಸ್ಟಿಟ್ಯೂಷನಲ್ ಮೆಥೆಡ್ ಆಗುತ್ತದೆ ಎನ್ನುವುದು ಶ್ರೀಮಾನ್ ಕಲಮಂಕರ್ ಅವರ ಅಭಿಪ್ರಾಯ ಎಂದು ಕಾಣುತ್ತದೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ತಮಗೆ ಒಂದು ಮಾತನ್ನು ಹೇಳುವುದಾದರೆ ಶ್ರೀಮಾನ್ ಜಯಪ್ರಕಾಶ್ ನಾರಾಯಣ್ ಅವರು ನಾಯಕತ್ವವನ್ನು ವಹಿಸಿದ್ದರಿಂದ ಜನತೆ ಅವರಿಗೆ ಬೆಲೆಯನ್ನು ಕೊಟ್ಟಿದ್ದಾರೆ ಚುನಾವಣೆಯಲ್ಲಿ ಅವರು ನೇತೃತ್ವವನ್ನು ವಹಿಸಿದ್ದರಿಂದ ಅವರ ಹೆಸರು ಪತ್ರಿಕೆಗಳಲ್ಲಿ ಹೆಚ್ಚಿಗೆ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬಂದಿದೆ ಅವರ ಮಾತನ್ನೇ ಇವತ್ತು ಕೇಂದ್ರ ಸರ್ಕಾರ ಒಪ್ಪತಕ್ಕ ಸಂದರ್ಭ ಇದೆ ಎನ್ನುವ ಆತಂಕ ಸಾಮಾನ್ಯ ಜನರ ಮನಸ್ಸಿನಲ್ಲಿದೆ. ಕಾನೂನು ಬಿಟ್ಟು ರೂಲಿಂಗ್ ಬಿಟ್ಟು ಹೋಗತಕ್ಕ ತೀರ್ಮಾನ ಆಗಬಹುದು, ಎಕ್‌ಸ್ಟ್ರಾ ಕಾನ್‌ಸ್ಟಿಟ್ಯೂಷನಲ್ ಅಥಾರಿಟಿ. ಎನ್ನುವ ಭಾವನೆ ಜನತೆಗೆ ಬರಬಾರದು ಎಂದು ಮಾನ್ಯ ಕಲ್ಮಂಕರ್ ಅವರು ಹೇಳಿದ್ದಾರೆ ಎಂದು ನನ್ನ ಅಭಿಪ್ರಾಯ. ಮಾನ್ಯ ರಾಜ್ಯಪಾಲರು ರಾಜ್ಯ ವಿಧಾನ ಮಂಡಲದಲ್ಲಿ ಏನು ಭಾಷಣ ಮಾಡಿದ್ದಾರೆ ಅದರಲ್ಲಿ ಹಲವಾರು ಒಳ್ಳೆಯ ಅಂಶಗಳನ್ನು ಹೊಂದಿದೆ ಎನ್ನುವ ಅಭಿಪ್ರಾಯ ಹೊಂದಿದ್ದೇನೆ. ರಾಜ್ಯದ ಜನತೆಯ ಆಶೋತ್ತರಗಳನ್ನು ಈಡೇರಿಸಲು ನಿಮ್ಮ ಪ್ರಯತ್ನಗಳನ್ನು ದ್ವಿಗುಣಗೊಳಿಸಬೇಕು ಎಂದು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಾವು ದೇಶದ ಜನತೆಗೆ ಏನು ಆಶ್ವಾಸನೆ ಕೊಟ್ಟು ಇಲ್ಲಿ ಸೇರಿದ್ದೇವೆ ಅದನ್ನು ನಡೆಸಿಕೊಡುವುದು ನಮ್ಮ ಕರ್ತವ್ಯ ಎಂದು ಹೇಳಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲ್ಲಾಯ (ಬಂಟ್ವಾಳ).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದಲ್ಲಿ ಮಾನ್ಯ ದೇವೇಗೌಡರು ಹೇಳಿದ ಹಾಗೆ, "ನೀವು ಇದೀಗ ಚುನಾವಣೆಯ ರಂಗದಿಂದ ಮರಳಿ ಬಂದಿದ್ದೀರಿ, ಜನ ಸಂಪರ್ಕವನ್ನು ನೀವು ಸಹಜವಾಗಿಯೂ ನವೀಕರಿಸಿಕೊಂಡಿದ್ದೀರಿ ಎಂದು ಹೇಳಿದ್ದಾರೆ. ಬಹುಶಃ ಈ ಭಾಷಣ ತಯಾರು ಮಾಡಿದಾಗ ಚುನಾವಣೆ ಫಲಿತಾಂಶ ಏನಾಗಬಹುದು ಎನ್ನುವ ನಿರೀಕ್ಷೆ ಇದ್ದ ಹಾಗೆ ಕಾಣಲಿಲ್ಲ ಈಗ ಅದು ತಿರುಗುಮುರುಗು ಆಯಿತು. ಅದರ ಬಗ್ಗೆ ನಾನು ಹೇಳದೆ ಅಷ್ಟಕ್ಕೇ ಬಿಟ್ಟಿದ್ದೇನೆ. ಈ ಭಾಷಣ ಬರೆದದ್ದು ಚುನಾವಣೆಗಿಂತ ಮೊದಲು ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ ಅದು ಇರಲಿ, ಚುನಾವಣೆಯ ಫಲಿತಾಂಶವನ್ನು ನಾವು ನೋಡಿದರೆ ನಮ್ಮ ದೇಶದ ರಾಜಕೀಯ ಪರಿಸ್ಥಿತಿ ಮೂಲಭೂತವಾಗಿ ತಿರುಗು ಮುರುಗು ಆಗಿದೆ ಎನ್ನುವುದು ಬಹಳ ಸ್ಪಷ್ಟವಾಗಿದೆ. ಈ ಮಾತನ್ನು ಆ ಕಡೆ ಇದ್ದವರು ಈ ಕಡೆ ಇದ್ದವರು—ಎಲ್ಲರೂ ಒಪ್ಪಿಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ ಇವತ್ತಿನ ದಿವಸ ನಮ್ಮ ದೇಶದ ಪ್ರಭುತ್ವದ ರಚನೆಯಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳು ಶಾಸನ ಸಭೆಗಳು, ಪಾರ್ಲಿಮೆಂಟ್—ಇವುಗಳಲ್ಲಿ ಅಧಿಕಾರ ಪಕ್ಷದಲ್ಲಿ ಅಥವಾ ವಿರೋಧಪಕ್ಷದಲ್ಲಿ ಇರುವಂಥ ರಾಜಕೀಯ ಪಕ್ಷಗಳಿಗೆ—ಹೊರಗಡೆ ಸಾಮೂಹಿಕ ಸಂಘಟನೆಗಳು—ಇವೆಲ್ಲ ಸೇರಿ ಏನು ಒಂದು ಅಧಿಕಾರದ ರಚನೆಯಾಗಿದೆ, ಸ್ಟೇಟ್ ಸ್ಟ್ರಕ್ಚರ್ ಎಂದು ಏನು ಹೇಳುತ್ತೇವೆ, ಅದು ಮೂಲಭೂತವಾಗಿ ಇವತ್ತು ಬದಲಾವಣೆಯಾಗಿದೆ. ಇದನ್ನು ತಾವು ಗಮನಿಸಬೇಕು ಎಂದು ನಾನು ಪ್ರಾರ್ಥಿಸುತ್ತೇನೆ 1971ರ ಕೇಂದ್ರ ಮತ್ತು 1972ರ ರಾಜ್ಯಗಳ ಚುನಾವಣೆಗಳಲ್ಲಿ ಹೆಚ್ಚಾಗಿ ಕಾಂಗ್ರೆಸ್ ಪಕ್ಷಕ್ಕೆ ಜನತೆ ಬೆಂಬಲ ಕೊಟ್ಟು ಅವರ ಸರ್ಕಾರ ರಚನೆಯಾಯಿತು. ಜನತೆ ಕಾಂಗ್ರೆಸ್ಸಿಗೆ ಈ ದೇಶದಲ್ಲಿ ಒಂದು ರೀತಿಯಾದ ಏಕಸ್ವಾಮ್ಯವನ್ನೇ ರಾಜಕೀಯ ಅಧಿಕಾರದಲ್ಲಿ ಕೊಟ್ಟಿದ್ದನ್ನು 1971–72ರ ಚುನಾವಣೆಗಳಲ್ಲಿ ನಾವು ಕಂಡಿದ್ದೇವೆ ಈಗಿನ ಚುನಾವಣೆಯಲ್ಲಿ ಬಹಳ ಬದಲಾವಣೆಯಾಯಿತು, ಹಿಂದೆ ಏಕಸ್ವಾಮ್ಯ ಏನಿತ್ತು ಅದು ಇಂದು ಅವಸಾನವಾಗಿದೆ. ಅಷ್ಟೇ ಅಲ್ಲ ಎಷ್ಟೋ ರಾಜ್ಯಗಳಲ್ಲಿ ಹಿಂದೆ ಕೂಡ ಕಾಂಗ್ರೆಸ್ಸಿನಲ್ಲಿ ಬಿರುಕು ಬಿಟ್ಟಿತ್ತು. ಆದರೆ ಈ ಸಲದ ಚುನಾವಣೆಯಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ಸಿನ ಅಧಿಕಾರ ಕೈತಪ್ಪಿಹೋಗಿ ಬೇರೊಂದು ಪಕ್ಷ ಅಧಿಕಾರಕ್ಕೆ ಬಂದಿದೆ. ನಮ್ಮ ದೇಶದಲ್ಲಿ

ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದೆ, ಇನ್ನು ಕೆಲವು ರಾಜ್ಯಗಳಲ್ಲಿ ಬೇರೆ ಪಕ್ಷಗಳು ಅಧಿಕಾರದಲ್ಲಿವೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಇವತ್ತು ನಾವಿದ್ದೇವೆ. ಆದುದರಿಂದ ನಾವು ಆ ಕಡೆಯಿಂದ ಮಾತನಾಡುವಾಗ ಆಗಲೀ, ಈ ಕಡೆಯಿಂದ ಮಾತನಾಡುವಾಗ ಆಗಲೀ, ಅಥವಾ ನಮ್ಮ ದೇಶದ ಭವಿಷ್ಯದ ಬಗ್ಗೆ ಯಾವುದೇ ಯೋಚನೆ ಮಾಡುವಾಗ ಆಗಲೀ, ನಾವೆಲ್ಲರೂ ಈ ದೇಶದ ಆಡಳಿತದಲ್ಲಿ ಸಹಭಾಗಿಗಳಾಗಿದ್ದೇವೆ ಎನ್ನುವುದನ್ನು ಗಮನಿಸಬೇಕು ಎಂದು ನಾನು ಎರಡೂ ಕಡೆಯ ಮಿತ್ರರಲ್ಲಿ ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. 20 ಅಂಶಗಳ ಕಾರ್ಯಕ್ರಮ ಜಾರಿಗೊಳಿಸುವಾಗ ಆಗಲೀ, ಅಥವಾ ತುರ್ತುಪರಿಸ್ಥಿತಿ ಕಾಲದಲ್ಲಿ ಮಾಡಿದಂಥ ಕಾರ್ಯಗಳಿಂದ ಘೋರ ಅಪಘಾತಗಳು ಆಗಿರಬಹುದು, ಅದನ್ನು ನಾನು ಒಪ್ಪುತ್ತೇನೆ. ಇದರ ಬಗ್ಗೆ ನಮ್ಮ ಸ್ನೇಹಿತರು ವಾದಿಸಿದ್ದಾರೆ. ಶ್ರೀಮಾನ್ ದೇವೇಗೌಡರ ಭಾಷಣವನ್ನು ಮೊದಲಿನಿಂದ ಕೊನೇವರೆಗೂ ನಾನು ಕೇಳಿದಾಗ, ಬರೀ 19 ತಿಂಗಳಲ್ಲಿ ಏನಾಯಿತು. ಈ ಕಾಲದಲ್ಲಿ ಏನೇನು ಘಟನೆಗಳು ಸಂಭವಿಸಿದುವು, ಏನೇನು ಅತಿರೇಕಗಳು ನಡೆದುವು, ಜನತೆಯ ಸ್ವಾತಂತ್ರ್ಯವನ್ನು ಯಾವರೀತಿ ಅಪಹರಿಸಿದರು, ಬಲಾತ್ಕಾರ ಸಂತಾನ ಶಕ್ತಿ ಹರಣ ಶಸ್ತ್ರ ಚಿಕಿತ್ಸೆ ಮತ್ತು ಅನೇಕ ಜನರನ್ನು ಜೈಲಿಗೆ ಕಳಿಸಿದ್ದನ್ನು, ಅವರು ಜೈಲಿನಲ್ಲಿ ಯಾವರೀತಿ ಕಷ್ಟಪಟ್ಟಿದ್ದಾರೆ ಎನ್ನುವುದನ್ನು ಹೇಳಿದರು. ಅವರು ಹೇಳಿದ್ದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ನಮ್ಮ ದೇಶದಲ್ಲಿ ತುರ್ತುಪರಿಸ್ಥಿತಿ ಕಾಲದಲ್ಲಿ ಆಗಬಾರದ್ದೆಲ್ಲಾ ಆಗಿಹೋಯಿತು. ಅದಕ್ಕೆ ಶ್ರೀಮತಿ ಇಂದಿರಾ ಗಾಂಧಿಯವರು, ಅವರ ನಿಕಟವರ್ತಿಗಳು ಕಾರಣ ಇರಬಹುದು. ಏಕೆಂದರೆ, ಅವರು ಒಂದು ದೊಡ್ಡ ಜವಾಬ್ದಾರಿ ಸ್ಥಾನದಲ್ಲಿದ್ದವರು. ಇಂತಹ ದೊಡ್ಡ ದೇಶದಲ್ಲಿ ಅನಾಹುತಗಳು ಆಗಿದೆ ಎಂದು ಒಪ್ಪಿಕೊಳ್ಳುವಾಗಲೇ ಜನತೆ ಶಿಕ್ಷೆ ವಿಧಿಸಿ, ನೀವು ಪಾಠ ಕಲಿಯಬೇಕಾಗಿರುವುದರಿಂದ ಸ್ವಲ್ಪ ಕಾಲ ನೀವು ಅಧಿಕಾರದಲ್ಲಿ ಇರಬಾರದು, ಎಂದು ಅಭಿಪ್ರಾಯ ಕೊಟ್ಟಿರುವಾಗ, ಅದನ್ನು ದೊಡ್ಡದು ಮಾಡಿ ಮುಂದೆ ತಿರುಗಿ ಅಧಿಕಾರಕ್ಕೆ ಬರುತ್ತೇವೆ ಎನ್ನುವ ಭ್ರಮೆಯಿಂದ ನೀವು ಮಾತನಾಡಿದರೆ, ಜನತೆ ಅಷ್ಟು ಸುಲಭವಾಗಿ ಯಾರನ್ನೂ ಅಧಿಕಾರಕ್ಕೆ ತಂದುಬಿಡುವುದಿಲ್ಲ, ತಂದುಬಿಡುತ್ತಾರೆ ಎನ್ನುವುದು ಒಂದು ಭ್ರಮೆ ಮಾತ್ರ. 19 ತಿಂಗಳಿಗೆ ಮೊದಲು ದೇಶದಲ್ಲಿ ಯಾವ ವಾತಾವರಣವಿತ್ತು. ನಂತರ ಏನಾಯಿತು, ಇನ್ನು ಮುಂದೆ ಏನೇನು ಆಗಲಿಕ್ಕಿದೆ ಎನ್ನುವ ವಿಚಾರಗಳನ್ನು ತಾವು ಸ್ವಲ್ಪ ಗಮನಿಸಬೇಕು. ಇದರ ಬಗ್ಗೆ ಕೆಲವು ವಿಚಾರಗಳನ್ನು ತಮಗೆ ಹೇಳಬೇಕು ಎಂದು ಇದ್ದೇನೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಹೊಸದಾಗಿ ಕೇಂದ್ರ ಸರ್ಕಾರ ರಚನೆಯಾದ ಮೇಲೆ ಕೆಲವು ಒಳ್ಳೆಯ ಕಾರ್ಯಗಳನ್ನು ಮಾಡಿದ್ದಾರೆ. ಹಿಂದೆ ರೈಲ್ವೆ ಮುಷ್ಕರದ ಕಾಲದಲ್ಲಿ ಕೆಲಸ ಕಳೆದುಕೊಂಡಿದ್ದವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ ಎಂಧು ಹೇಳಿದರು, ಪೋಸ್ಟ್ ಅಂಡ್ ಟೆಲಿಗ್ರಾಫ್‌ನಲ್ಲಿ ಕೆಲಸ ಕಳೆದುಕೊಂಡವರಿಗೆ ಇನ್ನು 6 ವಾರಗಳಲ್ಲಿ ಕೊಡುತ್ತೇವೆ ಎಂದು ಹೇಳಿದರು. ಇದು ಬಹಳ ಸಂತೋಷಪಡಬೇಕಾದ ವಿಚಾರಗಳು. ಅದೇರೀತಿ, ಈ ಬೋನಸ್ ಕಾಯಿದೆ ಹಿಂದೆ ಏನು ತುರ್ತು ಪರಿಸ್ಥಿತಿ ಕಾಲದಲ್ಲಿ ರದ್ದಾಗಿತ್ತು ಅದನ್ನು ಪುನರ್ರಚನೆ ಮಾಡಿ. ಯಾವರೀತಿ ಮಾಡುತ್ತಾರೋ ಗೊತ್ತಿಲ್ಲ, ಅಂತೂ ಬೋನಸ್ ಕಾಯಿದೆಯನ್ನು ಕೊಡುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಇದೇರೀತಿ ಕಡ್ಡಾಯ ಉಳಿತಾಯ ಠೇವಣಾತಿ ಏನು ಜಾರಿಗೆ ಬಂದಿತ್ತು ಅದರ ಹಣವನ್ನು ವಾಪಸ್ ಮಾಡಿ ಮುಂದಕ್ಕೆ ಅದು ಇಲ್ಲದ ಹಾಗೆ ರದ್ದು ಮಾಡುತ್ತೇವೆ ಎನ್ನುವ ವಿಚಾರಗಳನ್ನು ಹೇಳಿದ್ದಾರೆ, ಇವು ಸ್ವಾಗತಾರ್ಹವಾದ ವಿಚಾರಗಳು.

ಶ್ರೀ ಕೆ. ಶ್ರೀರಾಮುಲು.—ಅಡೀಷನಲ್ ಡಿ ಎ. ವಾಪಸ್ ಕೊಡುತ್ತೇವೆ ಎಂದು ಹೇಳಿರವುದು ಪತ್ರಿಕೆಯಲ್ಲಿ ಬಂದಿದೆ. ಆದನ್ನು ಯಾವ ಕ್ರಮದಿಂದ ವಾಪಸ್ ಕೊಡುತ್ತಾರೆ ಎನ್ನುವ ವಿವರಣೆಯನ್ನು ಹೇಳಿ.

ಶ್ರೀ ಬಿ ವಿ. ಕಕ್ಕಿಲ್ಲಾಯ —ಇನ್‌ಕಂ ಟ್ಯಾಕ್ಸ್ ಕೊಡುವವರಿಗೆ ಅವರ ಕಡ್ಡಾಯ ಠೇವಣಿ ಇರುವುದನ್ನು ಕೆಲವು ಕಂತುಗಳಲ್ಲಿ ವಾಪಸ್ ಕೊಡುವುದಾಗಿ ತೀರ್ಮಾನ ಮಾಡಿದ್ದಾರೆ. ಆದರೆ ನೌಕರರಿಗೆ, ಕೆಲಸಗಾರರಿಗೆ, ಈ ಹಣವನ್ನು ಒಂದೇ ಕಂತಿನಲ್ಲಿ ವಾಪಸ್ ಕೊಡುತ್ತಾರೆಂದು ನಮ್ಮ ಅಪೇಕ್ಷೆ.

ಶ್ರೀ ಕೆ. ಶ್ರೀರಾಮುಲು. —ಈ ವಿಷಯವಾಗಿ ಪತ್ರಿಕೆಯಲ್ಲಿ ಏನು ಹೇಳಿದ್ದಾರೋ ಅದರ ಬಗ್ಗೆ ಹೇಳಿ.

ಶ್ರೀ ಬಿ. ವಿ. ಕಕ್ಕಿಲಾಯ.—ಪತ್ರಿಕೆಗಳಲ್ಲಿ ಬರೆದಿರುವುದನ್ನು ನಂಬಿಕೊಂಡು ಹೇಗೇ ಮಾಡುತ್ತಾರೆ ಎಂದು ಹೇಳಲಿಕ್ಕಾಗಬರುವುದಿಲ್ಲ. ಯಾವ ರೀತಿ ಕೊಡುತ್ತಾರೋ ನೋಡೋಣ. ಕೊಟ್ಟಂಥ ಆಶ್ವಾಸನೆಗಳನ್ನು ನಂಬಿಕೊಳ್ಳೋಣ, ಇಂತಹ ಕೆಲವು ಒಳ್ಳೆಯ ಕೆಲಸಗಳನ್ನು ಮಾಡಬಹುದು ಎಂದು ಇಟ್ಟುಕೊಳ್ಳೋಣ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಇಷ್ಟರಲ್ಲೇ ಎಲ್ಲಾ ಕಾರ್ಯವಾಗುವುದಿಲ್ಲ.

4-30 P. M.

ನರಸಿಂಹಾವತಾರದಲ್ಲಿ ನರಸಿಂಹದೇವರು ಹಿರಣ್ಯಕಶಿಪುವಿನ ಕರಳು ಬಗೆದು ತನ್ನ ಅವತಾರ ತೋರಿಸಿದ್ದಾನೆ. ಎಲ್ಲರೂ ಹಿರಣ್ಯಕಶಿಪುನಂತೆ ಇರುವುದಿಲ್ಲ ಅದರೂ ನರಸಿಂಹಾವತಾರ ಕೆಲವು ದಿವಸಗಳಿಂದ ನಡೆಯುತ್ತಲೇ ಇದೆ. ನರಸಿಂಹಾವತಾರ ಇವರಿಗೆ ನಾಲ್ಕನೆಯದು. ಅದರ ಮೊದಲು ಮೂರು ಅವತಾರಗಳಾದುವು. ಹಿಂದಿನ ಅವತಾರ ಯಾವುದು? ಅಧಿಕಾರಕ್ಕೆ ಬರುವುದಕ್ಕೆ ಮೊದಲು ತುರ್ತು ಪರಿಸ್ಥಿತಿಯಲ್ಲಿ ಹಿಂದಿನ ಅವತಾರದಲ್ಲಿ ಏನೇನು ನಡೆಯಿತು ಅವರು ಏನೇನು ಮಾಡಿದರೋ ಅದೇ ದಾರಿಯಲ್ಲಿ ಮಾತ್ರ ಹೋಗಬೇಡಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಚುನಾವಣೆಯಲ್ಲಿ ಗೆದ್ದುಬಂದಂಥ ಸರ್ಕಾರಗಳು ತಮ್ಮ ಸರ್ಕಾರವನ್ನು ವಿಸರ್ಜನೆ ಮಾಡಬೇಕು ಎಂದು ಹೇಳುವುದು ಸರಿಯಲ್ಲ. ಎಂ. ಎಲ್. ಎ. ಗಳು ಅಸೆಂಬ್ಲಿಗೆ ಹೋಗಬಾರದು, ಪಾರ್ಲಿಮೆಂಟಿಗೆ ಹೋಗಬಾರದೆಂದರೆ ಇವರ ಹಿಂದಿನ ಅವತಾರ ದೃಶ್ಯ ಯಾವ ರೀತಿ ಇತ್ತು? ಅವರು ಅಧಿಕಾರಕ್ಕೆ ಬಂದ ಮೇಲಾದರೂ ಆ ರೀತಿಯ ಅವತಾರಗಳು ಅವರಲ್ಲಿ ದೂರವಾಗಲು ಜನ ನಿಮಗೆ ಪ್ರೋತ್ಸಾಹ ಕೊಟ್ಟಿದ್ದಾರೆ. ಅವರು ಅಧಿಕಾರದಲ್ಲಿ ಇರುವಷ್ಟು ಕಾಲ ಅವರ ಇಂತಹ ಅವತಾರಗಳಿಗೆ ಯಾರೂ ನಮ್ಮ ದೇಶದಲ್ಲಿ ಪ್ರೋತ್ಸಾಹ ಕೊಡಬಾರದು. ಬಿಹಾರ, ಗುಜರಾತ್ ಅಸೆಂಬ್ಲಿಗಳಿಗೆ ಸದಸ್ಯರು ಹೋಗಬಾರದು, ಆಂಧ್ರದಲ್ಲಿ ಪಾರ್ಲಿಮೆಂಟ್ ಸದಸ್ಯರು ಪಾರ್ಲಿಮೆಂಟ್‌ಗೆ ಹೋಗಬಾರದು, ಆಂಧ್ರ ಪ್ರಾಂತ್ಯವನ್ನು ವಿಂಗಡಿಸಬೇಕೆಂದರೆ ಅದರ ಬಗ್ಗೆ ಇನ್ನೂ ಏನೇನೋ ನಡೆಯಬೇಕು ಎಂದು ಹೇಳುವುದು ಸರಿಯಲ್ಲ. ಇಂಥಾದ್ದು ಇನ್ನು ಮುಂದೆ ಈ ದೇಶದಲ್ಲಿ ಆಗದೇ ಇರಲಿ ಎಂದು ನಾನು ಈ ದೇಶದಲ್ಲಿರುವ ಪ್ರಜಾಪ್ರಭುತ್ವದ ಒಂದು ಮಮತೆಯಿಂದ ನಾನು ಹೇಳುತ್ತಿದ್ದೇನೆ. ಒಂದು ವೇಳೆ ಯಾವುದೇ ಪಕ್ಷವಿರಲಿ, ಅವರ ಅಧಿಕಾರ ಕುಸಿದುಕೊಂಡರೆ ಬೇರೆಯವರು ಹಿಂದಿನವರ ಅವತಾರವನ್ನೇ ಪುನಃ ತಾಳುತ್ತೇವೆಂದು ಹೇಳಿದರೆ ಅಂಥಾದ್ದನ್ನು ನಾನು ಒಪ್ಪುವುದಿಲ್ಲ

ಶ್ರೀ ಎಸ್. ಬಂಗಾರಪ್ಪ.—ಜನತೆ ಆರಿಸಿ ಕಳುಹಿಸಿರತಕ್ಕಂಥ ಪ್ರತಿನಿಧಿಗಳನ್ನು ಮತ್ತೆ ಅವರು ವಾಪಸ್ಸು ಕರೆಸಿಕೊಳ್ಳಬಹುದು, ಈಗ ಬಿಹಾರ್ ಮತ್ತು ಗುಜರಾತ್‌ಗಳಲ್ಲಿ ಅದರ ಬಗ್ಗೆ ಒಳಸಂಚು ಪ್ರಾರಂಭಿಸಿದೆ. ಹಾಗಾದರೆ ಇವತ್ತು ದೆಹಲಿಯಲ್ಲಿ ಸರ್ಕಾರ ನಡೆಸುತ್ತಿರುವವರನ್ನು ನೀವು ಸರಕಾರವನ್ನು ನಡೆಸುವುದು ಬೇಡ ಬಂದು ಬಿಡಿ ಎಂಬುದಾಗಿಯೂ ಹೇಳಬಹುದು.

ಶ್ರೀ ಬಿ. ವಿ. ಕಕ್ಕಿಲಾಯ.—ಜನತಾ ಪಕ್ಷದ ಸರ್ಕಾರ ಅಧಿಕಾರಕ್ಕೆ ಬರಲು ಜನತೆ ಯಾವ ರೀತಿಯ ಆಶೆ ಆಕಾಂಕ್ಷೆಗಳನ್ನು ಇಟ್ಟುಕೊಂಡು ಆರಿಸಿ ಕಳುಹಿಸಿದ್ದಾರೋ, ಅಂತಹವರನ್ನು ಪುನಃ ಜನತೆ ವಾಪಸ್ಸು ಕರೆಸಿಕೊಳ್ಳುವುದರಲ್ಲಿ ಯಾವ ತಪ್ಪು ಸಹ ಇಲ್ಲ. ಯಾರೇ ಆಗಲಿ ಪಾರ್ಲಿಮೆಂಟಿಗೆ ಹೋದ ಮೇಲೆ ಅವರು ಕೊಟ್ಟ ವಾಗ್ದಾನದಂತೆ ಯಾವಾಗ ನಡೆಯುವುದಿಲ್ಲವೋ ಅಂತಹವರನ್ನು ವಾಪಸ್ಸು ಕರೆಸಿಕೊಳ್ಳುವುದಕ್ಕೆ ತಕ್ಕ ಹಾಗೆ ಚುನಾವಣಾ ವಿಧಿಯನ್ನು ಬದಲಾವಣೆ ಮಾಡಬೇಕು. ಸಣ್ಣ ಸಣ್ಣ ಪಕ್ಷಕ್ಕೂ ಕೂಡ ಸಂಸತ್ತಿನಲ್ಲಿ ಪ್ರತಿನಿಧಿಗಳು ಇರಬೇಕೆಂಬುದೇ ಜನತೆಯ ವಿಶ್ವಾಸ. ನನ್ನನ್ನೇ ಉದಾಹರಣೆಗೆ ಇಟ್ಟುಕೊಂಡು ಹೇಳುವೆ, ಕಳೆದ ರಾಜ್ಯ ವಿಧಾನ ಸಭೆ ಚುನಾವಣೆಯಲ್ಲಿ ನನಗೆ ಎರಡೂವರೆ ಪಟ್ಟು ಮತಗಳು ಹೆಚ್ಚಿಗೆ ಸಿಕ್ಕಿದುವು. ಕೇವಲ 8 ಸಾವಿರ ಮತ ಸಿಕ್ಕಿದವರು ನನ್ನನ್ನು ಘೇರಾವೊ ಮಾಡಿ ಅಸೆಂಬ್ಲಿಗೆ ಹೋಗಬಾರದು, ರಾಜೀನಾಮೆ ಕೊಡಬೇಕು ಎಂದು ಪ್ರಶ್ನೆ ಮಾಡಿದರು. ಘಟನಾ ಬದ್ಧವಾದ ಪ್ರಜಾಪ್ರಭುತ್ವದಲ್ಲಿ ಸರಿಯಾದ ವ್ಯವಸ್ಥೆ ಇದ್ದು ನನ್ನ ಮೇಲೆ ಏನಾದರೂ ಅವಿಶ್ವಾಸವನ್ನು ವ್ಯಕ್ತಪಡಿಸಿದರೆ ನಾನೂ ಸಹ ಕೂಡಲೇ ರಾಜೀನಾಮೆ ಕೊಡಬೇಕಾದುದು ಸಹಜ. ಆಧಿಲ್ಲದೇ ಬಲತ್ಕಾರದಿಂದ ಆಡಳಿತದಲ್ಲಿ ಯಾವ ಪಕ್ಷದ ಸರ್ಕಾರ ಇರಲಿ ಅವರನ್ನು ಸರ್ಕಾರ ಬದಲು ಮಾಡುವುದಕ್ಕೆ ಆಗುವುದಿಲ್ಲ. ಒಂದು ವೇಳೆ ಆ ರೀತಿ ಬದಲಾವಣೆಯಾದರೆ ಆ ಸರ್ಕಾರವೂ ಸಹ ಹೆಚ್ಚು ಕಾಲ ಬಾಳುವುದಕ್ಕೆ ಆಗುವುದಿಲ್ಲ. ಅವರನ್ನೂ ಸಹ

ಜನತೆ ಪುನಃ ವಾಪಸ್ಸು ಕರೆಸಿಕೊಳ್ಳಬೇಕಾಗುತ್ತದೆ ಇವತ್ತಿನ ದಿವಸ ಅಲ್ಲಿರುವವರು—ಇಲ್ಲಿರುವವರೆಲ್ಲರೂ ಈ ದೇಶದ ಪ್ರಭುತ್ವದಲ್ಲಿ ಭಾಗಿಗಳಾಗಿದ್ದೇವೆ. ಇಷ್ಟು ದಿವಸಗಳವರೆಗೂ ಆಡಳಿತ ನಡೆಸಿದ್ದಂತಹ ಕಾಂಗ್ರೆಸ್ ಪಕ್ಷ ಇವತ್ತು ಕೇಂದ್ರ ಸರ್ಕಾರದಲ್ಲಿ ವಿರೋಧಪಕ್ಷವಾಗಿದೆ. ಅಂತಹ ಪಕ್ಷದಲ್ಲಿ ನನ್ನ ಪಕ್ಷವೂ ಕೂಡ ಭಾಗಿಯಾಗಿದೆ. ತ್ರಿಪುರಾದಲ್ಲಿ ಮಾರ್ಕಿಸ್ಟ್ ಪಕ್ಷ ಎಂಬುದು ಆಳುವ ಒಂದು ಪಕ್ಷ. ಅದ್ದರಿಂದ ಎಲ್ಲರೂ ಇಂತಹ ಸಂದರ್ಭದಲ್ಲಿ ತಂತಮ್ಮ ಶಕ್ತಿಯನ್ನು ಹೆಚ್ಚಿಗೆ ಉಪಯೋಗ ಮಾಡಬೇಕು. ಈ ದೇಶದಲ್ಲಿ ಪ್ರಜಾಪ್ರಭುತ್ವ ತತ್ವದ ಪ್ರಕಾರ ಜನತೆಗೆ ಕೊಟ್ಟ ಆಶ್ವಾಸನೆಗಳನ್ನು ಈಡೇರಿಸುವುದರಲ್ಲಿ ಎಲ್ಲರೂ ಸಹಕಾರಿಯಾಗಬೇಕು. ತಪ್ಪುಗಳು ಇರುವುದನ್ನು ತಿದ್ದುವುದಕ್ಕೆ ಎಲ್ಲರೂ ಸರಿಯಾದ ಮಾರ್ಗದಲ್ಲಿ ನಡೆಯಬೇಕು. ಹಿಂದೆ ವಿಷ್ಣುವು ವಾಮನಾವತಾರವನ್ನು ತಾಳಿ ಬಲಿಚಕ್ರವರ್ತಿ ಎಂಬ ಭಕ್ತನನ್ನು ಪಾತಾಳಕ್ಕೆ ತಳ್ಳಿದ ರೀತಿ ನಮ್ಮ ದೇಶದಲ್ಲಿ ಬರಬಾರದು. ಆ ಅವತಾರ ಅಲ್ಲಿಗೇ ನಿಲ್ಲಲಿ ಎಂಬುದಾಗಿ ತಮ್ಮಲ್ಲಿ ಪ್ರಾರ್ಥನೆ. ಈಗಲೇ ನಾಯಕರಾದ ಮಾನ್ಯ ಶ್ರೀ ಜಯಪ್ರಕಾಶ್ ನಾರಾಯಣ್ ಅವರು ಹೇಳಿದ್ದನ್ನು ತಾವು ಈ ದಿನದ ಬೆಳಗಿನ ಪತ್ರಿಕೆಯಲ್ಲಿ ನೋಡಿರಬೇಕು. ಅವರು ಹೇಳಿರುವ ಮಾತನ್ನು ನೀವು ನೋಡಬೇಕು. ಅಸೆಂಬ್ಲಿಗೆ ಚುನಾವಣೆಗಳನ್ನು ನಡೆಸಬೇಕೆಂದು ಹೇಳಿದರೆ ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಚುನಾವಣೆ ಏನೋ ನಡೆಯಲೇ ಬೇಕು. ಅದನ್ನು 6 ತಿಂಗಳೊಳಗೆ ನಡೆಯುವುದೂ ಬೇಡ, ಇವತ್ತೇ ನಡೆಸಲಿ. ಕೇಂದ್ರದಲ್ಲಿ ಒಂದು ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೆ ಅದೇ ರೀತಿ ಎಲ್ಲಾ ರಾಜ್ಯ ಸರ್ಕಾರಗಳೂ ರಾಜೀನಾಮೆ ಕೊಟ್ಟು ಅದೇ ಪಕ್ಷದ ಸರ್ಕಾರ ಎಲ್ಲಾ ಕಡೆಯೂ ಅಧಿಕಾರಕ್ಕೆ ಬರುವ ಪರಿಸ್ಥಿತಿ ನಮ್ಮ ದೇಶದಲ್ಲಿಯೂ ನಿರ್ಮಾಣವಾಗಬೇಕೆಂದು ಅವರು ಹೇಳಿದ್ದಾರೆ. ಆ ಮಾತು ಬಹಳ ಅಪಾಯಕಾರಿಯಾದ ಮಾತು ಎಂದು ನಾನು ಹೇಳುತ್ತೇನೆ. ಆದರೆ ಭಾರತ ದೇಶದಂಥ ಇಂತಹ ಒಂದು ದೊಡ್ಡ ದೇಶದಲ್ಲಿ ಹಲವು ಸಂಸ್ಕೃತಿಗಳೂ ಹಲವು ತರಹ ಜನಜೀವನ ಇದೆ. ಅದು ಫೆಡರಲ್ ಸ್ಟ್ರಕ್ಚರ್‌ನಂತೆ ನಮ್ಮ ದೇಶದಲ್ಲಿ ಸ್ವಾಯತ್ತತೆಯ ಅಧಿಕಾರ ಪಡೆದಿದೆ. ಅದರ ಪ್ರಕಾರ ಈಗ ನಾವು ನಮ್ಮ ದೇಶದ ಭದ್ರತೆಗೆ ಆಧಾರವಾಗಿರುವಂತಹ ತತ್ವವನ್ನು ಅನುಸರಿಸುವ ಪ್ರಯತ್ನವನ್ನು ಮಾಡಬೇಕು. ಕೆಲವರು ಆ ತತ್ವವನ್ನು ಪ್ರತಿಪಾದನೆ ಮಾಡಲಿಕ್ಕೆ ಹೊರಟರೆ ಅದು ಬಹಳ ಅಪಾಯಕಾರಿಯಂತಹ ದಿಕ್ಕಿಗೆ ಹೋಗುತ್ತದೆಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದ್ದರಿಂದ ಈಗ ನಾನು ನಿಮ್ಮ ಮಾತನ್ನು ಒಪ್ಪಲಿಕ್ಕೆ ಸಾಧ್ಯವಿಲ್ಲ. ಕೇಂದ್ರದಲ್ಲಿ ಯಾರೇ ಅಧಿಕಾರದಲ್ಲಿರಲಿ, ಅವರು ಯಾರೇ ಆಗಿರಲಿ ದೇಶದ ಜನರು ಕೊಡತಕ್ಕ ತೀರ್ಪಿಗೆ ಮನ್ನಣೆ ಕೊಡಬೇಕು. ಆ ಅವಧಿ ಮುಗಿಯುವ ತನಕ ಕಾದು ನೋಡಬೇಕು. ಕೇಂದ್ರದಲ್ಲಿ ಯಾವುದೇ ಒಂದು ಪಕ್ಷ ಅಧಿಕಾರಕ್ಕೆ ಬಂದರೆ ಕೂಡಲೇ ಎಲ್ಲಾ ರಾಜ್ಯಗಳಲ್ಲಿ ಅದೇ ರೀತಿಯ ಪಕ್ಷವು ಅಧಿಕಾರಕ್ಕೆ ಬರಬೇಕು ಎಂದು ಹೇಳಿದರೆ ಅದಕ್ಕಿಂತಲೂ ಭಯಂಕರ ಪರಿಸ್ಥಿತಿ ಮತ್ತೊಂದಿಲ್ಲವೆಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಶ್ರೀ ಬಿ. ವಿ. ಕಕ್ಕಿಲಾಯರವರ ಪ್ರಶ್ನೆಯಲ್ಲಿ ಅಡಗಿರತಕ್ಕ ಹಿನ್ನಲೆ ಏನೆಂಬುದನ್ನು ತಾವು ಆಲೋಚನೆ ಮಾಡಬೇಕು. ಬಹುಶಃ 1971ನೇ ಇಸವಿಯಲ್ಲಿ ಮೊದಲಬಾರಿಗೆ ಲೋಕಸಭೆ ಚುನಾವಣೆ ನಡೆದಾಗ ಒಂದು ಕ್ರಮವನ್ನು ಅನುಸರಿಸಿದರು. ಆ ಕ್ರಮದಿಂದ ಶಾಸನ ಸಭೆಗೆ ಚುನಾವಣೆ ನಡೆದಾಗ ವಿರೋಧಪಕ್ಷಗಳಿಗೆ ಎಷ್ಟು ಕಷ್ಟವಾಗಿತ್ತು ಎಂಬುದು ನಮ್ಮ ಅನುಭವಕ್ಕೂ ಬಂದಿದೆ, ತಮ್ಮ ಅನುಭವಕ್ಕೂ ಬಂದಿದೆ. ಇವತ್ತು ಇರತಕ್ಕ ಸ್ವಾಭಾವಿಕವಾದಂತಹ ಪರಿಸ್ಥಿತಿಯ ಮಾತು ಬೇರೆ ಅದನ್ನು ಈಗ ಕೈಬಿಟ್ಟು ಹೊಸ ಪದ್ಧತಿಯನ್ನು ಅನುಸರಿಸಿಕೊಂಡು ಹೋಗುವ ಸನ್ನಿವೇಶ ಈಗ ನಡೆಯುತ್ತಿದೆ. ಆ ಒಂದು ಹಿನ್ನಲೆಯನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರದಲ್ಲಿ ಈಗಾಗಲೇ ಒಂದು ಪಕ್ಷ ಚುನಾವಣೆಯಲ್ಲಿ ಗೆದ್ದು ಬಂದಿದೆ. ಅದಕ್ಕನುಗುಣವಾಗಿ ಇವತ್ತು ಚುನಾವಣೆ ನಡೆಯುವುದು ನ್ಯಾಯ ಮಾರ್ಗವೆಂದು ಕಾಣುತ್ತದೆ. ಇದರ ಹಿನ್ನಲೆಯನ್ನು ನೋಡಿದರೆ ತುರ್ತು ಪರಿಸ್ಥಿತಿಯನ್ನು ಮುಂದೆ ರದ್ದು ಮಾಡುವ ಸಲುವಾಗಿ ನಮ್ಮ ಅವಧಿಯನ್ನು ಹೆಚ್ಚು ಮಾಡಿರುವುದೂ ಉಂಟು. ಅದನ್ನೂ ಸಹ ಈಗ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಹಿಂದೆ ರಾಜ್ಯಗಳ ವಿಧಾನ ಸಭೆಗಳ ಅವಧಿ ಮತ್ತು ಪಾರ್ಲಿಮೆಂಟ್ ಅವಧಿಯನ್ನು ವಿಸ್ತರಣೆ ಮಾಡಿದರು. ಆ ರೀತಿ ಮಾಡಿದ್ದನ್ನು ನಮ್ಮ ಪಕ್ಷ ವಿರೋಧ ಮಾಡಿದೆ. 5 ವರ್ಷಗಳೇ ಇರಬೇಕೆಂದು ಹೇಳಿತ್ತು. ಆ ಅವಧಿಯನ್ನು ಮುಂದೆ ಜಾಸ್ತಿ ಮಾಡಿ

ದರು. ಅದರ ಬಗ್ಗೆ ಕಾನೂನು ಆಗಿದೆ, ಅದಕ್ಕೆ ಮುಂದೆ ತಿದ್ದುಪಡಿ ಮಾಡುವಾಗ ನೋಡೋಣ. ಇನ್ನು ಮೊನ್ನೆ ನಡೆದಂತಹ ಚುನಾವಣೆಯ ವಿಚಾರ. ಕೇರಳದಲ್ಲಿ ಮಾತ್ರ ಶಾಸನ ಸಭೆಗೆ ಹಾಗೂ ಪಾರ್ಲಿಮೆಂಟ್‌ಗೆ ಜೊತೆ ಜೊತೆಯಲ್ಲಿ ಚುನಾವಣೆ ನಡೆಯಿತು ಅಲ್ಲಿನ ರಾಜ್ಯ ಸರ್ಕಾರ ಮಾಡಿರುವ ಒಳ್ಳೆಯ ಕೆಲಸಗಳನ್ನು ನೋಡಿ ಆ ರಾಜ್ಯದಲ್ಲಿ ಅತ್ಯಂತ ಬಹುಸಂಖ್ಯೆಯಲ್ಲಿ ಜನತೆ ಸಂಯುಕ್ತ ರಂಗವೇ ಚುನಾವಣೆಯಲ್ಲಿ ಜಯಗಳಿಸುವಂತಾಗಿ ಮತ್ತೆ ಅಧಿಕಾರ ವಹಿಸಿಕೊಳ್ಳುವ ವ್ಯವಸ್ಥೆಯಾಯಿತು. ಸಂಯುಕ್ತ ರಂಗದ ಎಲ್ಲ ಅಭ್ಯರ್ಥಿಗಳೂ ಅಲ್ಲಿನ ಎಲ್ಲಾ ಕ್ಷೇತ್ರಗಳ ಚುನಾವಣೆಯಲ್ಲಿ ಗೆದ್ದು ಬಂದಿದ್ದಾರೆ. ಇವತ್ತು ರಾಜ್ಯ ಶಾಸನ ಸಭೆಗಳಿಗೂ ಲೋಕಸಭೆಯ ಚುನಾವಣೆಯ ಜೊತೆಯಲ್ಲಿ ಚುನಾವಣೆ ನಡೆದಿದ್ದರೆ ಇಷ್ಟು ದೊಡ್ಡ ಒಂದು ಅನಾಹುತ ಕೇಂದ್ರದಲ್ಲಿ ಆಗುತ್ತಿರಲಿಲ್ಲ, ಈ ಒಂದು ದೊಡ್ಡ ಸೋಲು ಕಾಂಗ್ರೆಸ್ಸಿಗೆ ಆಗುತ್ತಿರಲಿಲ್ಲವೆಂದು ನನಗನ್ನಿಸುತ್ತದೆ. ಈ ಚುನಾವಣೆಗಳು ಜೊತೆಜೊತೆಯಲ್ಲಿ ನಡೆಯುವುದಕ್ಕೆ ಅಡ್ಡಿಯಿಲ್ಲ. ಆದರೆ ಕೇಂದ್ರದಲ್ಲಿ ಯಾವ ಪಕ್ಷ ಆಡಳಿತ ನಡೆಸುತ್ತದೆ ಅದೇ ಪಕ್ಷದ ಸರ್ಕಾರಗಳು ರಾಜ್ಯಗಳಲ್ಲಿಯೂ ಇರಬೇಕೆಂದು ಹೇಳುವುದು ಸರಿಯಲ್ಲವೆಂದು ನನ್ನ ಭಾವನೆ. ಹಿಂದೆ ಕೇರಳ ಸರ್ಕಾರವನ್ನು ಉರುಳಿಸಲಿಲ್ಲವೇ? ನನ್ನ ಪಕ್ಷದ ಸದಸ್ಯರು ಮತ್ತು ಕಾರ್ಯದರ್ಶಿಯವರು ಹೇಳಿದರು ಸರ್ಕಾರದ ವಿಮೋಚನ ಸಮರ ಕೇಂದ್ರ ಸರ್ಕಾರದವರು ನಡೆಸಿದ ಕಾರ್ಯಭಾರವು, ಕೇಂದ್ರ ಸರ್ಕಾರಕ್ಕೂ ವಿಮೋಚನ ಸಮರ ನಡೆದಿದ್ದನ್ನು ನಾನು ನೆನಪು ಇಟ್ಟುಕೊಂಡಿದ್ದೇನೆ. ಪಂಡಿತ್ ಜವಹಾರ್ ಲಾಲ್ ನೆಹರೂ ರವರು ಕೇವಲ ಕಾರಣ ಪುರುಷರಷ್ಟೆ ಆಗಿದ್ದರೂ, ಅದರ ಚಳುವಳಿ ನಡೆಸಿದವರು ಯಾರು ಎಂದು ಹೇಳಿದ್ದೇನೆ. ಅದನ್ನು ತಾವು ಯೋಚನೆ ಮಾಡಿ. ಸಾಕಷ್ಟು ಬಿರುಕು ನಮ್ಮ ಸರ್ಕಾರದಲ್ಲಿ ಇದ್ದದ್ದರಿಂದ ನಮ್ಮ ಸರ್ಕಾರ ಬಿದ್ದು ಹೋಯಿತು. ಅದನ್ನು ಮುಚ್ಚಲಿಕ್ಕೆ ಸ್ಥಿರವಾದ ಸರ್ಕಾರ ಬರಬೇಕು. ಅಂತಹ ದಿವಸ ಒಂದು ದಿವಸವಲ್ಲ ಒಂದು ದಿವಸ ಸಾಧ್ಯವಾಗುತ್ತದೆ ಇವತ್ತಲ್ಲ ನಾಳೆ ಬರುತ್ತದೆ. ಇನ್ನು ಕರುಣಾನಿಧಿಯವರ ಸರ್ಕಾರದ ಅವಧಿ ಮುಗಿದು ಹೋಗಿತ್ತು. ಅವರ ಮೇಲೆ ಆರೋಪ ಇತ್ತು. ಆದ್ದರಿಂದ ಅವರ ಸರ್ಕಾರ ಹೋಯಿತು ಅಷ್ಟೆ.

ಶ್ರೀ ಕೋಣಂದೂರು ಲಿಂಗಪ್ಪ.—ಅವರ ಅವಧಿ ಮುಗಿಯಲು ಇನ್ನು ೩ ತಿಂಗಳು ಇತ್ತು.

ಶ್ರೀ ಬಿ. ವಿ. ಕಕ್ಕಿಲಾಯ.—ಇನ್ನು ತುರ್ತು ಪರಿಸ್ಥಿತಿಯಲ್ಲಿ ಮಾತ್ರ ಸರ್ಕಾರದವರು ಮಾಡಬಾರದ್ದನ್ನು ಮಾಡಿದ್ದಾರೆ ಅದನ್ನು ಇಲ್ಲವೆಂದು ಹೇಳುವುದಕ್ಕೆ ತಯಾರಿಲ್ಲ. ಈಗ ನಾವು ಅದನ್ನು ತೊಡೆಯಲಿಕ್ಕೆ ಹೋಗಬೇಕೇ ಹೊರತು, ಅದರ ಲಾಭ ಪಡೆದ ತಾವೂ ಕೂಡ ಅದೇ ರೀತಿ ಮಾಡಬಾರದು ಎಂದು ಹೇಳುತ್ತೇನೆ. ಇನ್ನು ಕರ್ನಾಟಕ ಸರ್ಕಾರದ ಬಗ್ಗೆ ಏನು 99 ಆರೋಪಗಳು ಇವೆ ಅವನ್ನು ವಿಸ್ತರಿಸಿ 1947 ರಿಂದ 1977ರ ವರೆಗೆ ಈ 30 ವರ್ಷಗಳ ಅವಧಿಯಲ್ಲಿ ವಿಚಾರಣೆ ನಡೆಸಿ ಕೆಲವು ದಿವಸಗಳ ಹಳೆ ಕಾಲದ ಕೊಳೆಯನ್ನು ತೊಳೆಯುವುದಕ್ಕೆ ಇನ್ನು ಮೂವತ್ತು ವರ್ಷಗಳು ಹೋಗಬೇಕು. ವಿಚಾರಣೆ ನಡೆಸುವುದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಆದರೆ ರಾಜ್ಯ ಶಾಸನ ಸಭೆಗಳ ಚುನಾವಣೆ ನಡೆಸಬೇಕು. ಆದರೆ ವಿಚಾರಣೆಯನ್ನು ಕೂಡಲೇ ನಡೆಸಬೇಕು ಎಂದು ಹೇಳಿದರೆ ಅದು ಸರಿ ಹೋಗುವುದಿಲ್ಲ. ಚುನಾವಣೆಗೆ ಮೊದಲು ನಮ್ಮ ಬೆಸ್ತರಿಗೆ ಮೀನಿನ ಬರಗಾಲ ಬಂತು ಅವರಿಗೆ ಸರ್ಕಾರದವರು ಸ್ವಲ್ಪ ಹಣ ಸಹಾಯ ಮಾಡಿದರು. ಆದರೆ ಅದನ್ನು ಚುನಾವಣೆಗೋಸ್ಕರ ಕೊಡಲಾಯಿತು ಎಂದರೆ ಹೇಗೆ? ಅವರನ್ನು ಉಪವಾಸ ಬಿಡಲಿಕ್ಕೆ ಸಾಧ್ಯವೇ? ರಾಜ್ಯ ಸರ್ಕಾರ ಒಂದು ಏನು ಸವಲತ್ತನ್ನು ಕೊಟ್ಟರೆ, ಮತದಾರರಿಗೆ ಲಂಚ ಕೊಟ್ಟರೆ? ಇನ್ನು ಹಾವನೂರ್ ರವರ ವರದಿಯನ್ನು ಮೊದಲೇ ಜಾರಿಗೆ ಕೊಟ್ಟರೂ ಇದನ್ನು ಕೂಡ ಮತದಾರರನ್ನು ಒಲಿಸಿಕೊಳ್ಳಲು ಮಾಡಿದ್ದಾರೆಂದರೆ ಹೇಗೆ? ಚುನಾವಣೆಗೆ ಮೊದಲು ನಾಲ್ಕು ದಿವಸಗಳ ಮುಂಚೆ ಕಾಂಗ್ರೆಸ್ ಪಕ್ಷದವರು ಮತ್ತು ಜನತಾ ಪಕ್ಷದವರು ಒಬ್ಬರ ಮೇಲೆ ಮತ್ತೊಬ್ಬರು ಈ ರೀತಿಯ ವಾದದ ಖಡ್ಗವನ್ನು ಇಟ್ಟುಕೊಂಡು ಇಂಥ ಪರಿಸ್ಥಿತಿಯಲ್ಲಿ ಚುನಾವಣೆ ನಡೆಸಿರುತ್ತಾರೆ. ಇದಕ್ಕೂ ಮೊದಲು ಏನು ನಡೆದಿದೆ ಅದರ ಮೇಲೆ ವಿಚಾರಣೆ ನಡೆದು ತೀರ್ಪು ಕೊಡಲಿ. ವಿಚಾರಣೆಯನ್ನು ನಡೆಸುವ ವಿಚಾರದಲ್ಲಿ ನನ್ನ ಅಡ್ಡಿ ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಕರುಣಾನಿಧಿಯವರ ಮೇಲೂ ವಿಚಾರಣೆ ನಡೆಸಿ, ಆಮೇಲೆ ಚುನಾವಣೆಗಳನ್ನು ಏತಕೆ ನಡೆಸಲಿಲ್ಲ?

ಶ್ರೀ ಬಿ. ವಿ. ಕಕ್ಕಿಲಾಯ.— ಯಾರ ಮೇಲೆ ಬೇಕಾದರೂ ವಿಚಾರಣೆ ನಡೆಸಲಿ. ಇಂದಿರಾ ಗಾಂಧಿಯವರ ಸರ್ಕಾರ ಉರುಳಲಿ ಅವರ ಬಗ್ಗೆ ನಾನು ವಾದ ಮಾಡುತ್ತಿಲ್ಲ. ಪ್ರಜಾಪ್ರಭುತ್ವದ ಸಂಪ್ರದಾಯದ ಬಗ್ಗೆ ಮಾತನಾಡುತ್ತಿದ್ದೇನೆ ತೀರ್ಪು ಬರುವ ತನಕ ತಡೆದು ತೀರ್ಪು ಬಂದ ನಂತರ ಚುನಾವಣೆ ನಡಿಸಿ. ಅದು ಒಂದು ಸತ್‌ಸಂಪ್ರದಾಯವೆಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—(ವೇಮಗಲ್) ಧರ್ಮರಾಯರು ಎಂದು ಸರ್ಟಿಫಿಕೇಟ್ ಕೊಟ್ಟು ಬಿಡೋಣ?

ಶ್ರೀ ಬಿ. ವಿ. ಕಕ್ಕಿಲಾಯ.—ನಮ್ಮ ಸರ್ಟಿಫಿಕೇಟ್ ಮೇಲೆ ಜನರು ಇಲ್ಲ. ಜನರ ಸರ್ಟಿಫಿಕೇಟ್ ಮೇಲೆ ನಾವು ಇದ್ದೇವೆಂದು ಹೇಳುತ್ತೇನೆ ಇನ್ನು, ಒಂದೆರಡು ವಿಚಾರಗಳನ್ನು ಹೇಳಬೇಕಾಗಿದೆ. ಇವತ್ತು ರಾಜ್ಯಪಾಲರ ಭಾಷಣದಲ್ಲಿ ಹಲವಾರು ಕಾರ್ಯಗಳ ವಿವರಣೆಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಬೇರೆ ವಿಚಾರ ಮಾತನಾಡಿದ್ದಕ್ಕಾಗಿ ಕಾಲಾವಕಾಶವಿಲ್ಲದೆ ಇರುವುದರಿಂದ ಮುಂದೆ ಬಡ್ಜೆಟ್ ಮೇಲೆ ಮಾತನಾಡುವಾಗ ನಮ್ಮ ಅಭಿಪ್ರಾಯ ಹೇಳಬಹುದು. ಇನ್ನು ಕೆಲವು ಅಂಶಗಳನ್ನು ಹೇಳಬೇಕಾಗಿದೆ. ತುರ್ತು ಪರಿಸ್ಥಿತಿ ಬಂದ ಮೇಲೆ ಬೆಲೆಗಳು ಹತೋಟಿಗೆ ಬಂತು, ಮುಷ್ಕರ ಇಲ್ಲ, ಉತ್ಪಾದನೆ ಜಾಸ್ತಿಯಾಗಿದೆಯೆಂದು ಒಂದು ಚಿತ್ರವನ್ನು ಕೊಟ್ಟರು. ಇದರಲ್ಲೂ ಕೂಡ ಎಲ್ಲವನ್ನೂ ನಾನು ಒಪ್ಪುವುದಿಲ್ಲ. ಇದರಲ್ಲಿ ಬಹಳಷ್ಟು ಸತ್ಯಕ್ಕೆ ದೂರವಾದ ಮಾತುಗಳು ಇವೆ ನಮ್ಮ ದೇಶ 1975 ರಲ್ಲಿ ಬಜೆಟ್ ಮಂಡನೆ ಮಾಡುತ್ತಾ ಲೋಕಸಭೆಯಲ್ಲಿ ಅದರ ಜೊತೆಯಲ್ಲಿ ಕೊಟ್ಟಂತಹ ಫೈನಾನ್ಸಿಯಲ್ ರೆವ್ಯೂನಲ್ಲಿ 1974 ರಿಂದ 1975ರ ಫೆಬ್ರವರಿಗೆ ಬೆಲೆಗಳು ಸೇಕಡಾ ಹೋಲ್ ಸೇಲ್‌ನಲ್ಲಿ 7.4 ಪರ್ಸೆಂಟ್ ಇಳಿಯುತ್ತಾ ಇವೆ ಎಂದು ಹೇಳಿ, 1976ರ ಬಡ್ಜೆಟ್‌ನಲ್ಲಿ ಬಡ್ಜೆಟ್ ಮಂಡಿಸುವಾಗ ತುರ್ತು ಪರಿಸ್ಥಿತಿಯಿಂದ ಬೆಲೆಗಳು ವೇಗದಲ್ಲಿ ಸೇಕಡಾ 5.6ಕ್ಕೆ ಬಂದಿವೆ ಎಂದು ಹೇಳಿದ್ದಾರೆ. ಇವತ್ತಿನ ಸ್ಥಿತಿಗಳ ಬಗ್ಗೆ ಅಂಕಿಸಂಖ್ಯೆಗಳನ್ನು ನಾನು ಕೊಡಬಲ್ಲೆ.

ತುರ್ತು ಪರಿಸ್ಥಿತಿ ಕೊನೇ ಘಟ್ಟಕ್ಕೆ ಬರುವಾಗ ಬೆಲೆಗಳು ಇಳಿದಿವೆ ಎಂದು ಹೇಳುತ್ತಿದ್ದಾರೆ. ಆದರೆ 1976 ಮಾರ್ಚಿ 20ರ ಹೋಲ್ ಸೇಲ್ ಇಂಡೆಕ್ಸ್‌ನಲ್ಲಿ 282.4 ಇತ್ತು ಅದು ಸೆಪ್ಟೆಂಬರ್‌ನಲ್ಲಿ 315.7 ಆಗಿ 12 ಪರ್ಸೆಂಟ್ ಜಾಸ್ತಿಯಾಯಿತು ಮತ್ತೆ ಡಿಸೆಂಬರ್ ಬರುವಷ್ಟು ಹೊತ್ತಿಗೆ 115.8ಆಗಿ 01 ಜಾಸ್ತಿಯಾಯಿತು. ಹೀಗೆ ಒಮ್ಮೆ ಬೆಲೆಗಳು ಇಳಿದಿದ್ದು ನಿಜ. ತುರ್ತುಪರಿಸ್ಥಿತಿ ಮೊದಲು ಬೆಲೆಗಳು ಇಳಿಯುವುದಕ್ಕೆ ಮೊದಲು ಮಾಡಿ ಪುನ: ಮೊದಲಿದ್ದ ಬೆಲೆಗಿಂತ ಜಾಸ್ತಿ ಏರಿದವು ಎನ್ನುವುದನ್ನು ತಾವು ಗಮನಿಸಬೇಕು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ತುರ್ತು ಪರಿಸ್ಥಿತಿಯ ಕಾಲದಲ್ಲಿ ಪ್ರತಿಭಟನೆ, ಸತ್ಯಾಗ್ರಹಗಳು ಇಲ್ಲದೇ ಇದ್ದುದರಿಂದ ಹೇಳುವವರು ಕೇಳುವವರು ಯಾರು ಇಲ್ಲದೇ ಇದ್ದುದರಿಂದ ಅನೇಕ ತರಹದ ಸವಲತ್ತುಗಳನ್ನು ಯಾರಿಗೆ ಕೊಡಬಾರದಾಗಿತ್ತೋ ಅಂಥವರಿಗೆ ಸವಲತ್ತುಗಳನ್ನು ಕೊಡುತ್ತಾ ಬಂದಿದ್ದಾರೆ. ಕೂಲಿ ಕಡಿತ ಮಾಡಿದರೆ, ಕಡ್ಡಾಯ ಠೇವಣಿ ಮಾಡಿದರೆ, ಬೋನಸ್ ಕೊಡದೇ ಇದ್ದರೆ ಎಲ್ಲಾ ಬೆಲೆಗಳು ಇಳಿಯುತ್ತದೆ ಎನ್ನುವ ತಪ್ಪು ಕಲ್ಪನೆಯಿಂದ ಕೆಲಸಗಾರರ ಹೊಟ್ಟೆಯ ಮೇಲೆ ಹೊಡೆದು, ಅವನು ತಿನ್ನುವುದನ್ನು ಕಡಿಮೆ ಮಾಡಿದರು. ಯಾರಿಗೆ ಮೋಟಕು ಮಾಡಬೇಕಾಗಿತ್ತೋ ಅವರಿಗೆ ಮೋಟಕು ಮಾಡಲಿಲ್ಲ, ಯಾರು ಬೆಲೆ ಏರಿಕೆಗೆ ಕಾರಣಕರ್ತರೋ ಅಂಥವರಿಗೆ ಇನ್ನೂ ಹೆಚ್ಚಿನ ಸವಲತ್ತುಗಳನ್ನು ಕೊಟ್ಟರು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಯಾರಿಗೆ ತುರ್ತು ಪರಿಸ್ಥಿತಿಯಲ್ಲಿ ಅನುಕೂಲ ಒದಗಿಸಬೇಕಾಗಿತ್ತೋ, ಯಾರಿಗೆ ರಕ್ಷಣೆ ಕೊಡಬೇಕಾಗಿತ್ತೋ ಅಂಥವರಿಗೆ ಕೊಡದೇ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ, ಅದು ಶ್ರೀಮತಿ ಇಂದಿರಾಗಾಂಧಿಯವರ ಕಾಲದಲ್ಲಿ ಕೊಟ್ಟಿದ್ದಾರೆ. ಇದಕ್ಕಿಂತ ಇನ್ನು ಒಂದು ಹೆಚ್ಚಿನ ವಿಶೇಷ ಸಂಗತಿ ಎಂದರೆ ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾದವರೇ 1976-77ರ ರಿಪೋರ್ಟ್‌ನಲ್ಲಿ ಒಂದು ಮಾತನ್ನು ಹೇಳಿದ್ದಾರೆ, ಆದರಲ್ಲಿರತಕ್ಕಂಥ ಒಂದೇ ಒಂದು ವಾಕ್ಯ ಹೇಳಬೇಕು ಎಂದರೆ ''ಸಟ್ಟಾ ವ್ಯಾಪಾರಗಾರರ ಒಂದು ಕೈವಾಡದಿಂದ ಬೆಲೆ ಏರಿಕೆ ಮತ್ತಷ್ಟು ಉಲ್ಬಣಗೊಳ್ಳುತ್ತಿದೆ'' ತುರ್ತು ಪರಿಸ್ಥಿತಿಯ ಮೊದಲು ಬೆಲೆಗಳನ್ನು ಇಳಿಸುವುದಕ್ಕೆ ಪ್ರಯತ್ನ ಮಾಡಿದರು. ಇನ್ನೊಂದು ಅಂಶ ತಮಗೆ ಹೇಳಬೇಕು ಎಂದರೆ 20 ಅಂಶ ಕಾರ್ಯಕ್ರಮದಿಂದ ಹಳ್ಳಿಯಲ್ಲಿರುವ ರೈತರು ಯಾರಿದ್ದಾರೆ, ಮತ್ತೆ ಬಡತನದ ರೇಖೆಗಿಂತ ಕೆಳಗಿರತಕ್ಕಂಥ 68 ಪರ್ಸೆಂಟ್ ಜನರು ಯಾರಿದ್ದಾರೆ ಅವರಿಗೆ ಸ್ವಲ್ಪ ಸವಲತ್ತುಗಳನ್ನು ಕಲ್ಪಿಸಿ ಕೊಟ್ಟಿದೆ

ನಿಜ. ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯನ್ನು ಯಾರು ಹತೋಟಿಯಲ್ಲಿಟ್ಟುಕೊಂಡಿದ್ದಾರೆ, ಅಂಥವರೇ ಇವತ್ತು ತುರ್ತು ಪರಿಸ್ಥಿತಿಯ ಕಾಲದಲ್ಲಿ ಹೆಚ್ಚಿನ ಸವಲತ್ತುಗಳನ್ನು ಪಡೆದಿದ್ದಾರೆ. ಇವತ್ತು ತಮಗೆ ಟಾಟಾ ಬಿರ್ಲಾ ರವರ ಕಂಪನಿಯವರ ಲೆಕ್ಕವನ್ನು ಕೊಡಬೇಕು ಎಂದರೆ ಹಿಂದೆ ಟಾಟಾ ರವರು ಮುಂದೆ ಇದ್ದರು ಆದರೆ ಇಂದು ಬಿರ್ಲಾರವರು ಅವರಿಗಿಂತ ಮುಂದೆ ಹೋಗಿದ್ದಾರೆ ತುರ್ತು ಪರಿಸ್ಥಿತಿಗಿಂತ ಹಿಂದೆ 641 ಕೋಟಿ ಬಂಡವಾಳವಿದ್ದಂಥ ಬಿರ್ಲಾ ಇವತ್ತು 1, 164 ಕೋಟಿ ರೂಪಾಯಿಗಳ ಬಂಡವಾಳ ಸ್ವತ್ತಿನ ಮಾಲೀಕ, ಯಜಮಾನನಾಗಿದ್ದಾನೆ. ಅದೇ ಟಾಟಾ ಕಂಪನಿ ಯಜಮಾನನ ಬಂಡವಾಳ 763 ಕೋಟಿ ಏನಿತ್ತು ಅದು ಈಗ 968 ಕೋಟಿ ಬಂಡವಾಳದಷ್ಟು ಆಗಿದೆ. ಇದರಲ್ಲಿ ಒಂದೆರಡು ಕೋಟಿ ಹೆಚ್ಚು ಕಡಿಮೆ ಇರಬಹುದು. ಆ ಅಂಕಿ ಸಂಖ್ಯೆಗಳು ನನ್ನ ಹತ್ತಿರವಿದೆ, ಆದರೆ ಅದು ಈಗ ಕೈಗೆ ಸಿಗುತ್ತಿಲ್ಲ ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಈ ದೇಶದ ಜನತೆ ಶ್ರೀಮತಿ ಇಂದಿರಾಗಾಂಧಿಯವರನ್ನು ಕೆಳಕ್ಕೆ ಇಳಿಸಿದ್ದಾರೆ. ಇದು ಅವರ ಶಸ್ತ್ರ ಚಿಕಿತ್ಸೆ ಎಂದು ತಿಳಿದುಕೊಳ್ಳಿ, ಅದೇ 1971-72ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದರು ಅದನ್ನು ನಂಬಿ ಆಗ ಜನತೆ ಕಾಂಗ್ರೆಸ್ ಪಕ್ಷಕ್ಕೆ ಅತ್ಯಂತ ಹೆಚ್ಚಿನ ಬಹುಮತದಿಂದ ಆಯ್ಕೆ ಮಾಡಿದ್ದರು. ಆದರೆ ಅವರು ಇಟ್ಟಂಥ ಹೆಜ್ಜೆಯನ್ನು ಹಾಕಿಕೊಂಡಂಥ ಕಾರ್ಯಕ್ರಮವನ್ನು ಬಿಟ್ಟು ಒಂದೊಂದೇ ಹೆಜ್ಜೆ ಹಿಂದಕ್ಕೆ ಹೋಗಿದ್ದರಿಂದ ಚುನಾವಣೆಯ ಸಮಯದಲ್ಲಿ ಜನತೆ ಹೇಗೆ ಬುದ್ಧಿ ಕಲಿಸಬೇಕೋ ಹಾಗೆಯೇ ಬುದ್ಧಿಯನ್ನು ಕಲಿಸಿದ್ದಾರೆ. ಆದುದರಿಂಧ ಇಲ್ಲಿ ಉತ್ತರದ, ದಕ್ಷಿಣದ ಪ್ರದೇಶದ ಜನರ ಪ್ರಶ್ನೆಯಲ್ಲ, ಅಥವಾ ಜನತಾ ಪಕ್ಷದ ಅಥವಾ ಕಾಂಗ್ರೆಸ್ ಪಕ್ಷದ ಪ್ರಶ್ನೆಯಲ್ಲ ವಿದೇಶಾಂಗ ನೀತಿ ಮತ್ತು ನಮ್ಮ ದೇಶದ ಅಂತರಿಕ ನೀತಿಯನ್ನು ಗಮನಿಸಿ ನಮ್ಮ ದೇಶದ ಜನತೆ ಕೊಟ್ಟಂಥ ತೀರ್ಪು ಇದು ಎಂದು ಗಮನಿಸಬೇಕೆಂದು ನಾನುಹೇಳುತ್ತೇನೆ. ನಮ್ಮ ದೇಶದ ವಿದೇಶಾಂಗ ನೀತಿಯ ಬಗ್ಗೆ ನಮ್ಮ ಪ್ರಧಾನ ಮಂತ್ರಿಯವರಾದ ಶ್ರೀ ಮೊರಾರ್ಜಿ ದೇಸಾಯಿ'ರವರು ಚುನಾವಣೆಯ ಕಾಲದಲ್ಲಿ ಭಾರತ ಸೋವಿಯತ್ ಮೈತ್ರಿತ್ವದ ಬಗ್ಗೆ ಏನು ಹೇಳಿದರು. "It must be taken as automatically abrogated ; It will cease to exsit". ಅದು ಇರುವುದಿಲ್ಲ ಎಂದು ಹೇಳಿದರು. ಮಾನ್ಯ ಕೊಣಂದೂರು ಲಿಂಗಪ್ಪನವರಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ತಾವೆಲ್ಲಾ ಅರ್ಥ ಮಾಡಿಕೊಳ್ಳಬೇಕು ಈ ದೇಶದಲ್ಲಿ ಒಂದೊಂದು ಗಂಡಾಂತರ ಬಂದಾಗಲೆಲ್ಲಾ ಸೋವಿಯತ್ ರಷ್ಯಾದವರು ನಮ್ಮ ಸ್ನೇಹಿತರಾಗಿ ಬಂದು ಸಹಾಯ ಮಾಡಿದುದನ್ನು ಮರೆತುಬಿಡುತ್ತೀರಾ ? ಆ ರೀತಿ ತಾವು ಮರೆಯುವುದಾದರೆ ಈ ದೇಶದ ಸ್ಥಿತಿ ಏನಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಇವತ್ತು ನಮಗೆ ಸೋವಿಯತ್‌ನಿಂದ ನೈತಿಕ ಬಲ, ಬೆಂಬಲ ಬೇಕೇ ಬೇಕೆಂದು ಅವರಿಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ. ಕೆಲವೊಂದು ಸಮಯದಲ್ಲಿ ನಮ್ಮ ದೇಶದ ಮೇಲೆ ಸಾರ್ವಭೌಮ ಸಾಮ್ರಾಜ್ಯ ಶಕ್ತಿಗಳು ನಮ್ಮ ವಿರುದ್ಧ ದಿಕ್ಕಿನಲ್ಲಿ ಕೆಲಸ ಮಾಡಿ ನಮ್ಮ ಕುತ್ತಿಗೆಗೇ ಕೈ ಹಾಕುವುದಕ್ಕೆ ಹೊರಟಿದ್ದರು ಅಂಥ ಸಮಯದಲ್ಲಿ ಸೋವಿಯತ್‌ನವರು ನಮಗೆ ಸಹಾಯಕರಾಗಿ, ಬೆಂಬಲಿಗರಾಗಿ ನಿಜವಾದ ಸ್ನೇಹಿತರಾಗಿ ಸಹಾಯ ಮಾಡಿದರು. ಆದರೇ ಪಕ್ಕದ ನೆರೆಹೊರೆಯ ಯಾವ ದೇಶದವರೂ ನಮಗೆ ಬೆಂಬಲಿಗರಾಗಿ ನಿಲ್ಲಲಿಲ್ಲ ಎಂಬುದನ್ನು ತಾವು ಮರೆಯಬಾರದು.

ಶ್ರೀ ಕೊಣಂದೂರು ಲಿಂಗಪ್ಪ.—ನಮ್ಮ ಪ್ರಧಾನ ಮಂತ್ರಿಗಳಾದ ಶ್ರೀ ಮೊರಾರ್ಜಿ ದೇಸಾಯ್‌ರವರು ಮತ್ತು ವಿದೇಶಾಂಗ ಮಂತ್ರಿಯವರು ಇದರ ಬಗ್ಗೆ ಬಹಳ ಸ್ಪಷ್ಟೀಕರಣ ಮಾಡಿದ್ದಾರೆ. ಹಿಂದೆ ಇದ್ದಂಥ ಸರ್ಕಾರ ವಿದೇಶಾಂಗ ನೀತಿಯ ಬಗ್ಗೆ ಯಾವ ರೀತಿಯ ಒಪ್ಪಂದವನ್ನು ಮಾಡಿಕೊಂಡಿತ್ತೋ ಅದೇ ಒಪ್ಪಂದವನ್ನು ನಾವು ಮುಂದುವರಿಸಿಕೊಂಡು ಹೋಗುತ್ತೇವೆ, ಬೇರೆ ಯಾವ ಬದಲಾವಣೆಯನ್ನೂ ಮಾಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಬಿ. ವಿ. ಕಕ್ಕಿಲಾಯ.—ಕಾದು ನೋಡೋಣ. ಇನ್ನೊಂದು ಮಾತನ್ನು ಹೇಳುವುದಾದರೆ. ಚುನಾವಣೆಯ ಕಾಲದಲ್ಲಿ ಜನತೆಯ ಮುಂದೆ ಒಂದು ಮಾತನ್ನು ಹೇಳಿದರು, ಅದು ಏನೆಂದರೆ ಸಾರ್ವಜನಿಕವಾಗಿ ದೊಡ್ಡ ದೊಡ್ಡ ಕೈಗಾರಿಕೆಗಳು ಪ್ರಾಮುಖ್ಯವಲ್ಲ, ಇನ್ನು ಮುಂದೆ ಸಣ್ಣ ಕೈಗಾರಿಕೆಗಳನ್ನು ಮತ್ತು ಗಾಂಧಿ ಚರಕಗಳಿಂದ ನೂಲನ್ನು ತೆಗೆಯುವುದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತೇವೆಂದು ಹೇಳಿದ್ದಾರೆ. ಇವತ್ತು ನೀವು ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡದಿದ್ದರೆ, ನಮ್ಮ ದೇಶ ಕೈಗಾರಿಕೆಗಳ ಸ್ವಾವಲಂಬನೆಯ ದೇಶವಾಗಿದೆ, ಅವರು

ನಿಮಗೆ ಯಾವುದೇ ರೀತಿಯ ಬೆಂಬಲವನ್ನು ಇನ್ನು ಮುಂದೆ ಕೊಡುವುದಿಲ್ಲ ಎನ್ನುವ ಮಾತನ್ನು ಕೇಂದ್ರ ಸರ್ಕಾರಕ್ಕೆ ನಾನು ಈ ವೇದಿಕೆಯ ಮೂಲಕ ಎಚ್ಚರಿಕೆಯನ್ನು ಕೊಡುವುದಕ್ಕೆ ಇಚ್ಛೆ ಪಡುತ್ತೇನೆ. ಇದೇ ರೀತಿಯಲ್ಲಿ ನಮ್ಮ ದೇಶದ ಭೂ ಸುಧಾರಣಾ ಕಾರ್ಯಕ್ರಮದಿಂದ ಲಕ್ಷಾಂತರ ಜನರಿಗೆ ಇವತ್ತು ಭೂಮಿಯನ್ನು ಕೊಡುವ ಬಗ್ಗೆ ಶಾಸನಗಳು ಬೇಕಾದಷ್ಟು ಬಂದಿವೆ. ಮಾನ್ಯ ಮುಖ್ಯ ಮಂತ್ರಿಗಳವರು ಮೈಸೂರಿನಲ್ಲಿ ಭಾಷಣ ಮಾಡುತ್ತಾ, ಈ ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ಕೆಲವು ತೋಳಗಳು ಬಂದು ಸೇರಿಕೊಂಡಿವೆ, ಆ ತೋಳಗಳನ್ನು ಹಿಡಿದು ಹೊರಕ್ಕೆ ಅಟ್ಟುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆಂದು ಹೇಳಿದ್ದಾರೆ. ಆ ಕಾರ್ಯವನ್ನು ಮೊದಲು ಮಾಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಈ ಸಂದರ್ಭದಲ್ಲಿ ನಮ್ಮ ದೇಶದಲ್ಲಿರುವ 1(5 ಭೂ ಶಾಸನವನ್ನು ರಾಜ್ಯಾಂಗದಲ್ಲಿ ಕೊಟ್ಟಿರುವ 9ನೇ ಪರಿಚ್ಛೇದವನ್ನೇ ನಾವು ರದ್ದು ಮಾಡುತ್ತೇವೆ ಎನ್ನುವ ಮಾತು ಕೇಂದ್ರ ಸರ್ಕಾರದವರಿಂದ ನಮಗೆ ತಿಳಿದು ಬರುತ್ತಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಆ ಬಗ್ಗೆ ನಮ್ಮ ನಾಯಕರುಗಳಾದ ಮಧುಲಿಮಯರವರು ಕೂಡ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಬಿ. ವಿ. ಕಕ್ಕಿಲ್ಲಾಯ.—ನಿಮ್ಮ ನಾಯಕರು ಆದ ಶ್ರೀ ಮಧು ಲಿಮಯರವರ ಬಗ್ಗೆ ನಮಗೆ ಸಹಾನುಭೂತಿ ಇದೆ. ಮತ್ತೆ ಜಾರ್ಜ್ ಫರ್ನಾಂಡೀಸ್ ರವರು "ನಾನು ಮೊರಾರ್ಜಿ ದೇಸಾಯ್‌ರವರ ಗೂಡಿನಲ್ಲಿ ಸಿಕ್ಕಿ ಹಾಕಿಕೊಂಡಿದ್ದೇನೆಂದು" ಹೇಳಿದ್ದಾರೆ. ಮಧು ಲಿಮಯವರ ಬಗ್ಗೆ ಮತ್ತು ಜಾರ್ಜ್ ಫರ್ನಾಂಡೀಸ್ ರವರ ಬಗ್ಗೆ ನಾನು ಗೌರವ ಕೊಡುತ್ತೇನೆ. ಆದರೆ ರಾಜಕೀಯವಾಗಿ ಭಿನ್ನಾಭಿಪ್ರಾಯವನ್ನು ಹೊಂದಿರತಕ್ಕಂಥವರು ಒಟ್ಟಿಗೆ ಸೇರಿ ಹೇಗೆ ಕೆಲಸ ಮಾಡುತ್ತಾರೆ ಎನ್ನುವ ಬಗ್ಗೆ ಸಂಶಯ ಬಂದಿದೆ.

ಶ್ರೀ ಕೋಣಂದೂರು ಲಿಂಗಪ್ಪ—ತಾವು ತಪ್ಪಾಗಿ ತಿಳಿದುಕೊಂಡಿದ್ದೀರಿ. ಶ್ರೀ ಮಧು ಲಿಮಯ ಮತ್ತು ಶ್ರೀ ಜಾರ್ಜ್ ಫರ್ನಾಂಡೀಸ್ ರವರು ಮತ್ತು ರಾಜಾ ನಾರಾಯಣ್ ಕೇಂದ್ರ ಮಂತ್ರಿಮಂಡಲದಲ್ಲಿರುವುದರಿಂದ, ನಮ್ಮ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದರಲ್ಲಿ ಯಾವ ಅಡ್ಡಿಯನ್ನುಂಟು ಮಾಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದನ್ನು ತಾವು ಸಹ ಸ್ವಲ್ಪ ಸರಿಯಾಗಿ ತಿಳಿದುಕೊಳ್ಳಬೇಕು.

ಶ್ರೀ ಬಿ. ವಿ. ಕಕ್ಕಿಲಾಯ.—ಬಹಳ ಸಂತೋಷ. ಅವರು ಹೇಳಿದ ರೀತಿಯಲ್ಲಿ ಆಗುವುದಾದರೆ ಆದನ್ನು ನಾನು ಸ್ವಾಗತಿಸುತ್ತೇನೆ. ಅದರಲ್ಲಿ ನನ್ನ ಯಾವ ಅಭ್ಯಂತರವೂ ಇಲ್ಲ. ಆದರೆ ಒಂದು ಎಚ್ಚರಿಕೆಯ ಮಾತನ್ನು ಹೇಳಬೇಕು ಎಂದರೆ. ಚುನಾವಣೆಗೆ ಮೊದಲು ಶ್ರೀಮಾನ್ ಮೊರಾರ್ಜಿ ದೇಸಾಯ್‌ರವರು ಹೇಳಿದರು ಆಗ ನಮ್ಮ ಮಾರ್ಕ್ಸಿಸ್ಟ್ ಪಕ್ಷದ ಮುಖಂಡರಾದ ಇ. ಎಂ ಎಸ್. ನಂಬೂದರಿ ಪಾಡ್ ರವರು ಬೆಂಬಲ ಕೊಟ್ಟರು. ಅವರ ಮಾತಿಗೆ ಕೇರಳದ ಜನತೆ ಕೂಡ ಬೆಂಬಲ ಕೊಟ್ಟರು. ಇ. ಎಂ. ಎಸ್. ನಂಬೂದರಿ ಪಾಡ್ ರವರು ಬೆಂಬಲ ಕೊಟ್ಟಿದ್ದರಿಂದ ಕೇರಳದಲ್ಲಿ ಏನಾಯಿತು ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಈವಾಗ ನೀವು 9ನೇ ಪರಿಚ್ಛೇದದಲ್ಲಿರುವ 105 ಭೂ ಸುಧಾರಣಾ ಶಾಸನಗಳಿಗೆ ರಕ್ಷಣೆ ಕೊಟ್ಟಿರುವುದನ್ನು ನಾವು ರದ್ದು ಮಾಡುತ್ತೇವೆಂದು ನೀವು ಹೊರಟರೆ ದೇಶದ ಜನ ಅದಕ್ಕಾಗಿ ನಿಮಗೆ ಮತವನ್ನು ಕೊಟ್ಟಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೀಸಾವನ್ನು ರದ್ದು ಮಾಡುತ್ತೇವೆ ಎಂದು ಅಂದು ಹೇಳಿದವರು, ಇಂದು ಆದನ್ನು ಪುನರ್ ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ರದ್ದು ಮಾಡುವುದಕ್ಕೆ ಪುನರ್ ಪರಿಶೀಲನೆ ಏತಕ್ಕೆ? ಅದನ್ನು ವಾಪಸ್ಸು ತೆಗೆಯಿರಿ. ಅಧಿಕಾರಕ್ಕೆ ಬಂದ ನಾಲ್ಕು ದಿವಸದಲ್ಲೇ ಈ ರೀತಿಯಾದರೆ, ಇನ್ನು ನಾಲ್ಕು ತಿಂಗಳಾದಮೇಲೆ ಏನಾಗಬಹುದೆಂದು ನಾವೂ ನೀವೂ ಕಾದು ನೋಡೋಣ. ಆದುದರಿಂದ, ಈ ಸಂದರ್ಭದಲ್ಲಿ, ಕೇಂದ್ರ ಸರ್ಕಾರ ನಮ್ಮ ರಾಜ್ಯ ಸರ್ಕಾರ ಒಳ್ಳೆಯ ಕೆಲಸ ಮಾಡುವುದಕ್ಕೆ ಸಾಕಷ್ಟು ಬೆಂಬಲ ಪ್ರೋತ್ಸಾಹ ಕೊಟ್ಟು ಸಹಾಯ ಮಾಡಲಿಕ್ಕೆ ಮತ್ತು ಪ್ರಜಾಪ್ರಭುತ್ವ ರೀತಿಯಲ್ಲಿ ಜನತೆ ಯಾವ ಉದ್ದೇಶಕ್ಕಾಗಿ ತೀರ್ಪು ಕೊಟ್ಟಿದ್ದಾರೆ, ಆ ಅಂಶವನ್ನು ಸಹನೆಯಿಂದ ಪರಿಶೀಲನೆ ಮಾಡಿ, ಈ ದೇಶದಲ್ಲಿ ಎಲ್ಲರೂ ಸೇರಿ ಪ್ರಜಾಪ್ರಭುತ್ವವನ್ನು ನಡೆಸುವಲ್ಲಿ ಭಾಗಿಗಳಾಗೋಣ ಎಂದು ಇನ್ನೊಮ್ಮೆ ಹೇಳುತ್ತೇನೆ. ನಮ್ಮ ದೇಶದ ಕಳೆದ ಮೂವತ್ತು ವರ್ಷಗಳು, ಅದರಲ್ಲೂ 1969ರಿಂದೀಚೆಗೆ ಮೂಲಭೂತ ವಿಚಾರಗಳಲ್ಲಿ ಯಾವ ಮಾರ್ಗ ಅನುಸರಿಸಿಕೊಂಡು ಬಂದಿದ್ದವೋ, 1971-72ರ ಚುನಾವಣೆಗಳಲ್ಲಿ ಜನತೆ ಯಾವ

ಉದ್ದೇಶಕ್ಕಾಗಿ ಬೆಂಬಲ ಕೊಟ್ಟಿದ್ದಾರೆ, ಆ ಮಾರ್ಗದಲ್ಲಿ ಎಳ್ಳಷ್ಟೂ ಕೂಡ ಬದಲಾವಣೆ ಮಾಡದೆ, ಅದನ್ನು ಮುಂದುವರಿಸುವುದಕ್ಕೆ ಮನಸ್ಸು ಮಾಡಬೇಕೆಂದು ಪ್ರಾರ್ಥಿಸಿಕೊಂಡು, ಅವಕಾಶಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

5-00 P. M.

† ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಉಪಾಧ್ಯಕ್ಷರೇ ಮಾನ್ಯ ರಾಜ್ಯಪಾಲರು ಮಾಡಿರುವ ಭಾಷಣಕ್ಕೆ ನನ್ನ ಸಂಪೂರ್ಣ ಸ್ವಾಗತ ನೀಡಿ, ಕೆಲವು ಮಾತು ಗಳನ್ನು ಆಡಬಯಸುತ್ತೇನೆ. ಆ ದಿವಸ, ರಾಜ್ಯಪಾಲರು ಭಾಷಣ ಮಾಡುವಾಗ ನಮ್ಮ ಸ್ನೇಹಿತರುಗಳು ಸಭಾತ್ಯಾಗ ಮಾಡಿದರು. ಈ ಸದನದ ಮುಂದೆ ಬಂದು ಮಾತನಾಡುವ ನೈತಿಕ ಹಕ್ಕು ಮಾನ್ಯ ರಾಜ್ಯಪಾಲರಿಗಿಲ್ಲ ಎನ್ನುವುದೇ ಅವರ ಕಾರಣ. ನೈತಿಕ ಹಕ್ಕಿನ ಬಗ್ಗೆ ಮಾತ ನಾಡುವ ಜನ, ತಮಗೆ ಈ ಶಾಸನ ಸಭೆಯಲ್ಲಿ ಕುಳಿತುಕೊಳ್ಳುವುದಕ್ಕೆ ಯಾವ ಹಕ್ಕಿದೆ ಎಂದು ವಿಚಾರ ಮಾಡಬೇಕಾಗಿತ್ತು. ಕರ್ನಾಟಕ ರಾಜ್ಯದಲ್ಲಿ, ಒಂದೊಂದು ಕ್ಷೇತ್ರದಲ್ಲೂ ಕೂಡ ಸುಮಾರನ 5-6 ಸಾವಿರ ಮತಗಳ ಹೆಚ್ಚುವರಿಯಲ್ಲಿ ಆಯ್ಕೆ ಮಾಡಿರುವ ಜನರಿರುವಾಗ, ಇವರು ಯಾವ ಶಾಸನ ಸಭೆಗಾಗಲೀ, ಲೋಕಸಭೆಗಾಗಲೀ ಜನ ಇಚ್ಛೆಪಟ್ಟರೆ ಅವರನ್ನು ವಾಪಸ್ಸು ಕರೆಸಿಕೊಳ್ಳಬೇಕೆನ್ನುವ ವಿಧಾನವನ್ನನುಸರಿಸುವ ಜನ ಈಗ, ಈ ಶಾಸನ ಸಭೆಯಲ್ಲಿ ಕುಳಿತುಕೊಳ್ಳುವುದಕ್ಕೆ ಅಧಿಕಾರವೇನಿಕೆ ಎಂದು ಕೇಳುತ್ತೇನೆ. ನೈತಿಕ ಹಕ್ಕಿನ ಬಗ್ಗೆ ಮಾತನಾಡುವ ಜನ, ಮೊದಲು ತಮ್ಮ ಇರುವಿಗೆ ಯನ್ನೂ ಪ್ರಶ್ನೆ ಮಾಡಿಕೊಳ್ಳಬೇಕು. ಮಾನ್ಯ ದೇವೇಗೌಡರು ಮಾತನಾಡುವಾಗ, ಶಾಸನ ಸಭೆವ ಚುನಾವಣೆಗಳನ್ನು ನಡೆಸಬೇಕಾಗಿತ್ತು ; ನಡೆಸಿಲ್ಲ, ಅವಧಿ ವಿಸ್ತರಣೆ ಮಾಡಿಕೊಂಡು ಬಂದಿರುವ ಶಾಸನ ಸಭೆ ಇದೆಂದು ಉದ್ಧರಿಸಿದರು. ಆ ಒಂದು ದೃಷ್ಟಿ ಅವರಿಗಿರುವುದಾದರೆ, ಈ ಶಾಸನ ಸಭೆಗೆ ಅವರು ರಾಜೀನಾಮೆ ಕೊಡಬೇಕಾಗಿತ್ತು. ಯಾರೂ ಅಡ್ಡಿಪಡಿಸಲಿಲ್ಲವಲ್ಲ ? ಮನಸ್ಸಿ; ಒಳಗಿರುವುದೊಂದು. ಹೊರಗಿರುವುದೊಂದಾದರೆ, ಜನರೇನು ಕಡಲೆಕಾಯಿ ತಿನ್ನುತ್ತಿರುವುದಿಲ್ಲ ಅವರೂ ಅರ್ಥ ಮಾಡಿಕೊಳ್ಳುತ್ತಾರೆ. ಗೆಳೆಯ ಕೋಣಂದೂರು ಲಿಂಗಪ್ಪನವರು, ವೀರ ಅಭಿಮನ್ಯುವಿನಂತೆ ನಿಂತು ಒಂದು ಮಾತನ್ನು ಹೇಳಿದರು, ನಮ್ಮ ನಾಯಕರು ಎಲ್ಲಿಯವರೆಗೆ ಇರುತ್ತಾರೆ, ಅಲ್ಲಿಯವರೆಗೆ ಒಂಭತ್ತನೇ ಪರಿಚ್ಛೇದವನ್ನು ಬಿಡಲಿಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಿದ್ದಾರೆ. ಬಹಳ ಸಂತೋಷ. ಮಾನ್ಯ ಮಿತ್ರರು, ಧೃತರಾಷ್ಟ್ರ ಪ್ರೇಮದಲ್ಲಿ ಸಿಕ್ಕಿ ಹಾಕಿಕೊಂಡು ಬಿಟ್ಟಿದ್ದಾರೆ. ಶಕ್ತಿಯನ್ನು ಕಳೆದುಕೊಂಡ ಜನ ಇವತ್ತು ಬೋನಿನಲ್ಲಿ ಸಿಕ್ಕಿ ಹಾಕಿಕೊಂಡ ಹುಲಿ ಯಂತಾಗಿದ್ದಾರೆ ಎಲ್ಲ ಪಕ್ಷಗಳೂ ಸಮ್ಮಿಳನಗೊಂಡು ಬೇರೊಂದು ಹೆಸರನ್ನಿಟ್ಟುಕೊಂಡುಬಿಟ್ಟರೆ, ಸಮಾಜವಾದವೆನಿಸುವುದಿರಲಿ, ಸಮಾಜವಾದದ ಯಾವ ಸಿದ್ಧಾಂತವೂ ಕಾರ್ಯಗತ ಮಾಡುವುದ ಕ್ಕಾಗುವುದಿಲ್ಲವೆನ್ನುವ ಮಾತನ್ನು ಹೇಳಬೇಕಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ—ನಮ್ಮ ಸ್ನೇಹಿತರಿಗೆ, ಅ, ಆ, ಇ, ಈ ಯಿಂದ ಎ, ಬಿ, ಸಿ, ಡಿ ವರೆಗೆ ಹೇಳಬೇಕೆಂದೆನಿಸುತ್ತಿದೆ. ಮ್ಯಾನಿಫೆಸ್ಟೋ ಕನ್ನಡದಲ್ಲೂ ಇದೆ, ಇಂಗ್ಲಿಷ್‌ನಲ್ಲೂ ಇದೆ. ಅವರಿಗದು ಅರ್ಥವಾಗದಿದ್ದರೆ, ಹೇಳಿ, ನಾನು ಹೇಗಿದ್ದರೂ ಮೇಸ್ಟ್ರು, ಪಾಠ ಹೇಳಿಕೊಡುತ್ತೇನೆ

ಶ್ರೀ ಎಸ್. ಎಂ ಶೀರ್ನಾಳಿ ಚಂದ್ರಶೇಖರ್.—ಇವರಿಂದ ಪಾಠ ಹೇಳಿಸಿಕೊಳ್ಳುವ ಪರಿಸ್ಥಿತಿ ನನಗೆ ಬಂದಿಲ್ಲ ; ಬರುವ ಅಗತ್ಯವೂ ಇಲ್ಲ. ಕೆಲವರಿಗೆ, ಕುದುರೆ ಮೇಲೆ ಸವಾರಿ ಮಾಡಿರೋ, ಮಾಡಿರೊ ಎಂದು ಹೇಳಿದರೂ, ಕೇಳದೆ, ಅವರು ಕತ್ತೆ ಮೇಲೆ ಸವಾರಿ ಮಾಡಿದರೂ, ಅದೇ ಈಗ ಬಂದಿರುವುದು ಯಾವುದರ ಮೇಲೆ ಸವಾರಿ ಮಾಡಿದ್ದರೆ ಚೆನ್ನಾಗಿತ್ತು ಎಂದು ಮೊದಲೇ ಯೋಚನೆ ಮಾಡಿದ್ದರೆ, ಈ ಸ್ಥಿತಿ ಅವರಿಗೆ ಬರುತ್ತಿರಲಿಲ್ಲ. ಸಮಾಜವಾದವನ್ನು ಸಾಧಿಸಬೇಕಾದರೆ ಕಾಂಗ್ರೆಸ್ಸಿನ ಕಡೆ ಬನ್ನಿ, ಆ ಕಾಲಗೆಟ್ಟ ಕೆಲಸ ಮಾಡಬೇಡಿ ಎಂದು ಹೇಳಿದೆ. ಅದನ್ನು ಕೇಳದೆ, ಅವರು ಕತ್ತೆಯ ಮೇಲೇ ಸವಾರಿ ಹೊರಟಿದ್ದಾರೆ ! ಅದು ಯಾವತ್ತು ಒದೆಯುತ್ತದೆಯೋ ಏನೋ ?

ಶ್ರೀ ಕೋಣಂದೂರು ಲಿಂಗಪ್ಪ —ಕತ್ತೆಯ ಹಿಂದುಗಡೆ ತಾವು ನಿಂತಿದ್ದೀರಿ. ಆಗ ಕತ್ತೆ ತಮಗೇನು ಮಾಡುತ್ತದೆಂದು ತಾವೇ ಯೋಚಿಸಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ — ನಮ್ಮ ಗೆಳೆಯ ಶ್ರೀ ಕಲ್ಮಂಕರ್‌ರವರು ಒಂದು ಮಾತು ಹೇಳಿದಾಗ; ನಮ್ಮ ಮಿತ್ರರು ಸಿಟ್ಟು ಬಂದು ಎದ್ದರಲ್ಲ ಏತಕ್ಕೆ ? ಕಂಡದ್ದನ್ನು ಕಂಡಂತೆ ಹೇಳಿದರೆ, ಕಂಡದಂಥ ಕೋಪ ಎಕ್ಸ್‌ಟ್ರಾಕಾನ್‌ಸ್ಟಿಟ್ಯೂಷನಲ್ ಅಥಾರಿಟಿ ಎಂದು ಅವರು ಹೇಳಿದ್ದು ತಪ್ಪೆ ? ಜಯಪ್ರಕಾಶ್ ನಾರಾಯಣ್ ಅವರು ನ್ಯಾಯವಾಗಿ ಚುನಾಯಿಸಲ್ಪಟ್ಟ ಪ್ರಜಾಪ್ರಭುತ್ವ ಸರ್ಕಾರಗಳನ್ನು ತೆಗೆದುಬಿಟ್ಟು, ಪುನಃ ಚುನಾವಣೆಗಳನ್ನು ನಡೆಸಿ ಎನ್ನುವ ಮಾತನ್ನು ಯಾವ ಅಧಿಕಾರವಾಣಿಯಿಂದ ಹೇಳಿದರು ? ಅದು ಎಕ್ಸ್‌ಟ್ರಾ ಕಾನ್‌ಸ್ಟಿಟ್ಯೂಷನಲ್ ಅಥಾರಿಟಿ ಅಲ್ಲವೆ? ಐದು ಅಂಶಗಳ ಕಾರ್ಯಕ್ರಮ ಹಾಕಿಕೊಟ್ಟ ಸಂಜಯ ಗಾಂಧಿಯವರನ್ನು, ಅವರು ಯಾವ ಅಧಿಕಾರದಿಂದ ಅವನ್ನು ತಂದರು ಎಂದು ಪುನರುಚ್ಚಾರಣೆ ಮಾಡುವುದಕ್ಕೆ ಹೊರಟಿದ್ದಾರಲ್ಲ, ಇವರು, ಜಯ ಪ್ರಕಾಶ್ ನಾರಾಯಣ್ ಅವರ ಬಗ್ಗೆ ಏನು ಹೇಳುತ್ತಾರೆ ?

ಶ್ರೀ ಕೋಣಂದೂರು ಲಿಂಗಪ್ಪ.—ಇದರ ಬಗ್ಗೆ ಮಾನ್ಯ ಕಲ್ಮಂಕರ್ ಅವರಿಗೆ ಉತ್ತರ ಕೊಟ್ಟಿದ್ದೇವೆ. ಪುನಃ ನಿಮಗೆ ಕೊಡಬೇಕಾದ ಅವಶ್ಯಕತೆಯಿಲ್ಲ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಉತ್ತರ ಕೊಡಿ ? ನಮ್ಮಲ್ಲಿ ಒಂದು ಗಾದೆ ಇದೆ. ಅದನ್ನು ಹೇಳಲೋ, ಬಿಡಲೋ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಹೇಳಿ. ನ್ಯಾಯವಾದ ಗಾಡೆಗಳು ವೇದದ ಸಮಾನ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಅಧಿಕಾರ ಗದ್ದುಗೆಯನ್ನು ಕಾಣದೆ ಕಾಣವೆ ಕಂಡುಬಿಟ್ಟಿದ್ದಾರೆ ! ಮುಂದೆ ಏನು ಮಾಡುತ್ತಾರೋ ಏನೋ ನನಗೆ ಗೊತ್ತಾಗುತ್ತಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಅರ್ಥವಾಯಿತು.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್,—ಉತ್ತರ ಭಾರತದಲ್ಲಿ ಚುನಾವಣೆ ಯಾವ ಸಿದ್ಧಾಂತದ ಮೇಲೂ ನಡೆದಿಲ್ಲ.

SRI D. B. KALMANKAR.—Mr. Jayaprakash Narayan was given Rs. 10 lakhs by the Trustees of the Juslook Hospital and again he was given Rs. 2 lakhs. Then, I failed to understand why he should travel in the plane of Air-Force ?

ಶ್ರೀ ಕೋಣಂದೂರು ಲಿಂಗಪ್ಪ.—ತುರ್ತುಪರಿಸ್ಥಿತಿ ಸಮಯದಲ್ಲಿ ಜಯಪ್ರಕಾಶ್ ನಾರಾಯಣ ಅವರು ಶ್ರೀಮತಿ ಇಂದಿರಾಗಾಂಧಿಯವರಿಗೆ ನೇರವಾಗಿ ಉತ್ತರ ಬರೆದಿದ್ದಾರೆ. ಈ ರಾಷ್ಟ್ರದ ಪ್ರತಿಯೊಬ್ಬ ನಾಗರೀಕನಿಂದ ಅವರ ಚಿಕಿತ್ಸೆಗಾಗಿ ಒಂದೊಂದು ರೂಪಾಯಿಯನ್ನು ಕೇಳಿದ್ದರು. ಹೀಗೆ ಬಂದ ಹಣವೇ ಅಷ್ಟಾಗಿತ್ತು. ಮೊಸಳೆ ಕಣ್ಣೀರು ಸುರಿಸುವಂತೆ ಇಂದಿರಾ ಗಾಂಧಿಯವರು ಶ್ರೀ ಜಯಪ್ರಕಾಶ್ ನಾರಾಯಣ್ ಅವರಿಗೆ 90 ಸಾವಿರ ರೂಪಾಯಿಗಳನ್ನು ಕಳುಹಿಸಿದರು. ಆದರೆ, ಅವರು ಅದನ್ನು ಸ್ವೀಕರಿಸದೆ, ವಾಪಸ್ಸು ಕಳುಹಿಸಿದರು. ನಾಗರೀಕರಿಂದ ಬಂದ ಪ್ರತಿಯೊಂದು ಕಾಸಿಗೂ ಲೆಕ್ಕವಿದೆ; ಪತ್ರವಿದೆ.

ಶ್ರೀ ಎಂ. ಶೀರ್ನಾಳಿ ಚಂದ್ರಶೇಖರ್.—ಮೊನ್ನೆ ಜಯಪ್ರಕಾಶ್ ನಾರಾಯಣ್ ಅವರನ್ನು ವಿಶೇಷ ವಿಮಾನವೊಂದರಲ್ಲಿ ದೆಹಲಿಯಿಂದ ಮುಂಬಯಿಗೆ ಕಳುಹಿಸಲು, ಅವರಿಗಿದ್ದ ಅಧಿಕಾರವೇನು? ಯಾವ ಅಧಿಕಾರದಲ್ಲಿ ಅವರು ವಿಶೇಷ ವಿಮಾನದಲ್ಲಿ ಹೋದರು ?

ಶ್ರೀ ಕೋಣಂದೂರು ಲಿಂಗಪ್ಪ.—ಸಂಜಯಗಾಂಧಿಯವರು ವಿಶೇಷ ವಿಮಾನದಲ್ಲಿ ಪುಕ್ಕಸಟ್ಟೆ ಹೋಗುತ್ತಿದ್ದರು. ಆದರೆ, ಅಭಿನವ ಗಾಂಧಿಯ ಜೀವವನ್ನುಳಿಸುವುದಕ್ಕೆ ವಿಶೇಷ ವಿಮಾನದಲ್ಲಿ ಕಳುಹಿಸಿದ್ದು ತಪ್ಪೆ?

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸಂಜಯ ಗಾಂಧಿಯವರು ಪುಕ್ಕಸಟ್ಟೆ ತಿರುಗಲಿಲ್ಲ ನನ್ನ ಸ್ನೇಹಿತರು ದಯವಿಟ್ಟು ಅರ್ಥಮಾಡಿಕೊಳ್ಳಬೇಕು: ಈ ಸರ್ಕಾರ ಎಷ್ಟು ದಿವಸ ಇರುತ್ತದೆ? ಮಾನ್ಯ ಸ್ನೇಹಿತರಿಗೆ ನಾನೊಂದು ಕಥೆಯನ್ನು ನೆನಪಿಗೆ ತರುತ್ತೇನೆ. ಒಂದು ದೋಣಿ ಪ್ರಯಾಣಕ್ಕೆ ಸಿದ್ಧವಾಗಿ ನಿಂತಿತ್ತು. ಅದರಲ್ಲಿ ಪ್ರಯಾಣ ಮಾಡಲು ಹಾವಾಡಿಸುವವನೂ ಹಾವಿನ

ಜೊತೆಯಲ್ಲಿ ಬಂದ; ಮಂಗನನ್ನಾಡಿಸುವವನೂ ಮಂಗನ ಜೊತೆಯಲ್ಲಿ ಬಂದ; ಕರಡಿಯಾಡಿಸುವವನೂ ಕರಡಿಯ ಜೊತೆಯಲ್ಲಿ ಬಂದ; ಕೆಲವು ಜನ ಪ್ರಯಾಣಿಕರೂ ಆ ದೋಣಿಗೆ ಬದರು, ದೋಣಿ ಮುಂದೆಸಾಗಿತು. ಮಧ್ಯದಲ್ಲಿ, ಕೋತಿ ಹಾವಿನ ಬುಟ್ಟಿಯ ಮುಚ್ಚಳವನ್ನು ಬಿಚ್ಚಿತು; ಹಾವು ಹೊರಗಡೆ ಬಂದಿತು ಜನರೆಲ್ಲಾ ಹೆದರಿದರು; ಕಂಗಾಲಾದರು. ಜನರೆಲ್ಲರೂ ಹಾವಿರದ ಕಡೆ, ದೋಣಿಯ ಒಂದು ಭಾಗಕ್ಕೆ ನುಗ್ಗಿದರು. ಸರಿ; ದೋಣಿ ಮುಗುಚಿ ಬಿತ್ತು; ಹಾಗೆಯೇ ವಿಧವಿಧವಾದ ಅಭಿಪ್ರಾಯಗಳನ್ನಿಟ್ಟುಕೊಂಡಿರುವವರ ಗತಿಯೂ ಇಷ್ಟೆ.

ಶ್ರೀ ಕೋಣಂದರು ಲಿಂಗಪ್ಪ.—ಟೆಂಟ್ ಸಿನಿಮಾ ಮತ್ತು ಸರ್ಕಸಿನ ಪ್ರಾಣಿಗಳು ಯಾವುವು ಹೇಳಿ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಿಮ್ಮ ರಿಂಗ್ ಮಾಸ್ಟರ್ ಮೇಲೆ ಇಷ್ಟುದ್ದ ಅಪಾದನೆಗಳ ಪಟ್ಟಿಯಿದೆ. ಆತ್ಮ ಬಿಚ್ಚಿ ಮಾತನಾಡಬೇಕೆಂದು ಮಾನ್ಯ ಸದಸ್ಯರು ಹೇಳುವಾಗ, ಅವರು ಇದನ್ನೂ ಪ್ರಸ್ತಾಪ ಮಾಡಲಿ? ಎಲ್ಲಿದೆ ನಿಮಗೆ ಆತ್ಮ?

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್—ಇದರ ಹತ್ತರಷ್ಟು ಉದ್ದದ ಪಟ್ಟಿ ನಿಮ್ಮ ನಾಯಕರ ಮೇಲಿದೆ. ಅವನ್ನೆಲ್ಲಾ ತನಿಖೆ ಮಾಡಿದ ಮೇಲೆ, ಇವರದೂ ತನಿಖೆ ಮಾಡಲಿ. ಇದರಲ್ಲಿ ನನ್ನದೇನೂ ಅಭ್ಯಂತರವಿಲ್ಲ. ಆದರೆ, ಒಳ್ಳೆಯದನ್ನು ಮಾಡಿದವರ ಬಗ್ಗೆ ''ಒಳ್ಳೆಯದನ್ನು ಮಾಡಿದ್ದಾರೆ'' ಎನ್ನುವ ಸಂಸ್ಕಾರ ನಮ್ಮ ಸ್ನೇಹಿತರಿಗೆ ಇರಬೇಡವೆ? ತಮಗಂತೂ ಮಾಡುವುದಕ್ಕಾಗುವುದಿಲ್ಲ; ಆದರೆ ಮಾಡುವವರನ್ನು ಸ್ಮರಿಸುವ ಸೌಜನ್ಯ ಇಲ್ಲ ಎಂದರೆ, ನಾನು ಏನು ಹೇಳಲಿ? 25 ಅಂಶಗಳ ಕಾರ್ಯಕ್ರಮದ ಬಗ್ಗೆ ನೀವು ಮಾತನಾಡುವುದಿಲ್ಲ. ಯಾವ ಕಾಲದಲ್ಲಿ ತಾನೇ ಪ್ರಗತಿಪರವಾದ ಕಾರ್ಯಕ್ರಮಗಳು ಆಗಿದ್ದವು ಎಂದು ನಾನು ಕೇಳುತ್ತೇನೆ. ನಮ್ಮ ಸ್ನೇಹಿತರುಗಳು ಜನರು ಅದಕ್ಕೆ ಉತ್ತರ ಕೊಟ್ಟಿದ್ದಾರೆಂದು ಹೇಳುತ್ತಾರೆ? ಉತ್ತರ ಯಾರಿಗೆ ಕೊಟ್ಟಿದ್ದಾರೆ ಎನ್ನುವುದು ಅವರಿಗೂ ಗೊತ್ತು, ನಮಗೂ ಗೊತ್ತು, 20 ಅಂಶಗಳ ಕಾರ್ಯಕ್ರಮದ ಮೇಲೆ ಚುನಾವಣೆ ನಡೆಯಲಿಲ್ಲ, ಕುಟುಂಬ ಯೋಜನೆಯಂತ ಯಾವುದೋ ಒಂದು ದೋಷದ ಮೇಲೆ ಸ್ಥಳೀಯ ಸಮಸ್ಯೆಯ ಮೇಲೆ ಚುನಾವಣೆ ನಡೆಯಿತು. ದಕ್ಷಿಣದಲ್ಲಿ ನೇರವಾಗಿ ಸರ್ಕಾರದ ಕಾರ್ಯಕ್ರಮದ ಮೇಲೆ ಜನ ಓಟು ಕೊಟ್ಟಿದ್ದಾರೆ. ಇವತ್ತು ಚುನಾವಣೆ ನಡೆಸಿದರೂ ಕೂಡ ಕಾಂಗ್ರೆಸ್ಸಿಗೆ ಚ್ಯುತಿ ಇಲ್ಲ, ಜನ ಯಾರ ಮುಖ ನೋಡಿಯೂ ಓಟು ಕೊಟ್ಟಿಲ್ಲ; ಸರ್ಕಾರದ ಕಾರ್ಯಕ್ರಮ ನೋಡಿ ಕಾಂಗ್ರೆಸ್ ಪಕ್ಷಕ್ಕೆ ಓಟು ಕೊಟ್ಟಿದ್ದಾರೆ. ಕೇವಲ ವರ್ಗ ಸಂಘರ್ಷಣೆ ಚುನಾವಣೆ ಮೊನ್ನೆ ನಡೆದಿರುವುದು, ಹರಿಜನ ಗಿರಿಜನ ಹಾಗೂ ಬಡವರು ಸಂಪೂರ್ಣವಾಗಿ ಕಾಂಗ್ರೆಸ್ ಪಕ್ಷಕ್ಕೆ ಮತ ಕೊಟ್ಟಿದ್ದಾರೆ. ಇನ್ನು 20 ವರ್ಷಗಳಾದರೂ ಕೂಡ ಕಾಂಗ್ರೆಸ್‌ನ್ನು ಅಳಿಸಲಿಕ್ಕೆ ಸಾಧ್ಯವಿಲ್ಲ.

ಶ್ರೀ ಕೋಣಂದೂರ ಲಿಂಗಪ್ಪ.—ಬದರೀನಾರಾಯಣ್ ಬಡವರೇ ?

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಬದರೀನಾರಾಯಣ್ ಬಡವರು ಅಲ್ಲದೇ ಇದ್ದರೂ ಸಮಾಜವಾದದಲ್ಲಿ ನಂಬಿಕೆ ಇರತಕ್ಕ ವ್ಯಕ್ತಿ. ಮಾನ್ಯ ಸ್ನೇಹಿತರು ಅರ್ಥಮಾಡಿಕೊಳ್ಳಬೇಕು; ಚುನಾವಣೆ ನಡೆದಿರುವುದೇ ವರ್ಗಸಂಘರ್ಷಣೆ ಒಳಗೆ; ತಪ್ಪು ಹೆಜ್ಜೆ ಇಟ್ಟಿದ್ದೇವೆಂದು ಸ್ನೇಹಿತರಿಗೆ ಅರ್ಥವಾಗಿದೆ. ಇವತ್ತು ರಾಜ್ಯಪಾಲರ ಭಾಷಣದಲ್ಲಿ ಅನೇಕ ವಿಚಾರವನ್ನು ಹಾಗೂ ಸಾಧನೆಗಳನ್ನು ಹೇಳಿದ್ದೇವೆ. ಈ ಒಂದು ವರ್ಷದಲ್ಲಿ ಆಗಿರತಕ್ಕ ಸಾಧನೆ ಯಾವ ಒಂದು ಕಾಲದಲ್ಲಿಯೂ ಆಗಿಲ್ಲವೆಂದು ಹೇಳುತ್ತೇನೆ. ಜಾರ್ಜ್‌ಫರ್ನಾಂಡೀಸ್ ಬಗ್ಗೆ ಹೇಳುತ್ತಾರೆ; ನ್ಯಾಯಾಂಗದ ಬಗ್ಗೆ ಬಹಳ ಮೆಚ್ಚಿಗೆ ಇರತಕ್ಕ ವ್ಯಕ್ತಿಗಳು ಬರೋಡಾ ಡೈನಾಮೈಟ್ ಪ್ರಕರಣದ ಬಗ್ಗೆ ಯಾವುದೇ ವಿಚಾರಣೆ ಇಲ್ಲದೆ ಮಂತ್ರಿ ಮಾಡಿದ್ದೀರಲ್ಲಾ; ಇದು ಯಾವ ನ್ಯಾಯಾಂಗ? ನಮ್ಮ ನ್ಯಾಯಾಲಯಗಳು ಅಷ್ಟೆ? ಆರು ತಿಂಗಳ ಹಿಂದೆ ಜಾರ್ಜ್ ಫರ್ನಾಂಡೀಸ್‌ರವರು ಬಿಡುಗಡೆ ಕೋರಿ ಅರ್ಜಿ ಹಾಕಿದ್ದಾಗ ರಿಜೆಕ್ಟ್ ಮಾಡಿ; ಇವತ್ತು ಅದೇ ನ್ಯಾಯಾಲಯ ಬಿಡುಗಡೆ ಮಾಡಿತು.

ಶ್ರೀ ಕೋಣಂದೂರು ಲಿಂಗಪ್ಪ.—ಪ್ರಧಾನಮಂತ್ರಿಗಳು ಒಪ್ಪಿಗೆ ಕೊಟ್ಟ ಮೇಲೆ ಬಿಟ್ಟರು.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇರ್.—ನಾನು ಅದೇ ಹೇಳಿದ್ದು; ಪ್ರಧಾನಮಂತ್ರಿಗಳಿಂದ ಆದೇಶ ಹೋಯಿತು ಬಿಟ್ಟರು.

ಶ್ರೀ ಹೆಚ್.ಡಿ. ದೇವೇಗೌಡ —ಕೋರ್ಟ್ ಬಿಡುಗಡೆ ಮಾಡಿದ್ದು ನಿಮ್ಮ ಪ್ರಧಾನಮಂತ್ರಿಗಳು ಅಧಿಕಾರದಲ್ಲಿದ್ದಾಗ

ಶ್ರೀ ಹೆಚ್.ಸಿ. ಕೃಷ್ಣಪ್ಪ —ಅಧ್ಯಕ್ಷರೇ, ಪ್ರಧಾನಮಂತ್ರಿಗಳ ಬಗ್ಗೆ ನಮ್ಮ ನಿಮ್ಮ ಎಂದು ಪದ ಪ್ರಯೋಗ ಮಾಡುವುದು ಒಳ್ಳೆಯದಲ್ಲ, ಜವಾಬ್ದಾರಿಯುತವಾದ ಸ್ಥಾನದಲ್ಲಿದ್ದುಕೊಂಡು ಈ ರೀತಿ ಮಾತನಾಡಬಾರದು.

ಶ್ರೀ ಕೋಣಂದೂರು ಲಿಂಗಪ್ಪ.—ಜೂನ್ 12, 1975 ರಿಂದ ಆಚೆಗೆ ನಮ್ಮ ನಿಮ್ಮ ಪ್ರಧಾನಿ.

ಶ್ರೀ ಎಸ್.ಎಂ. ಶಿರ್ನಾಳ ಚಂದ್ರಶೇಖರ್.—ನಮ್ಮ ಗೆಳೆಯರು ಶಿವರ್ಲ ಇಂಜಿನಿಯರಿಂಗ್ ಕಂಪನಿ ಬಗ್ಗೆ ಬಹಳ ಮಾತನಾಡಿದ್ದಾರೆ. ಶರಾವತಿ ಕರ್ನಾಟಕಾಂದ ಕರ್ನಾಟಕದ ಶುದ್ಧಕ್ಕೂ ಜನಮನದಲ್ಲಿ ಮೂಡಿರತಕ್ಕ ಕರ್ನಾಟಕಾಂದ ಇದರ ಬಗ್ಗೆ ವಿತಕ್ಕೆ ವರ್ತನಾಡುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ನಾಲ್ಕು ವರ್ಷಗಳಿಂದ ಹೇಳುತ್ತಿದ್ದೇವೆ; ವಿಚಾರಣೆ ಮಾಡಿ; ನಿಜಲಿಂಗಪ್ಪನವರು ತಪ್ಪಿತಸ್ಥರೇ, ವಿರೇಂದ್ರಪಾಟೀಲರು ತಪ್ಪಿತಸ್ಥರೇ ಎಂದು ಮಾಡದೇ ಇರುವವರು ಯಾರು?

ಶ್ರೀ ಎಸ್.ಎಂ. ಶಿರ್ನಾಳ ಚಂದ್ರಶೇಖರ್.—ಯಾರ ಬಗ್ಗೆ ಉದ್ದುದ್ದ ಮಾತ ನಾಡು ತಿದ್ದಿರೋ ಅವರ ಜೊತೆ ಸೇರಿದ್ದೀರಿ. ಮಾನ್ಯ ದೇವೇಗೌಡರು ಮಾತನಾಡುವಾಗ ಜೈಲಿನಲ್ಲಿ ನಡೆದಂತ ಅನೇಕ ದುಷ್ಕೃತ್ಯಗಳನ್ನು ಎತ್ತಿಕೊಂಡಿದ್ದಾರೆ. ಆಗಿರಬಹುದು? ಇಲ್ಲವೆಂದು ನಾನು ಹೇಳುವುದಿಲ್ಲ. ಸರ್ಕಾರದ ಯಂತ್ರದಲ್ಲಿ ಒಳ್ಳೆಯವರು ಇರುತ್ತಾರೆ; ಕೆಟ್ಟವರು ಇರುತ್ತಾರೆ. ಅವರ ಸರ್ಕಾರ ಬಂದರೂ ಕೆಡ ಇರುತ್ತಾರೆ. ಬರೀ ತಪ್ಪುಗಳ ಬಗ್ಗೆ ಮಾತನಾಡುವುದೇ ಒಂದು ಸಂಪ್ರದಾಯವಾಗಿದೆ. ನಾನು ಕೇಳುತ್ತೇನೆ; ಹಿಂದೆ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಕೆಲವು ಪತ್ರಿಕಾ ಸಂಪಾದಕರುಗಳನ್ನು ಒಳಗೆ ಹಾಕಿದರು; ಟಿ.ಕೆ. ಮಹಮದರವರನ್ನು ಸಹಿತ ವಿಚಾರಣೆ ಮಾಡದೆ; ಇನ್ನಿತರ ನಿರಪರಾಧಿಗಳನ್ನು ಒಳಗೆ ಹಾಕಿದರು.

ಶ್ರೀ ಕೋಣಂದೂರು ಲಿಂಗಪ್ಪ.—ಮೀಸಾದಲ್ಲಿ ಹಾಕಲಿಲ್ಲ.

ಶ್ರೀ ಎಸ್.ಎಂ. ಶಿರ್ನಾಳ ಚಂದ್ರಶೇಖರ್.—ಯಾವುದೇ ಕಾನೂನಾಗಲೀ ಸರ್ಕಾರ ನಡೆಸುವಾಗ, ತಪ್ಪು ಸರಿ ಎಂದು ತೀರ್ಮಾನ ಮಾಡುವುದಕ್ಕೆ ಸರ್ಕಾರದ ಯಂತ್ರ ಇದ್ದು? ಇದು ಒಂದು ಅಸ್ತ್ರವಾಗಿದೆ. ತಪ್ಪುಗಳು ಕಡಿಮೆಯಾಗಬೇಕಾದರೆ ಹೇಗೆ ಮಾಡತಕ್ಕದ್ದು ಎನ್ನುವುದು ಸರ್ಕಾರದ ಕರ್ತವ್ಯ.

ಇವೊತ್ತು ನಾನು ಕೇಳುತ್ತಿದ್ದು ಇಷ್ಟೇ, ಕಳ್ಳಸಾಗಾಣಿಕೆ ಮಾಡಿಕೊಂಡು ಬಂದಂಥ ಜನರನ್ನು ತಮ್ಮ ಸರ್ಕಾರವು ಬಂದ ಕೂಡಲೇ ಬಿಟ್ಟರು. ಅವರನ್ನು ಬಿಟ್ಟಿದ್ದರ ಜೊತೆಗೆ ಅವರಿಗೆ ಮೆರವಣಿಗೆ ಮಾಡಿದ್ದಾರೆ ಇವರಿಗೆ ನಾಚಿಕೆಯಾಗುವುದು ಬೇಡವೆ ಎಂದು ಕೇಳುತ್ತೇನೆ. ಕೆಲವು ಶಾಸಕರು ಆ ಒಂದು ಮೆರವಣಿಗೆಯಲ್ಲಿ ಭಾಗವಹಿಸಿದ್ದಾರೆ. ಇದರಿಂದ ಎಷ್ಟು ಗೌರವ ಬರುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಆರ್ಥಿಕವಾಗಿ ಇಂತಹ ಅಪರಾಧವನ್ನು ನಾವು ತಡೆಯಲು ತೋರಿಸಿದಂತಹದ್ದಕ್ಕೆ ಯಾವ ರೀತಿ ಆಗುತ್ತದೆ ಎನ್ನುವುದರ ಬಗ್ಗೆ ವಿಚಾರ ಮಾಡಬೇಕು.

ಶ್ರೀ ಹೆಚ್ ಡಿ. ದೇವೇಗೌಡ —ಸ್ವಾಮಿ, ಎಮರ್ಜೆನ್ಸಿ ರಿಫ್ರೆಶ್ ಮಾಡಿದವರು ತಮ್ಮ ಮಾಜಿ ಪ್ರಧಾನ ಮಂತ್ರಿಗಳು ಎಲ್ಲಾ ಬಂದಿಗಳ ಬಿಡುಗಡೆಗೆ ಆದೇಶ ಮಾಡಿದವರು ತಮ್ಮ ಮಾಜಿ ಪ್ರಧಾನ ಮಂತ್ರಿಗಳೇ!

ಶ್ರೀ ಎಸ್.ವೈ. ಪಾಟೀಲ್.—ಸ್ವಾಮಿ, ಮಾಜಿ ಪ್ರಧಾನಿಗಳು ಬೇಡ ಎಂದಾಗ ಎಮರ್ಜೆನ್ಸಿ ತೆಗೆದರು, ಬೇಕು ಎಂದು ಮಾಡಿದಾಗ ಎಷ್ಟು ಜನರಿಂದ ರೆಪ್ರಸೆಂಟೇಷನ್ ಬಂದಿತ್ತು.

ಶ್ರೀ ಎಸ್.ಎಂ. ಶಿರ್ನಾಳ ಚಂದ್ರಶೇಖರ್.—ಅಧ್ಯಕ್ಷರೇ, ಆರ್ಥಿಕ ಅಪರಾಧಕ್ಕೆ ಬಂಧನವಾದಂತ ಜನರನ್ನು ಬಿಡುಗಡೆ ಮಾಡಿದಾಗ ಸಂತೋಷಕೂಟ ನಡೆಯಿತು. ಅವರು ಬಹಳಷ್ಟು ಹಣವನ್ನು ವೆಚ್ಚ ಮಾಡಿರಬೇಕು ಎಂದು ಕಾಣುತ್ತದೆ.

ಶ್ರೀ ಸಿ. ಬೈರೇಗೌಡ —ಸ್ವಾಮಿ, ಹಾಜಿ ಮಸ್ತಾನ್ ಆರು ಮೂರು ಕೋಟಿ ರೂಪಾಯಿ ವರೆಗೆ ಕಾಂಗ್ರೆಸ್ ಪಕ್ಷಕ್ಕೆ ಕೊಟ್ಟಿದ್ದೆ ಎಂದು ಹೇಳಿದ್ದಾರೆ.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ, ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಒಬ್ಬ ಕಳ್ಳಸಾಗಾಣಿಕೆದಾರರನ್ನು ಹಿಡಿದಿದ್ದರು, ಅವರು ಜನತಾ ಪಕ್ಷಕ್ಕೆ 25 ಸಾವಿರ ರೂಪಾಯಿ, ಎರಡು ಕಾರುಗಳನ್ನು ಕೊಟ್ಟರು ಎಂದು ಹೇಳಿ ಅವರನ್ನು ಬಿಟ್ಟುಬಿಟ್ಟಿದ್ದಾರೆ. ಇವೊತ್ತು ದೇಶದಲ್ಲಿ ಆಗತಕ್ಕ ಅನ್ಯಾಯವನ್ನು ತೊಡೆದುಹಾಕಲಿಕ್ಕೆ ಒತ್ತಾಯ ತರುವವರಿಗೆ ಇದೇ ಗತಿ ಎಂದು ಇವೊತ್ತು ನಾವು ಕಲಿತಿದ್ದು ಆಯಿತು. ನಾವು ಒಳ್ಳೆಯ ಕಾರ್ಯಕ್ರಮವನ್ನು ಆಚರಣೆಗೆ ತರಲಿಕ್ಕೆ ಹೋಗಿದ್ದಕ್ಕೆ ಇದು ಪ್ರತಿಫಲ. ಇವೊತ್ತು ಬಂಧನದಲ್ಲಿದ್ದಂತವರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗಿತ್ತು. ಮೊನ್ನೆಯ ದಿವಸ ಪಾರ್ಲಿಮೆಂಟಿನಲ್ಲಿ ಅಧ್ಯಕ್ಷರ ಭಾಷಣದಲ್ಲಿ ದೇಶಕ್ಕೆ ಯಾವುದನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ ಇವೊತ್ತು ಅಧ್ಯಕ್ಷರ ಭಾಷಣದಲ್ಲಿ ಎಂಭತ್ತು ಪರ ಸೆಂಟ್ ಬಡವರು ಇರತಕ್ಕ ದೇಶಕ್ಕೆ ಏನಾದರೂ ಸಾಮಾಜಿಕ ಸಿದ್ಧಾಂತ ಅವರು ಪಾಲನೆ ಮಾಡತಕ್ಕ ಘೋಷಣೆ ಏನಾದರೂ ಇದೆಯೋ ಎಂದು ಕೇಳುತ್ತೇನೆ. ಇವೊತ್ತು ಮಧ್ಯಮ ವರ್ಗದ ಜನರು ಏನು ಹೇಳುತ್ತೇವೆ, ಉತ್ತಮ ವರ್ಗಕ್ಕೆ ಸೇರಿದಂತ ಜನರು ಎಂದು ಏನು ಹೇಳುತ್ತೇವೆ ಅವರಿಗೆ ಸಂತೋಷಪಡಿಸತಕ್ಕದ್ದು ಇದರ ಬಗ್ಗೆ ಮಾತನಾಡಿದ್ದಾರೆಯೋ ವಿನಹ ಯತಕಿಂಚಿತ್ತಾದರೂ ಆರ್ಥಿಕವಾಗಿ ಹಿಂದುಳಿದವರ ಬಗ್ಗೆ ಏನು ಹೇಳಿಲ್ಲ. ಇಷ್ಟು ಹೇಳಿದರೂ ನಮ್ಮ ಸ್ನೇಹಿತರು ಇನ್ನೂ ಅಲ್ಲೇ ಕುಳಿತಿದ್ದಾರೆ ನಾನು ಆ ದಿವಸವೇ ಅವರು ಹೊರಗೆ ಬರುತ್ತಾರೆ ಎಂದು ತಿಳಿದುಕೊಂಡಿದ್ದೆ ನಮ್ಮ ಸ್ನೇಹಿತರು ವಿಚಾರವಂತರು ಎಂದು ತಿಳಿದುಕೊಂಡಿದ್ದೆ ಅವರು ಲೋಕಸಭೆ ಪ್ರಾರಂಭ ಭಾಷಣ ಕೇಳಿದ ಕೂಡಲೇ ಅವರು ಹೊರಗಡೆ ಬರದೇ ಇನ್ನೂ ಅಲ್ಲೇ ಇದ್ದಾರೆ ಎಂದರೆ ನಾಚಿಕೆ ಬೇಡವೆ ಇವೊತ್ತು ನಾವು ಈ ದೇಶದಲ್ಲಿ ಯಾವ ಮಾರ್ಗದಲ್ಲಿ ಹೋಗುತ್ತಿದ್ದೇವೆ ಅದನ್ನು ನೋಡಬೇಕಾಗಿದೆ. ಉತ್ತರ ಪ್ರದೇಶದಲ್ಲಿ ಇಂದಿರಾ ಹಠಾವೋ ಎಂಬ ಒಂದೇ ಒಂದು ಪಾಯಿಂಟ್ ಮೇಲೆ ಚುನಾವಣೆ ನಡೆದು ಅವರು ಸಾಧಿಸಿದ್ದಾದರೂ ಏನು? ಒಂದು ಕಾರ್ಯಕ್ರಮ ಹಾಕಿಕೊಂಡಿದ್ದಂತ ಒಂದು ಪಕ್ಷದ ಸರ್ಕಾರವನ್ನು ಉರುಳಿಸಿ, ಅವರು ಬಡವರಿಗೆ ಕೊಟ್ಟಂತಾದ್ದು ಏನು ಎಂಬ ಬಗ್ಗೆ ವಿಚಾರವಂತರು ಯೋಚನೆ ಮಾಡಬೇಕು.

ಶ್ರೀ ಜಿ. ಪುಟ್ಟಸ್ವಾಮಯ್ಯ.—ಸ್ವಾಮಿ, ತಾವು ಈ ಅನುಕಂಪ ಎಲ್ಲಿ ಕೊಂಡು ಕೊಂಡಿದ್ದೀರಿ.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ. ತಮ್ಮ ಹತ್ತಿರ ಇದರ ಬಗ್ಗೆ ಹೇಳುವುದಿಲ್ಲ ನಮ್ಮ ಇಬ್ಬರು ಗೆಳೆಯರಿಗೆ ಮಾತ್ರ ಹೇಳುತ್ತಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ, ಆರ್ಥಿಕರಂಗದ ಬಗ್ಗೆ ಪ್ರಸ್ತಾಪ ಮಾಡಿ ಇನ್ನು ಹತ್ತು ವರ್ಷದ ಅವಧಿಯೊಳಗೆ ಬಡತನ ನಿರ್ಮೂಲನ ಮಾಡುತ್ತೇವೆ ಎಂದು ಪಣತೊಟ್ಟಿದ್ದಾರೆ.

ಶ್ರೀ ಎಸ್ ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ, ತಾವು ಯಾವ ಒಂದು ಆರ್ಥಿಕ ಕಾರ್ಯಕ್ರಮವನ್ನು ಚುನಾವಣೆಯಲ್ಲಿ ಹೇಳಿದ್ದೀರಿ ವೈಯಕ್ತಿಕವಾಗಿ ಹಠ ಸಾಧಿಸಲಿಕ್ಕೆ ಏನೋ ಒಂದು ಸಿದ್ಧಾಂತ ಮಾಡಿಕೊಂಡು ಬಂದಿರಿ ಇವೊತ್ತು ನಿಮಗೆ ಸರಿಯಾದಂತ ಒಂದು ಸಿದ್ಧಾಂತ ಬೇಡವೆ, ತಾವು ಒಂದು ಕೋಲು ಕುರುಗೋಲು ತೆಗೆದುಕೊಂಡು ರಾಜ್ಯದಲ್ಲ ಬಡತನ ನಿರ್ನಾಮ ಮಾಡಲಿಕ್ಕೆ ಹೊರಟಿದ್ದೇವೆ ಎಂದು ಹೇಳುವುದಾದರೆ, ಆ ಒಂದು ಸಿದ್ಧಾಂತ ಲೋಕಸಭೆಯಲ್ಲಿ ಬರಲಿಲ್ಲ ಎಂದರೆ ಅದು ದೇಶದ ದೌರ್ಭಾಗ್ಯ ಎಂದು ಹೇಳುತ್ತೇನೆ. ಇವೊತ್ತು ಯಾವುದೇ ಒಂದು ಕಾರ್ಯ ಮಾಡಬೇಕಾದರೂ ಹತ್ತು ನಿಮಿಷ ಯೋಚನೆ ಮಾಡಿ ಮಾಡಬೇಕು ಎಂದು ದೊಡ್ಡವರು ಹೇಳುತ್ತಾರೆ. ಈ ವಿಷಯವನ್ನು ಮಾನ್ಯ ಗೆಳೆಯರಾದ ಕೋಣಂದೂರು ಲಿಂಗಪ್ಪನವರಿಗೆ ಅಧ್ಯಕ್ಷರ ಮುಖಾಂತರ ಹೇಳುತ್ತೇನೆ. ಉತ್ತರ ಪ್ರದೇಶದ ಬಡ ಜನರು ಹರಿಜನ ಗಿರಿಜನರು ಇವೊತ್ತಿನ ದಿವಸ ದುಃಖಪಡುತ್ತಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸ್ವಾಮಿ, ತಾವು ಉತ್ತರ ಪ್ರದೇಶಕ್ಕೆ ಯಾವಾಗ ಭೇಟಿಕೊಟ್ಟು ಬಂದಿದ್ದು ?

ಶ್ರೀ ಎಸ್ ಎಂ. ಶೀರನಾಳಿ ಚಂದ್ರಶೇಖರ್.—ನಾನು ಅಲ್ಲಿಗೆ ಹೋಗಿ ಬಂದು ಮಾತನಾಡುತ್ತಾ ಇದ್ದೇನೆ. ಇದು ವಿಂಧ್ಯ ಪರ್ವತದಿಂದ ಈಚೆಗೆ ಏತಕ್ಕೆ ಬರಲಿಲ್ಲ, ಪಶ್ಚಿಮ ದೇಶದಿಂದ ಬಂದಂತ ಗಾಳಿ ಏನು ಇತ್ತು ಅದನ್ನು ವಿಂಧ್ಯ ಪರ್ವತ ತಡೆಹಿಡಿಯಿತು. ದಕ್ಷಿಣದಲ್ಲಿ ಸಮಾಜವಾದ ಸಿದ್ಧಾಂತದ ಮೇಲೆ ಚುನಾವಣೆ ನಡೆಯಿತು. ಇಂತಹ ಸಂದರ್ಭದಲ್ಲಿ ತಮ್ಮ ನಾಯಕರು ಹೇಳತಕ್ಕ

ಮಾತು ಏನು, ಆಸೇತುಹಿಮಾಚಲಪರ್ಯಂತ ಒಂದೇ ರೀತಿ ಸರ್ಕಾರ ಇರಬೇಕು, ಚುನಾವಣೆಯನು ನೆಡೆಸಬೇಕು, ಅಯ್ಕೆಯಾದಂತ ಶಾಸನಸಭೆಗಳನ್ನು ರದ್ದುಪಡಿಸಬೇಕು, ಇದು ಯಾವ ಆಜ್ಞೆ ? ಇವರಿಗೆ ಅಧಿಕಾರವನ್ನು ಯಾರು ಕೊಟ್ಟರು ?

ಶ್ರೀ ಎಸ್. ವೈ. ಪಾಟೀಲ್.—ಸ್ವಾಮಿ, ತಮಗೆ ಎಷ್ಟು ವರ್ಷಕ್ಕೆ ಅಯ್ಕೆ ಕೊಟ್ಟಿದ್ದು ಅದನ್ನು ತಿಳಿಸಬೇಕು.

SRI B. B. SAYANK(BELGAUM).—Mr. Chairman, Sir, while opposing this resolution tabled by hon'ble Member Sri B. Basavalingappa, I offer my observ tions.

The Governor has not mentioned in his address the Maharashtra-Karnataka Border dispute which is pending for mere than 20years The present Governor while he was the Home Minister of the Government of India in the year 1973 assured to the Lok Sabha at the instance of Shri Madhu Dandavate, M.P. that he would solve this border issue before the General Election to the Lok Sabha Now the elections are over but this question is not solved. The persons who give this promise in the Parliament have not fulfilled their promise. Is it not treacherous on the part of the High command including the former prime Minister not to have kept their promise ? I am now going to request the present Prime Minister-Shri Morarji Desai, who is well acquainted with this problem, to solve this border problem immediately.

Now coming to the general election, though the Congress Party and the Janatha Party have fought the elections in a peaceful manner and in a sportive manner, but the Congress Party is routed out in the Northen States of India. The reasons are wellknown to everybody. The main reason is the emergency. The reasons for the proclamation of the emergency are very many. During the emergency the bureaucrats have ruled the country and have misused these emergency power and have brought the havoc. They had sent innocent persons to Jail. I know Shri Madhu Dantavati who is the present Railway Minister was sent Jail and kept there for 19 months. His wife was also arrested and sent to Jail. Their only son who was 16 years old was studying in the college at Ahmedabad. This boy was put to lot of difficulties as he was bereft of the care of their parents. Smt. Durga Bhagawat who is a president of Marathi Sahitya Sammelan, was also arrested under MISA in Maharashtra. Even the Editors of newspapers were sent to Jail This is how the people were meted out with justice. The Congress Party not only committed faults but they had committed the greatest blunder. Shri Jayaprakash Narain was repeatedly telling the then Government to withdraw the emergncy but his advice was not given heed. In the implementation of the family plannig programme the party in power had committed excesses and inflicted untold miseries upon the unwilling people to

undergo sterilisation. I had received a letter from a friend of mine who had informed that though he had two children but his wife was taken to the c inic and she was sterilised. After two days his wife died leaving the two children orphans. He has claimed for compensation from the Government. But I know the Government would not give him the compensation. Their misdeeds have recoiled on their election. The Muslims and the Harijans have all voted for the Janatha Party. They have rejected the Congress Party because of the excesses commited by them in the implementation of the family planning programme Another contributing factor for the debacle is the rift amongst the congressmen in all the States, Each group was fighting against another group. Ultimately their group rivalry has resulted in the rout of the Congress.

There was another young gentleman Mr. Sanjay Gandhi who is also responsible for the falls the congress. Whenever he used to visit the State, people were garlinding him and party bosses were praising him to the sky without testing his bona fides. Once he came from Delhi to Bombay in a plane which was reserved in the name of Shir. V. N. Gadgil State minister of India. May I ask: what right Mr. Sanjay Gandhi had to offer his five point programme for implementation. His activities were also responsible for the downfall of the Congress Party Now that man has said after the debaclie that he would resign from politics. He is also responsible for the defeat of her mother Smt. Indira Gandhi, in the election The people have taught them a good lesson and their 30 years of rule has come to an end. At the time of allotting seats the Congress Party always thought of rich poeple. The people who have suffered during the independence movement were ignored. There were many stalwarts in the Congress Party but their claims were rejected The Congress came to power because of the stalwarts like Mahathma Gandhi-Father of the Nation, Motilal Nehru, Villabhai Patel Moulana Azad Pandit Neharu, Subhashchandra Bose C.R. Dass. These people had joined the Congress leaving their lucrative legal practice. They had dedicated their life in the service of our-nation. That is why those people are held in high esteen even today. We know these are great personalities and we were respecting them But after 30 years, who are those that are joining the Congress party ? Previously there used to be honest people with integrity in the Congress Party. But today, 90 persent of those who have joined the congress party are selfish and motivated. That is why people are testing as to who should be their leaders I know one former Union Minister from Belgaum *

MR. CHAIRMAN.-Refeence to name may be expnged and not recorded

---

* word/words expressed not recorded as, ordered by the chair.

SRI B. B. SAYANEK.—If the leaders are motivated and selfish how can the Nation survive or the Party survive? Therefore, the people should choose good persons at the time of elections.

The Janata Party have selected a good team. The present prime Minister was the ex-Chief Minister of Bombay He was honest, clean and a very good administrator though he is head-strong.

SRI K. H. RANGANATH (Minister for Co-operation) :—May I bring to the notice of the hon'ble member that he had ordered to fire 2,500 rounds when he was the Chief Minister of Bombay? Not only that, but the order was to shoot at sight. Never in the history of India such orders were there, and because of that Sri C. D. Deshmukh, the then Union Finance Minister resigned and had made a statement in the Lok Sabha It is there in the proceedings of the Lok Sabha,

MR. CHAIRMAN.—It is an allegation against the Prime Minister; it is not proper.

SRI K. H. RANGANATH.—Sir, I am sorryf I am not making any allegation against the Prime Minister. That was the statement made by Sri C. D. Deshmukh in the Lok Sabha, and he resigned on account of that. It is there in the proceedings of the Lok Sabha.

MR. CHAIRMAN.—It is not proper to quote all that here.

SRI K. H. RANGANATH.—I am only stating the facts, Sir.

SRI KONANDUR LINGAPPA.—That must have been done on the instructions of the then Prime Minister, Pandit Jawaharlal Nehru;

(MADAM SPEAKER in the Chair)

SRI B. B. SAYANAK.—Madam Speaker I was talking about the Janata Party, I know that when agitation was going on in Bombay in 1956-there was a very big mob-the Chief Minister of Bombay Sri Morarji Desai ordered to the police to shoot at sight. But after 25 or 30 years, he is now very wise. You are all well aware how he managed to overcome the tussel between Sri Jagjivan Ram and others He has selected a very good team. To mention a few, I know Sri Madhu Dandavate, Sri George Fernandez and others. They are above corruption and they will certainly do good to the Nation, to the labour-class and to the down-trodden.

I do not know why my hon. friend Sri D. B. Kalmankar is so sensitive against Sri Jayaprakash Narayan. When my friend was a member of the P.S.P., he was praising him and was always consulting him even in small matters. Now, I cannot understand, why he is criticising him. Sri Jayaprakash Narayan has done yeoman service

to the Nation. Last year, even Smt. Indira Gandhi and Sri Sanjay Gandhi were saying that he was a traitor, but now they are saying that he is a great man. A person, who has done yeoman service to the Nation is really a great man. I do not know why my friend Sri Kalmankar is touchy about it.

MADAM SPEAKER.—The hon'ble member may please talk on the subject and come to his point.

SRI D. B. KALMANKAR.—I said only about the new role that he had adopted.

SRI B. B. SAYANAK.—About 20 point programme announced by the previous Prime Minister, Indira Gandhi some attention was given to this programme Further they have given 5 point programme. This 5 point programme. has not come into existence at all in almost all the States why he talk about 20 point programme There is a Committee in Belgaum District for 20 point programme All those programmes are good. Under these programmes private buses were nationalised. During election period you have given a promise to private persons to play buses from Belgaum to Bangalore Private Bus Owners are going to ply buses from Belgaum to Bangalore from 10th of this month. There is a Committee to see that the programmes under this scheme are put in to implementation In this Committee M. L. As and M. PS were put as members. But after sometimemembers of the Committee were changed and only Congress members were given chances to be as members why this discrimination ? of course the 20 point programme is good. But you are not giving chances to M. L. As and M. Ps who are the representatives of the people.

Regarding land reforms, our friends are telling they have brought a legislation First in Karnataka which has benefitted the poor I want to bring to the notice of the August House, that Sri Morarji Desai who was the Chief Minister in Bombay State in the year 1948, had brought this legislation Advocates were allowed to appear before the Tahsildar, Divisional Commissioner and Tribunals. Have you given the same facilities now ? You have not given a chance to the Local M. LAs in the Tribunal but you have given chances only to your Congress people I know some cases in which three local M. L. C and M L. As of Congress party have been given chances, why this discrimination , There are many complaints about the behaviour of members of the Tribunal Some of the members have been nominated by the Chief Minister and some have been removed why all these things have happened By doing so, do you mean to say that you have done some justice to the poor People No. poor people have been harassed at the hands of the Tribunal members The members of the Tribunals

are minting money. During the time of election, the members of the Tribunal went to the village and asked the people to vote for their party.

MADAM SPEAKER.—That might be in your District.

SRI B. B. SAYANK.—No. Everywhere The members asked the people to votefor Congress. How the people could tolerate this kind of canvasing. Do you mean to say that you are the only people who could serve the people and not others, You were not encouraging the opposition, but you were encouraging only your party people, The people have come to know that you were doing greatest industries to the public and the poor.

I am asking the Government through you Madam Speaker why they have not abolished the Capitation fee from the students who are being admitted to the Medical Colleges, the capitation fee of Rs one lakh was Charged per seat in J N. Medical College Belgaum. Even for seats in Homeopathy Colleges. Rs 10,000 is being demended as capitation fees Rs 5000 is being demanded in the B. Pharma College for every admission. If the same thing is continued the poor boy or girl cannot dream of getting admission to any one of these college Perhaps it may be the intension or the Government to help only to boys and girls coming from rich families. There are already unemployment among the Medical Graduates. There are about 3.000 and odd people who are unemployed. I want to know from the Government how many members are willing to go to villages and serve there I think none of them is willing they are willing to open dispensaries in Cities and big town. I Suggest to Government that before giving them Degrees they must impose a condition clause that the students should serve villagers for atleast one year. You must give Degrees to those who have served one year in villages.

The Government is spending 112 crores for education You are spending too big a sum We will agree with your idea because it is for education Though it is a big amount we will certainly agree with you. I am repeatedly bringing to the notice of the Government that the building constructed by the earst while Sangli State is in a dilapidated condition and action should be taken to do some renovation. The building is about to be collapsed. But the Government has not taken any action for the last 6 years I know that this work is not taken up because the Marathi children are housed there. There are so many Marathi Schools like that. The Government is not taking action to renovate or re-construct them. There is a funny thing to be brought to your notice. The teachers are being appointed in the month of February and Text Books are made available in the same month or a month earlier is

If this the fate of the affair, the students will be put into much hard ship and it may be difficult for them to copy up with the studies. Their studies will be affected. You are not doing justice to the students. Immediately after the vacation you must release the textbooks and post the teachers Please do not give scope for criticisms.

We have passed a lagislation for prevention of beggers, The Belgaum Municipality is Collecting Rs 3 lakhs for this purpose What Provision have you made for the beggars ? have you constructed houses for the beggars No. Beggars are still there giving trouble to the public. Therefore, the Government must start constructing houses for beggars and do justice to the people and also to the beggars.

Lastly, I do not know when the election to the Assembly is going to be head. Let there be election at any time we are going to face the election. We are not worried about this election.

6-P.M.

Election to the Municipalities Taluk Boards and Village Panchayat are held up since 8. years. You must hold elections immediately to these local bodies. There have been no elections in respect of Municipalities. For instance there are no elections held in respect of Belgaum and Nipani Municipalities There is no election in Belgaum city municipality for the last three years and in Nipani for the last 14years So, I request the Government to take initiative and give a chance to people. We have been say ing this all these days. Decentralisation of powers should be there. Power is vested only with the Officers. What is this bureaucracy doing? They are making money and fleecing the poor people. So,I request the Government to hold the elections immediately for the Municipalities Taluk Boards and Village Panchayats. With these words, I thank the Speaker for giving me an opportunity to speak.

MADAM SPEAKER.—The House now stands adjourned to meet again tomorrow at 1 p. m.

The House adjourned at two Minutes past Six of the Clock to meet again at One of the Clock on Tuesday the 5th April 1977.

WD 6460—GPB—500-24-6-1977